WRIT PETITIONS PENDING BEFORE THE HIGH COURT

591. SRI H. B. JWALANAIAH (Hassan).—

Will the Minister for Law, Labour and Parliamentary Affairs be Pleased to State:—

(*a*) the number of writ petitions filed by the Officials pending before the High Court as on date;

(*b*) the number of writ petitions filed by agriculturists pending before the High court as on date,

(*c*) the number of writ petitions filed by the Non-officials and Non- Agriculturists pending before the High Court as on date?

SRI K. PUTTASWAMY.—Minister for Law, Ladour and Parliamentray Affairs.

(*a*) 2,304.

(*b*) and (*c*) Information not available.

MR. DEUTY SPEAKER:

According to the Programme of votingof demands for grant, Medical and Public Health Demands shouldhave been taken up tomorrow along with other Demands. It has been suggested that the Demand on Medcial and Public Health may be discussed separately and accordingly these demands will be taken on Wednesday, 25th March 1970 between .830 a.m. and 11. 30 a. m.

MYSORE CO-OPERATIVE SOCIETIES (AMENDMENT)BILL 1970- INTRODUCTION

SRI. T. M. NADAGOWDA:— (Minister for Development) SIR, I introduce the Mysore Co-operative Societies (Amendment) Bill, 1970 which has been published under rule 64 of the Rules of procedure and Conduct of Business in the Lgislative Assembly.

MR. DEPUTY SPEAKER:—THE BILL, is introduced.

(Mr. Speaker in The Chair)

STATEMENT BY SRI S. SIVAPPA: REGARDING DELEGATION TO DELHI ON THE MYSORE MAHARASTHRA BORDER DISPUTE.

† ಶ್ರೀ ಎಸ್, ಶಿವಪ್ಪ, (ಶ್ರವಣಬೆಳಗೊಳ):– ಮಾನ್ಯ ಅಧ್ಯಕ್ಷರೇ, ಮಹಾಜನ್ ವರದಿಯನು ಸಂಪೂರ್ಣವಾಗಿ ಕಾರ್ಯಗತ ಮಾಡುವ ವಿಚಾರವನ್ನು ಕೇಂದ್ರಸರ್ಕಾರಕ್ಕೂ ಮತ್ತು ಪಾರ್ಲಿಮೆಂಟ್ ಸದಸ್ಯರಿಗೂ ಮನವರಿಕೆ ಮಾಡಿಕೊಡುವುದಕೋಸ್ಕರವಾಗಿ ಈ ಮನೆಯ ಮತ್ತು ಮೇಲ್ಮನೆಯ ಸರ್ವಪಕ್ಷ ಗಳ ನಿಯೋಗ ವೊಂದನ್ನು ತಾವು ಮತ್ತು ವಿಧಾನಪರಿಷತ್ತಿನ ಸಭಾಪತಿಯವರು ಸೇರಿಕೊಂಡು ರಚನೆಮಾಡಿ ದೆಹಲಿಗೆ ಹೋಗಬೇಕೆಂದು ಆಜ್ಞಾಪಿಸಿದಿರಿ. ಮತ್ತು ಆ ನಿಯೋಗಕ್ಕೆ ನನ್ನನ್ನು ನಾಯಕನನ್ನಾಗಿ ಮಾಡಿ, ಅವರನ್ನು ಕರೆದುಕೊಂಡು ಹೋಗುವ ಭಾರವನ್ನು ನನಗೆ ವಹಿಸಿದಿರಿ ಆದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ನಿಯೋಗ ದೆಹಲಿಗೆ ಹೋಗುವ ಬಗ್ಗೆ ಎರಡು ಉದ್ದೇಶ ಇತ್ತು. ಮೊದಲನೆಯದಾಗಿ ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವಂತೆ ಕೇಂದ್ರಸರ್ಕಾರದ ಪ್ರಧಾನಿಯವರಿಗೂ, ಗೃಹಮಂತ್ರಿಗಳಿಗೂ ಮತ್ತು ರಾಷ್ಟ್ರಾಧ್ಯಕ್ಷರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಭೇಟಿ ಮಾಡಿ ತಿಳಿಸುವುದು, ಎರಡನೆಯದಾಗಿ ಸರ್ಕಾರದ ಮತ್ತು ಮೈಸೂರಿನ ಜನತೆಯ ಕಳವಳ ಏನಿದೆ ಎಂಬುದನ್ನು ಪಾರ್ಲಿಮೆಂಟ್ ಸದಸ್ಯರಿಗೂ ಮತ್ತು ಇಂಟರನಲ್ ಅಫೈರ್ಸ್‌ನ ಕಮಿಟಿಗೆ ಸೇರಿದಂತಹ ಮಂತ್ರಿಗಳಿಗೆ ತಿಳಿಸುವುದಾಗಿತ್ತು. ಇತ್ತೀಚೆಗೆ ಬಂದಂಥ ವರದಿಯ ಪ್ರಕಾರ ಮಹಾಜನ್ ವರದಿಯನ್ನು ಬದಿಗೊತ್ತಿ ಬೇರೆ ರೀತಿಯ ತೀರ್ಮಾನವನ್ನು ಕೇಂದ್ರಸರ್ಕಾರದವರು ಕೈಕೊಳ್ಳುತ್ತಾರೆಂಬ ಕಾರಣದಿಂದ ಒಂದು ನಿಯೋಗ ವನ್ನು ದೆಹಲಿಗೆ ಕಳಿಸುವುದು ಅವಶ್ಯಕವೆಂದು ಈ ಶಾಸನಸಭೆಗೆ ಕಂಡುಬಂದಿದ್ದರಿಂದ ನನ್ನ ನಾಯಕತ್ವದಲ್ಲಿ ಒಂದು ನಿಯೋಗವನ್ನು ಕಳಿಸಲಾಗಿತ್ತು. ಆದರ ಪ್ರಕಾರ ನಾವು ಈ ರಾಷ್ಟ್ರದ ಪ್ರಧಾನಿಯವರನ್ನು ಮತ್ತು ಗೃಹಮಂತ್ರಿಗಳನ್ನು ಭೇಟಿಮಾಡಿ ಮನವಿ ಪತ್ರಗಳನ್ನು ಸಲ್ಲಿಸಿದೆವು. ಆ ಮನವಿ ಪತ್ರಗಳನ್ನು ಮಾನ್ಯ ಅಧ್ಯಕ್ಷರು ಆಚ್ಚು ಹಾಕಿಸಿ ಎಲ್ಲಾ ಶಾಸನಸಭಾ ಸದಸ್ಯರಿಗೂ ಹಂಚಿದ್ದಾರೆಂದುನಾನು ಭಾವನೆ ಮಾಡಿದ್ದೇನೆ. ಆ ಮನವಿ ಪತ್ರಗಳಲ್ಲಿರುವ ಅಂಶಗಳನ್ನು ಈಗ ನಾನು ಮತ್ತೊಮ್ಮೆ ಓದಿ ಈ ಸಭೆಯ ಕಾಲವನ್ನು ವೆಚ್ಚ ಮಾಡುವುದಕ್ಕೆ ನಾನು ಹೋಗದೆ ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈ ರಾಜ್ಯದ ಹಿತವನ್ನು ಎಷ್ಟರಮಟ್ಟಿಗೆ ಸಾಧನೆ ಮಾಡಬೇಕೆಂಬ ಅಂಶವನ್ನು ಸುಮಾರು ೪೦ ನಿಮಿಷಗಳ ಕಾಲದವರೆಗೆ ಪ್ರಧಾನಿಯವರ ಮುಂದೆ ಚರ್ಚೆಮಾಡಿ ಹೇಳಿದ್ದೇನೆ. ಮೈಸೂರು ಮತ್ತು ಮಹಾರಾಷ್ಟ್ರಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಯಾರ ಒತ್ತಾಯಕ್ಕೂ ಮಣಿಯದೆ ನಿಷ್ಪಕ್ಷಪಾತವಾದ ಮನೋಭಾವನೆಯಿಂದ ನಿರ್ದಾರ ಕೈಕೊಳ್ಳಬೇಕೆಂದು ಪ್ರಧಾನಿಯವರಿಗೆ ಹೇಳಿದ್ದಲ್ಲದೆ ಮತ್ತೊಂದು ವಿಚಾರವನ್ನು ಅವರ ಮುಂದೆ ಹೇಳಿದೆವು. ಏನೆಂದರೆ ಮುಂಬೈ ಮಹಾರಾಷ್ಟ್ರದ ಒಂದು ರಾಜಕೀಯ ಕೇಂದ್ರವಾಗಿದೆ, ಮುಂಬೈ ಮಹಾರಾಷ್ಟ್ರದ ರಾಜಧಾನಿಯಾಗಿದೆ, ಇಲ್ಲಿಂದ ಅನೇಕ ಮಹಾನಾಯಕರು ಆರಿಸಿ ಬಂದಿದ್ದಾರೆ, ಅವರು ಮಹಾಜನ್ ವರದಿ ನಮಗೆ ಬೇಕಾಗಿಲ್ಲವೆಂದು ಹೇಳಿ ಹೊಸ ನಿರೂಪವನ್ನು, ಹೊಸ ತತ್ವವನ್ನು ತಮಗೆ ಬೇಕಾದಂತೆ ಅಡಕ ಮಾಡಿಕೊಂಡು ಅದರ ಪ್ರಕಾರ ವಾದ ಮಾಡುವ ಕುಶಲತೆಯನ್ನು ಹೊಂದಿದ್ದಾರೆ ಮತ್ತು ಆ ಶಕ್ತಿಯನ್ನು , ಸಹ ಹೊಂದಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಆ ಒಂದು ಮಟ್ಟದ ನಾಯಕರು ಇಲ್ಲದಿರಬಹುದು ಮತ್ತು ನಮ್ಮ ನಾಯಕರಲ್ಲಿ ವಾದ ಮಾಡತಕ್ಕಂಥ ವಾಚಾಳತ್ವ ಇಲ್ಲದಿರ ಬಹುದು, ಆದರೆ ಮೈಸೂರಿನ ಜನತೆಯ ಹೃದಯದಲ್ಲಿ ಮಹಾಜನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಮಿಡಿಯುತ್ತಿದೆ ಎಂಬುದಾಗಿ. ಆದಕ್ಕೆ ಪ್ರಧಾನಿಯವರು ನಗುತ್ತಾ ಉತ್ತರಕೊಟ್ಟರು, ನಾನು ಯಾರ ಒತ್ತಡಕ್ಕೂ ಮಣಿಯುವುದಿಲ್ಲ ಮಹಾರಾಷ್ಟ್ರದ ಮತ್ತು ಮೈಸೂರಿನ ವಿಚಾರವನ್ನು ತಿಳಿದಿದ್ದೇನೆ ಏಲ್ಲವನ್ನೂ ಕೂಲಂಕಷವಾಗಿ ವಿಚಾರ ಮಾಡಿ ನ್ಯಾಯಬದ್ಧವಾದ ತೀರ್ಮಾನಕೊಡುತ್ತೇನೆ ಈಗ ಏನು ವರದಿ ಬಂದಿದೆ ಅದೇ ಅಖೈರ್ಲ್ಲ, ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ನನಗೆ ಅರಿವಾಗಿದೆ, ಆದರೆ ಈ ವಿಚಾರವಾಗಿ ಮಾತನಾಡಲು ನಿಮ್ಮ ಮುಖ್ಯಮಂತ್ರಿಗಳು ಏತಕ್ಕೆ ಬರಲಿಲ್ಲ ಎಂದು ಕೇಳಿದರು. ಅದಕ್ಕೆ ನಾವು ಮುಖ್ಯ ಮಂತ್ರಿಗಳು ಸರ್ಕಾರದ ಮಟ್ಟದಲ್ಲಿ ಬಂದು ಮಾತನಾಡುತ್ತಾರೆ ನಾನು ಶಾಸನಸಭೆಯ ಆದೇಶವನ್ನು ಹೊತ್ತು ಬಂದಿದ್ದೇನೆ. ಶಾಸನಸಭೆಯಲ್ಲಿ ಏನು ಅಭಿಪ್ರಾಯಪಡಲಾಗಿದೆ ಅದನ್ನು ನಿಮ್ಮ ಮುಂದಿಡುವುದಕ್ಕೆ ಬಂದಿದ್ದೇನೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಇದೇ ಮಾತನ್ನು ನಾವು ರಾಷ್ಟ್ರಾಧ್ಯಕ್ಷರನ್ನು ಮೀಟ್ ಮಾಡಿದಾಗ ಕೂಡ ಹೇಳಿದ್ದೇವೆ. ಅವರು ನಮ್ಮ ಮೈಸೂರಿನ ರಾಜ್ಯಪಾಲರಾಗಿದ್ದಂತಹವರು. ಅವರಿಗೂ ನಾವು ನಮ್ಮ ವಿಷಯಗಳನ್ನು ಹೇಳಿದ್ದೇವೆ.

SRI B. B. SAYANAK:—Is it necessary that Shivappa should speak on this subject in the House when a circular has already been issued regarding the work done by the delegation at NewDelhi? We have already got the circular.

MR. SPEAKER:—I have permitted SRI Shivappa to Speak.

ಶ್ರಿ ಎಸ್. ಶಿವಪ್ಪ—ಶಾಸನ ಸಭೆಯ ನಿಯೋಗದ ಪರವಾಗಿ ಈ ಕಾರ್ಯವನ್ನು ನಾವು ಮಾಡಿದ್ದೇವೆ. ನಾವು ಕೆಂದ್ರದ ಮಾನ್ಯ ಗೃಹಮಂತ್ರಿಗಳಾದ ಶ್ರೀ ಚವಾನ್ ಅವರನ್ನು ಭೇಟಿ ಮಾಡಿ ಅವರಿಗೆ ನಮ್ಮ ಶಾಸನ ಸಭೆಯ ಆತಂಕ ಮತ್ತು ನಿಲುವು ಏನಿದೆ ಎಂಬುದನ್ನು ಅವರಿಗೆ ಹೇಳಿದ್ದೇವೆ. ನೀವು ಮಹಾರಾಷ್ಟ್ರದ ನಾಯಕರಾಗಿರುವುದರಿಂದ ನೀವು ಯಾವುದೇ ನಿರ್ಧಾರವನ್ನು ಕೈಗೊಂಡರೂ ಕೂಡ ಮಹಾರಾಷ್ಟ್ರದ ಪರವಾಗಿ ಕೈಗೊಳ್ಳಬಹುದು ಎಂಬ ಭಾವನೆ ಇದೆ. ಆದ್ದರಿಂದ ನೀವು ರಾಷ್ಟ್ರದ ನಾಯಕರಾಗಿ ವರ್ತಿಸಬೇಕು ಎಂದು ಹೇಳಿದಾಗ ಇಲ್ಲ ಆ ರೀತಿ ಪ್ರಭಾವ ಬೀರುವ ಪ್ರಶ್ನೆಯೇ ಇಲ್ಲ. ಎಲ್ಲವನ್ನೂ ಮಂತ್ರಿಮಂಡಲಕ್ಕೆ ಬಿಟ್ಟಿದ್ದೇನೆ ನಾನು ತೆರೆದ ಮನಸ್ಸಿನಲ್ಲಿದ್ದೇನೆ. ಎಂದು ಮಾನ್ಯ ಗೃಹಸಚಿವರು ನಮಗೆ ಭರವಸೆಯನ್ನು ಕೊಟ್ಟರು ಈಗ ಯಾವುದೇ ಒಂದು ವಿಷಯವಾಗಲಿ, ಅದು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ಅಂತಿಮವಾಗಿ ತೀರ್ಮಾನವಾಗಬೇಕು. ಆದ್ದರಿಂದ ನಾವು ಮುಖ್ಯವಾಗಿ ಮಹಾಜನ್ ಕಮಿಷನ್ನಿನ ವರದಿಯ ವಿಚಾರವನ್ನು ಅಲ್ಲಿರತಕ್ಕ ಪಾರ್ಲಿಮೆಂಟ್ ಸದಸ್ಯರಿಗೆ ಮನವರಿಕೆ ಮಾಡಿ ಅವರ ಮನ ಒಲಿಸಬೇಕು ಎಂದು ಪಾರ್ಲಿಮೆಂಟಿನ ಎಲ್ಲಾ ರಾಜಕೀಯ ಮುಖಂಡರನ್ನೂ ಮತ್ತು ಪಾರ್ಲಿಮೆಂಟಿನ ಎಲ್ಲಾ ಸದಸ್ಯರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಭೇಟಿಮಾಡಿ ಅವರಿಗೆ ನಮ್ಮ ನಿಲುವು ಏನು, ನಮ್ಮ ಸ್ಟಾಂಡ್ ಏನು, ಸತ್ಯಾಂಶ ಏನಿದೆ ಏನ್ನುವುದನ್ನು ಅವರಿಗೆ ಮನ ಮುಟ್ಟುವರೀತಿಯಲ್ಲಿ ಹೇಳಿ ಅವರ ಮನಸ್ಸನ್ನು ಒಲಿಸುವುದಕ್ಕೆ ಒಳ್ಳೆಯ ಪ್ರಯತ್ನವನ್ನು ನಾವು ಮಾಡಿ ಬಂದಿದ್ದೇವೆ. ಅಷ್ಟಕ್ಕೇ ನಾವು ಪೂರ್ಣವಾಗಿ ನಂಬತಕ್ಕದ್ದಲ್ಲ ನಾವು ನಮ್ಮ ಪ್ರಯತ್ನವನ್ನು ಮುಂದುವರಿಸಬೇಕು. ಮಹಾರಾಷ್ಟ್ರದವರ ಕಡೆಯಿಂದ ಪ್ರಯತ್ನ ಈ ಬಗ್ಗೆ. ಬಹಳ ಜೋರಾಗಿ ನಡೆಯುತ್ತಿದೆ. ಮಹಾರಾಷ್ಟ್ರದಿಂದ ದೆಹಲಿಗೆ ಅನೇಕ ಡಿಲಿಗೇಷನ್‌ಗಳು ಹೋಗಿವೆ. ಅನೇಕ ರಾಜಕೀಯ ಮುಖಂಡರು ಅಲ್ಲಿದ್ದಾರೆ ಅವರು ಪ್ರಚಾರಕಾರ್ಯವನ್ನು ಬಹಳ ಬಿರುಸಾಗಿ ಮಾಡುತ್ತಿದ್ದಾರೆ ಮೈಸೂರು ಶಾಸನ ಸಭೆಯ ನಿಯೋಗ ದಹಲಿಗೆ ಹೋಗಿ ಎಷ್ಟರಮಟ್ಟಿಗೆ ತನ್ನ ಕಾರ್ಯವನ್ನು ಮಾಡಿದೆ ಎನ್ನುವುದನ್ನು ನಾನು ಕೊಟ್ಟರತಕ್ಕ ವರದಿಯಲ್ಲಿ ಸಾಕಷ್ಟು ವಿವರವಾಗಿ ಹೇಳಿದೆ. ನಮ್ಮ ನಿಯೋಗ ದೆಹಲಿಗೆ ಹೋಗಿ ಸಾಕಷ್ಟು ಕೆಲಸ ಮಾಡಿಕೊಂಡು ಬಂದಿದೆ. ಮಹಾರಾಷ್ಟ್ರದವರ ಅನೇಕ ನಿಯೋಗಗಳು ದೆಹಲಿಗೆ ಹೋಗಿ ಆಮೂಲಕ ಅವರು ಸಾಕಷ್ಟು ಪ್ರಚಾರವನ್ನು ಮಾಡಿದ್ದಾರೆ. ಆದ್ದರಿಂದ ಅದನ್ನು ತಡೆಗಟ್ಟುವ ರೀತಿಯಲ್ಲಿ ನಮ್ಮ ರಾಜ್ಯದ ಬೇರೆ ನಿಯೋಗಗಳು ಕೂಡ ದೆಹಲಿಗೆ ಹೋಗಿ ಅಲ್ಲಿ ಪಾರ್ಲಿಮೆಂಟ್ ಸದಸ್ಯರ ಮನ ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಕೇಂದ್ರ ಸರ್ಕಾರದವರ ಮನ ಒಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಬಗ್ಗೆ ನಾವು ಎಷ್ಟು ಪ್ರಯತ್ನವನ್ನು ಮಾಡುವುದಕ್ಕೆ ಸಾಧ್ಯವಿದೆ ಅಷ್ಟು ಪ್ರಯತ್ನವನ್ನು ಮಾಡಬೇಕು. ಮಹಾಜನ್ ಕಮಿಷನ್ನಿನ ವರದಿಯ ವಿಚಾರವನ್ನು ಎಲ್ಲರಿಗೂ ನಾವು ಸಾಕಷ್ಟು ಮನವರಿಕೆ ಮಾಡಿಕೊಟ್ಟಿದ್ದೇವೆ. ನಾವು ಪ್ರಧಾನಿಯವರನ್ನು ಕಂಡು ಸುಮಾರು ೪೦ನಿಮಿಷಗಳ ಕಾಲ ಅವರೊಡನೆ ಮಾತಾನಾಡಿದೆವು. ಅವರಿಗೆ ನಮ್ಮ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಒಂದು ವಿಷಯ ಮಾತ್ರ ಪ್ರಧಾನಿಯವರ ಮನಸ್ಸಿನಲ್ಲಿತ್ತು ಅದು ಏನೆಂದರೆ ಮಹಾಜನ್ ಕಮಿಷನ್ನಿನ ವರದಿಯಿಂದ ಈ ಗಡಿ ವಿಷಯ ಓಪನ್ ಆಗಿದೆ. ಈಗ ಅದನ್ನು ಮುಚ್ಚಬೇಕಾಗಿದೆ ಎಂದು ಹೇಳಿದ್ದಾರೆ. ಮತ್ತು ಈ ಗಡಿ ವಿಷಯದಲ್ಲಿ ತೆರೆದ ಮನಸ್ಸಿನಿಂದ ನಾನು ನೋಡುತ್ತೇನೆ ಎಂದುಹೇಳಿದ್ದಾರೆ ನಾವು ಪ್ರಧಾನಿಯವರಿಗೆ ಹೇಳಿದೆವು ಮಹಾಜನ್ ಕಮಿಷನ್ನಿನ ರಚನೆಗೆ ಒಪ್ಪಿ ಒಂದುದೊಡ್ಡ ರಿಯಾಯಿತಿಯನ್ನು ಮೈಸೂರು ಮಾಡಿಕೊಟ್ಟಿದೆ ಮೈಸೂರಿನ ನಾಯಕರು ಮಹಾರಾಷ್ಟ್ರದವರ ಒತ್ತಾಯಕ್ಕೆ ಮಣಿದು ಮಹಾಜನ್ ಕಮಿಷನ್ನಿನ ನೇಮಕಕ್ಕೆ ಒಪ್ಪಿದ್ದೇ ತಪ್ಪಾಯಿತು ರೀ ಆರ್ಗನೈಜೇಷನ್ ಆಕ್ ಪ್ರಕಾರ ಗಡಿ ವಿಷಯ ಏನು ನಿರ್ಧಾರವಾಗಿತ್ತೋ ಅದೇ ಇರಬೇಕಾಗಿತ್ತು. ಆದರೆ ಎನೋ ಒಂದು ಕಾಂಪ್ರಮೈಜ್ ಮೇಲೆ ಮಹಾಜನ್ ಕಮಿಷನ್ ನೇಮಕವಾಗಿ, ಅವರಿಂದ ವರದಿ ಬಂದಿದೆ ಈಗ ಅದು ನಮ್ಮ ಅನುಕೂಲವಾಗಿಲ್ಲ ಎಂದು ಅದರ ಮೇಲೆ ಮತ್ತೊಂದು ಒಡಂಬಡಿಕೆ ಬೇಡ ಎಂದು ನಾವು ತಮಗೆ ನಿರ್ದಿಷ್ಟವಾದ ನಿಲುವನು ಪ್ರಧಾನ ಮಂತ್ರಿಗಳಿಗೆ ತಿಳಿಸಿ ಈ ವಿಷಯದಲ್ಲಿ ನ್ಯಾಯವಾದ ತೀರ್ಮಾನವನ್ನು ತೆಗೆದುಕೊಳ್ಳಿ ಎಂದು ಅವರಿಗೆ ನಾವು ಹೇಳಿದ್ದೇವೆ ನಾವು ಅನೆಸ್ಟಾಗಿ ಶಕ್ತಿ, ಯೀರಿ, ಎಲ್ಲಾ ಒಗ್ಗಟ್ಟಿನಿಂದ ಕೆಲಸ ಮಾಡಿ ಬಂದಿದ್ದೇವೆ ಈ ಕೆಲಸಗಳನ್ನು ಮಾಡುವುದಕ್ಕೆ ಅನೇಕರಿಂದ ಹೆಚ್ಚಿನ ಪ್ರೋತ್ಸಾಹಬಂದಿದೆ ಪತ್ರಿಕಾ ವರದಿಗಾರರೂ ಕೂಡ ನಮಗೆ ಉತ್ಸಾಹವನ್ನು ಕೊಟ್ಟು ನಮ್ಮ ಕೆಲಸಗಳಿಗೆ ಬೆಂಬಲವನ್ನು

(ಶ್ರೀ ಎಸ್. ಶಿವಪ್ಪ)

ಕೊಟ್ಟಿದ್ದಾರೆ. ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಮತ್ತು ನಮ್ಮ ನಿಯೋಗದ ಸದಸ್ಯರ ಸಹಕಾರ ಕೊಟ್ಟು ಒಮ್ಮತದಿಂದ ಕೆಲಸ ಮಾಡಿದ್ದಕ್ಕಾಗಿ ಅವರಿಗೂ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ:—(ಹರಿಹರ) ಸನ್ಮಾನ್ಯ ಅಧ್ಯಕ್ಷರೇ, ಈಗತಾನೆ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶಿವಪ್ಪನವರು ಈಸಭೆಗೆ ಕೊಟ್ಟಿರತಕ್ಕ ವರದಿಯ ವಿಚಾರದಲ್ಲಿ ಹೇಳಿದ ಮಾತುಗಳನ್ನು ನಾನು ಕೇಳಿದೆ. ಅವರು ಹೇಳಿದ್ದನ್ನು ನಾನು ಬಹಳ ಚಿತ್ತ ಮನಸ್ಸಿನಿಂದ ಲಾಲಿಸಿದೆ. ಅವರು ಹೇಳಿದ್ದರಲ್ಲಿ ನನಗೆ ಒಂದು ಸಂತೋಷವಾಯಿತು. ಆ ಸಂತೋಷದ ವಿಷಯ ಏನೆಂದರೆ ಪ್ರಧಾನ ಮಂತ್ರಿಗಳು ಈ ವಿಷಯದಲ್ಲಿ ತೆರೆದ ಮನಸ್ಸಿನಿಂದ ಇದ್ದಾರೆ. ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಈ ಪ್ರಶ್ನೆಯನ್ನು ಬಗೆಹರಿಸಬೇಕು ಎನ್ನುವುದು ನನ್ನ ಮನಸ್ಸಿನಲ್ಲಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿದರು ಎಂಬುದನ್ನು ಶ್ರೀಮಾನ್ ಶಿವಪ್ಪನವರು ಹೇಳಿದ್ದು ಬಹಳ ಸಂತೋಷದ ವಿಷಯ. ಶ್ರೀಮಾನ್ ಶಿವಪ್ಪನವರು ಅವರ ರಿಪೋರ್ಟಿನಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ ಮತ್ತು ಕೆಲವು ವಿವರಗಳನ್ನೂ ಕೊಟ್ಟಿದ್ದಾರೆ. ಅವರು ಯಾರು ಯಾರನ್ನು ನೋಡಿದ್ದಾರೆ ಎನ್ನುವುದನ್ನು ಸಹ ಅವರು ಹೇಳಿದ್ದಾರೆ. ಅವರು ಮಾಡುವ ಕೆಲಸವನ್ನು ಮನಃಪೂರ್ವಕವಾಗಿ ಮಾಡಿದ್ದಾರೆ. ಆದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ ಈಗ ಶ್ರೀಮಾನ್ ಶಿವಪ್ಪನವರು ಹೇಳಿದಮೇಲೆ ಈಗಲಾದರೂ ಪ್ರಧಾನಿಗಳು ಮರಾಠಿಗರ ಪರವಾಗಿ ಅವರಿಗೆ ಅನುಕೂಲವಾಗಿದ್ದಾರೆ ಎನ್ನುವ ಒಂದು ವಾದ ಏನಿದೆ, ಮತ್ತು ರಾಜ್ಯದಲ್ಲಿ ಪ್ರಧಾನಿಗಳ ಮೆಲೆ ಏನು ಒಂದು ಅಪಪ್ರಚಾರ ನಡೆಯುತ್ತಿದೆ ಅದು ನಿಲ್ಲಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಈವರ್ಷ ಸರ್ಕಾರದವರು ಒಂದು ನಿಯೋಗವನ್ನು ದೆಹಲಿಗೆ ಕಳುಹಿಸಿದ್ದರು. ಕಾರಣಾಂತರ ನಾವು ಹೋಗುವುದಕ್ಕೆ ಆಗಲಿಲ್ಲ. ಈಗ ಎರಡನೆ ಆಯೋಗ ದೆಹಲಿಯಲ್ಲಿದೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಶಿವಪ್ಪನವರ ಪಕ್ಷದವರಿಗೂ ನಮಗೂ ತತ್ವದಲ್ಲಿ ಯಾವ ಭೇದವೂ ಇಲ್ಲ. ಅವರದ್ದು ಅಸೆಂಬ್ಲಿಯ ನಿಯೋಗ ಎಂದು ನಾನು ತಿಳಿದಿದ್ದೇನೆ. ಆದರೆ ಈಸಭೆಯ ನಾಯಕರು ಹೋಗಿಲ್ಲ ಮುಖ್ಯ ಮಂತ್ರಿಗಳೇ ನಿಯೋಗದ ನಾಯಕತ್ವವನ್ನು ವಹಿಸಬೇಕಾಗಿತ್ತು ಈಸಭೆಯ ಅಣತಿ ಪ್ರಕಾರ ಅವರು ಸರ್ಕಾರ ನಡೆಸಬೇಕೇಹೊರತು ಅದುಬಿಟ್ಟು ಅಲ್ಲ. ಈಬಗ್ಗೆ ನಮ್ಮ ಅಭಿಪ್ರಾಯ ನಿಖರವಾದ ಅಭಿಪ್ರಾಯ· ಇಂಥಾ ಒಂದು ಡಿಲಿಗೇಷನ್ನಿನ ನಾಯಕತ್ವವನ್ನು ಸೂಕ್ತವಾಗಿ ಅವರೇ ಈ ಮನೆಯ ನಾಯಕರಾಗಿ ಈಸಭೆಯ ಸರ್ವಪಕ್ಷವನ್ನು ಒಳಗೊಂಡಿರತಕ್ಕಂಥ ಸದಸ್ಯರನ್ನು ಕರೆದು ಕೊಂಡು ಒಂದು ಹೈ ಪವರ್ ಡಿಲಿಗೇಷನ್ ತೆಗೆದುಕೊಂಡು ಹೋದರೆ ಒಳ್ಳೆಯದು ಎಂದು ನಮ್ಮ ಮನಸ್ಸಿನಲ್ಲಿತ್ತು ಆದರೆ ಮುಖ್ಯ ಮಂತ್ರಿಗಳ ನಿಯೋಗ ಇಲ್ಲಿಯವರೆಗೂ ಹೋಗಿಲ್ಲ. ಇವೊತ್ತಿನ ದಿವಸ ದೆಹಲಿಯಲ್ಲಿ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾಗ ವಹಿಸುತ್ತಾರೆ. ಆಗ ಅವಕಾಶವನ್ನು ಉಪಯೋಗಿಸಿಕೊಂಡು ಈ ಗಡಿ ವಿಷಯದಲ್ಲಿ ಪ್ರಧಾನ ಮಂತ್ರಿಗಳೊಡನೆ ಮಾತನಾಡುತ್ತಾರೆ ಎಂದು ನಾನು ಕೇಳಿದ್ದೇನೆ. ಪತ್ರಿಕೆಯಲ್ಲಿ ಕೂಡ ಈ ವಿಚಾರ ಬಂದಿದೆ. ಇದು ಅವರ ಕರ್ತವ್ಯ. ಅವರು ಪ್ರಧಾನ ಮಂತ್ರಿಗಳನ್ನು ನೋಡಿ ಅವರು ಕೆಲಸವನ್ನು ಮುಂದುವರಿಸಿಕೊಂಡ ಬರಲಿ ಒಳ್ಳೆಯ ಕಾರ್ಯವನ್ನು ಮಾಡಲಿ ಅವರು ಈ ಕಾರ್ಯದಲ್ಲಿ ಜಯಶೀಲರಾಗಲೀ ಎಂದು ನಾನು ಹಾರೈಸುತ್ತೇನೆ. ಈ ಗಡಿ ವಿಚಾರದಲ್ಲಿ ನಾವೇನು ವಿರೋಧವಾಗಿಲ್ಲವೆಂದು ನಾನು ಹೇಳಿದ್ದೇನೆ ನಾವು ಒರೆದಿದ್ದೇವೆ ಆ ಬಗ್ಗೆ ಒಂದು ನಿರ್ಣಯವನ್ನು ಮಾಡಿದ್ದೇವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಆದರ ಒಂದು ನಕಲನ್ನೂ ಕೂಡನಾವು ಕಳುಹಿಸಿಕೊಟ್ಟಿದ್ದೇವೆ. ನಾವು ನಮ್ಮ ನಿರ್ಣಯದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ ಮಹಾಜನ್ ಕಮಿಷನ್ ವರದಿಯನ್ನು ಈ ಸಭೆಯಲ್ಲಿ ಒಪ್ಪಿಕೊಂಡಮೇಲೆ ನಾವು ಅದಕ್ಕೆ ವಿರೋಧವಾಗಿಲ್ಲ ಎಂದು. ನಾವು ಕಳುಹಿಸಿದಂತಹ ನಿರ್ಣಯವನ್ನೇ ಅನುಸರಿಸಿ ಬೆಳಗಾಮಿನ ನಿಯೋಗದವರು ಒಂದು ನಿರ್ಣಯವನ್ನು ಮಾಡಿ ಪ್ರಧಾನ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಅವರ ನಿರ್ಣಯಕ್ಕೂ ನಮ್ಮ ನಿರ್ಣಯಕ್ಕೂ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ಮಾತ್ರ ಹೇಳುತ್ತೇನೆ. ಈ ಕಾರ್ಯ ಜಯಪ್ರದವಾಗಿ ಆಗಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳು ನಿಯೋಗದ ನಾಯಕತ್ವವನ್ನು ವಹಿಸಬೇಕು. ಆ ಡೆಲಿಗೇಶನಿನಲ್ಲಿ ನೀವು ಇಂಜೆಸಾಗಿ, ನಾವು ಡಪ್ಲಿಗಳಾಗಿ ಬರುತ್ತೇವೆ ಮತ್ತು ನಾವು ಬಂದಾಗ ನಿಮಗೆ ಬೆಂಬಲ ಕೊಡುತ್ತೇವೆಂದು ಹೇಳಿದ್ದೇವೆ. ಈಗ ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆಂಬುದಕ್ಕೆ ನಮ್ಮ ನಿರ್ಣಯದ ಒಂದು ವಾಕ್ಯವನ್ನು ಓದುತ್ತೇನೆ.

We have said :

"Therefore, this committee approves the Stand taken by the party on the floor of the House at the time

of passing the resolution sponsored by one of the opposition parties in the Mysore Legislature. In the absence of proper appraisal of the reported proposals of the Government of India and the proper appreciation of the past events and also in the absence of complete understanding between the Government on one side and the opposition parties on the other, as to the future course of action, it was difficult for the party to give its consent to the above mentioned resolution. The operative portion of which was neither discussed made know to the our party prior to the introduction of the motion. That this committee strongly feels.....

SRI K. H. SRINIVAS: On a point of order Sir ಈಗ ಮೊದಲು ಹೋಗಿದ್ದಂತಹ ನಿಯೋಗದ ನಾಯಕರಾದ ಮಾನ್ಯ ಶಿವಪ್ಪನವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ ಅದಕ್ಕೆ ಹೊಂದಿಕೊಂಡು ಒಂದು ಹೇಳಿಕೆಯನ್ನೂ ಕೊಟ್ಟಿದಾರೆ. ನಾನು ತಿಳಿದುಕೊಂಡೆ, ಅದರ ಬಗ್ಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ನೀವು ಅವಕಾಶ ಕೊಟ್ಟಿದ್ದೀರಿ ಎಂದು ಇವರು ಆ ರಿಪೋರ್ಟಿನ ಬಗ್ಗೆಯಾಗಲ್ಲಿ, ಅಲ್ಲಿ ಮಾಡಲಾದ ಕೆಲಸದ ಬಗ್ಗೆಯಾಗಲಿ. ವಿವರ ಕೇಳುವ ಬದಲು, ತಮ್ಮ ಪಕ್ಷದ ನಿಲುವನ್ನು ಹೇಳಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುತ್ತೇನೆ.

MR. SPEAKER : There is some force in the point of order raised by Hon. Member Sri K.H. Srinivasa I gave an opportunity to the Hon. Leader of the Congress-party to ask for some clarifications. The stand taken by his party is very well known and it has been stated by him on many an occasion. Now I request hon; Member Sri Siddaveerappa to confine himself to clarifications, if any.

SRI H. SIDDAVEERAPPA :— I am not repeating even a single word.....

Sir K. H. PATIL: I rise to a point of order, Sir ಸದಸ್ಯರು ಕ್ಲಾರಿಫಿಕೇಶನ್ ಕೇಳಬೇಕಾದರೆ, ಅದಕ್ಕೆ ಹಿನ್ನಲೆ ಬೇಕಾಗುತ್ತದೆ. ಆದು ಸಭೆಯ ಎದುರಿಗೆ ಇದ್ದರೂ, ಭಾಷಣ ಮಾಡುವಂತಹ ಮಹನೀಯರು ಕ್ಲಾರಿಫಿಕೇಶನ್ ಕೇಳುವುದು ಸೂಕ್ತ. ಮಾನ್ಯ ಶಿವಪ್ಪನವರು ಮಾಡಿದಂತಹ ಕೆಲಸದ ಶ್ಲಾಘನೆಯನ್ನು ಅವರು ಮಾಡಿ, ಆ ಶ್ಲಾಘನೆಯ ಜೊತೆಗೆ ಮುಖ್ಯಮಂತ್ರಿಯವರೂ ಅಲ್ಲಿಗೆ ಹೋಗಿದ್ದರೆ ಸಮರ್ಪಕವಾಗಿತ್ತು ಎಂದು ಅವರು ಹೇಳುತ್ತಿದ್ದಾರೆ. ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ ಅಷ್ಟೆ.

MR. SPEAKER: There is no point of order. All Hon. Members are bound by the resolution that has been passed by this House.

ಶ್ರೀ ಎಚ್. ಎನ್ ನಂಜೇಗೌಡ :- ತಾವು ಈಗ ಒಂದು ಮಾತು ಹೇಳಿದ್ದೀರಿ. ಈಗ ಹೋಗಿ ಬಂದಂತಹ ನಿಯೋಗದಲ್ಲಿ. ಮತ್ತು ಎರಡನೆಯದಾಗಿ ಹೋದ ನಿಯೋಗದಲ್ಲಿ ಇಂಡಿಕೇಟಿನವರು ಹೋಗಿಲ್ಲ.

MR. SPEAKER:—The Hon Member need not make such unnecessary remarks.

ಶ್ರೀ ಎಚ್. ಸಿದ್ದವೀರಪ್ಪ:— ನಮ್ಮ ಪಕ್ಷದ ನಿರ್ಣಯದಲ್ಲಿ ಮಾಡಿದ ಒಂದೆರಡು ವಾಕ್ಯಗಳನ್ನು ಇಲ್ಲಿ ಹೇಳುತ್ತೇನೆ.

"That this Committee strongly feels that the Government of Mysore themselves ought to have taken the lead in sponsoring a resolution before the Legislature with the consent of all other political parties and other independent members of the Legislature, as was done in 1967. Also it would have been better if tae Leader of this House, namely, the Chief Minister of Mysore State, had taken the responsibility to lead the delegation himself. Notwithsthstanding the affirmation made by the Chief Minist r, inside as well as outside the Legislature, to stand by the Mahajan Commission,s recommendations, the committee feels that Ministry is shirking to take full responsibility in this matter.

'. That this committee is convinced that it is in the interest of the Nation in general and other States in particular that all political parties including the Ministry should think and act unitedly keeping aside the party considerations, if the boundary dispute is to be settled in conformity with the unanimous decision taken by the Assembly in 1967.

Therefore this committee resolved that its co-operatien would be readily extended to all the parties in the legislature and the Ministry in finding out a just solution to the problems. "

This is the stand taken by our party and we stand by it.

ಶ್ರೀ ಬಿ. ಗಂಗಣ್ಣ:— ಮಾನ್ಯ ಸಿದ್ಧವೀರಪ್ಪನವರು, ಅವರ ಕಮಿಟಿಯಲ್ಲಿ ಪಾಸ್ ಮಾಡಿರತ್ಕ ರಿಸೊಲ್ಯೂಷನ್ನು ಓದಿದ ೀವಿಯನ್ನು ನೋಡಿದರೆ, ಯುನಾನಿಮಸ್ ಆಗಿ ಅಸೆಂಬ್ಲಿಯಲ್ಲಿ ರಿಸೊಲ್ಯೂಶನ್ ಪಾಸ್ ಮಾಡುವುದಕ್ಕೆ ಮುಂಚೆ ಎಲ್ಲಾ ಪಕ್ಷದ ಲೀಡರ್ಸ್‌ನ್ನು ಕನ್‌ಸಲ್ಟ್ ಮಾಡಬೇಕಾಗಿತ್ತೆಂಬ ಅಭಿಪ್ರಾಯ ಕೊಡುತ್ತದೆ. ಅದರಲ್ಲೂ ಮುಖ್ಯಮಂತ್ರಿಯವರು ಎಲ್ಲರನ್ನು ಕರೆಯಲಿಲ್ಲವೋ ಎಂಬ ಸಂಶಯ ಮೂಡಿ ಸುತ್ತದೆ. ಇದು ಈ ಸಂದರ್ಭಕ್ಕೆ ಉಚಿತವೋ. ಅನುಚಿತವೋ. ಎಂಬುದನ್ನು ತಾವು ಇತ್ಯರ್ಥ ಮಾಡ ಬೇಕಾಗಿದೆ.

MR. SPEAKER: I have already stated that nobody can go against the resolution already passed by this House.

SRI H. SIDDAVEERAPPA:—Sir, I have already stated that our party stand by that resolution. There is another point to which I would like to refer in the report presented by hon. Sri Sivappa.

SRI K. PUTTASWAMY (Minister for Law, Labour and Parliamentary Affairs):- I just want to know whether the Hon. Chair is permitting a discussion on this subject since the hon. Member Sri Siddaveerappa is raising some debatable points.

MR. SPEAKER:—h I have permitted him to ask only clarifications.

Sri H. SIDDAVEERAPPA: Sir, I am only referring to the report presented by hon. Leader of Opposition Sri Sivappa. He has stated that;

> " Nobody can subscribe to such theories These ideas have to be properly explained to the Member of parliaments Suitab l literature end maps explaining the case of Mysore very uccinctly should be circulated to the Members of parliament constantly.

I happen to meet just this morning one of the Members of parli ament and he also felt the same difficulty in representing the case without relevant materials Sir, I have been requesting right from the beginning to give us three maps. One is a map of Mysore and the other is the map showing the position as it would be if the Mahoajan Commission's report is accepted and the third one is a map showing as to what would be the position if the so-called reported proposals of the Central Government are accepted. Unless we know these things, I cannot understand how we are to represent to case and also understand the problems?

Lastly, I would like to say that let the Hon. Chief Minister make it clear as to whether he is willing to lead a delegation including our party or not? If he is not willing to take our party, than we will consider as to what we should do.

ಶ್ರೀ ಎಚ್.ಎನ್. ನಂಜೇಗೌಡ;—ನಾನು ಕ್ಲಾರಿಫಿಕೇಷನ್ ರೂಪದಲ್ಲಿ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ನಮ್ಮ ನಿಯೋಗದವರು ಪ್ರಧಾನಿಯವರನ್ನು ಭೇಟಿಯಾದಾಗ ಪ್ರಧಾನಿಯವರು ಎರಡು ಅಂಶಗಳನ್ನು ತಿಳಿಸಿದರು. ಮಹಾಜನ್ ವರದಿಯನ್ನು ವ್ಯತ್ಯಾಸಮಾಡದೆ ಅದು ಇದ್ದಹಾಗೆಯೇ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದು. ಒಂದು ಇನ್ನೊಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, he is feeling shy to come to Delhi ಎಂದು ಪತ್ರಿಕೆಯಲ್ಲಿ ವರದಿಯಾಗಿತ್ತು. ಇದು ನಿಜವೇ?

ಶ್ರೀ ಟಿ.ಆರ್. ಶಾಮಣ್ಣ;—ಸ್ವಾಮಿ, ಈಗ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರನ್ನು ನಾವು ಯಾವ ಸಂದರ್ಭದಲ್ಲಿಯೂ ದೂರಿಲ್ಲವೆನ್ನುವ ವಿಷಯವನ್ನು ಸ್ಪಷ್ಟವಾಗಿ ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ;—ತಾವು ದೂರಿದಿರಿ ಎಂದು ನಾನು ಹೇಳಲಿಲ್ಲ.

ಶ್ರೀ ಟಿ.ಆರ್. ಶಾಮಣ್ಣ:—ಕಾಂಗ್ರೆಸ್ ಜನರಲ್ ಸೆಕ್ರೆಟರಿಯವರಾದ ಮಾನ್ಯ ಶ್ರೀ ಶುಕರಾನಂದರವರು ನಮ್ಮ ಜೊತೆಗೆ ಇದ್ದರು. ನೀವು ಶ್ರೀಮತಿ ಇಂದಿರಾಗಾಂಧಿಯವರನ್ನು ಬೈಯುತ್ತಾ ಇದ್ದರೆ ಹೇಗೆ ಅವರಿಂದ ಕೆಲಸವಾಗುತ್ತದೆ? ಎಂದು ಕೇಳುತ್ತೀರಿ. ನಾವು ಅವರಿಗೆ ಈ ರೀತಿಯಾಗಿ ಹೇಳಿವೆವು. "Well Madam, on account of the differences between the Indicate and Syndicate there is a feeling in the State that you may take a political decision and not a judicial decision." The Prime Minister told us that she has kept an open mind and there is nothing like Indicate or Syndicate differences. All the while, the team was considerate to the

(ಶ್ರೀ ಟಿ. ಆರ್. ಶಾಮಣ್ಣ)

Prime Minister and we respected her. On the other hand, if Hon. Member Sri Siddaveerappa and others also had come with us it would have been more effective to represent that we are all united in our efforts to demand justice to Mysore State. Even now, I request Hon. Sri Siddaveerappa not to make politics in this matter.

SRI H. SIDDAVEERAPPA:—I repudiate the insinuation made by the Hon. Member. There is no politics or any other thing to make.

ಶ್ರೀ ಬಿ. ಪಿ. ಗಂಗಾಧರ್:—ಡೆಲಿಗೇಷನ್ ಹೋದಂಥ ಜನ ಕೇಂದ್ರ ಸರ್ಕಾರದ ಲೀಡರ್‌ಗಳನ್ನು ಭೇಟಿಮಾಡಿದ್ದಾರೆ. ಮಾನ್ಯ ಶ್ರೀ ಜಗಜೀವನರಾಂ ಅವರನ್ನು ನೋಡಿದ್ದಾರೆ. ಆದರೆ ಈಗ ಬಾರ್ಡರ್ ಡಿಸ್‌ಪ್ಯೂಟ್ಸ್ ಇರುವ ಸಂದರ್ಭದಲ್ಲಿ ಮಹಾರಾಷ್ಟ್ರದ ಲೀಡರ್ ಆಗಿರುವ ಮಾನ್ಯ ಶ್ರೀ ವೈ.ಬಿ. ಚವಾಣ್ ಅವರು ಸಾಕಷ್ಟು ಪ್ರಭಾವ ಬೀರುವುದಕ್ಕೆ ಸಾಧ್ಯವಿದೆ. No man must be a Judge of his own cause. That is the fundamentals of natural justice.

ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಮಹಾರಾಷ್ಟ್ರ ಡಿಸ್‌ಪ್ಯೂಟ್ ಬಂದಾಗ, ಕ್ಯಾಬಿನೆಟ್ ಸಬ್ ಕಮಿಟಿ ಮೆಂಬರಾಗಿರತಕ್ಕ ಮಾನ್ಯ ಶ್ರೀ ಚವಾಣರು ಪಾರ್ಟಿಸಿಪೇಟ್ ಮಾಡಬಾರದು ಎಂದು ಟೀಕೆ ಮಾಡಿದ್ದೀವೆ. ಶ್ರೀಮತಿ ಇಂದಿರಾಗಾಂಧಿಯವರ, ಮಾನ್ಯ ಶ್ರೀ ಜಗಜ್ಜೀವನರಾಂ ಅವರ ಮತ್ತು ಇತರೇ ಮಂತ್ರಿಗಳ ಮುಂದೆ ಈ ವಿಷಯ ಬಂದಾಗ್ಗೆ, ಅವರ ಅಭಿಪ್ರಾಯವನ್ನು ಕನ್‌ಸಿಡರ್ ಮಾಡಬಾರದೆಂದು ನೀವು ರಿಕ್ವೆಸ್ಟ್ ಮಾಡಿದ್ದೀರಾ?

†ಶ್ರೀ ಎಸ್. ಶಿವಪ್ಪ:—ಶ್ರೀಮಾನ್ ಎಚ್.ಎನ್. ನಂಜೇಗೌಡರು ಮಹಾಜನ್ ಕಮಿಷನ್ ವರದಿಯನ್ನು ಇಂಪ್ಲಿಮೆಂಟ್ ಮಾಡುವ ವಿಷಯದಲ್ಲಿ ಪ್ರಧಾನಿಯವರು ಯಾವರೀತಿಯಾಗಿ ಸ್ಪಷ್ಟಪಡಿಸಿದ್ದಾರೆಂದು ಹೇಳಿದುದನ್ನು ನಾನು ಕೇಳಿದ್ದೇನೆ. ಅದನ್ನು ನನ್ನ ವರದಿಯಲ್ಲಿಯೂ ಹೇಳಿದ್ದೇನೆ. ಅವರ ಅಭಿಪ್ರಾಯ ಏನಿದೆಯೆಂದರೆ, ಮಹಾಜನ್ ಕಮಿಷನ್ ವರದಿಯನ್ನು ಇಂಪ್ಲಿಮೆಂಟ್ ಮಾಡುವ ಕಾಲದಲ್ಲಿ ಮಹಾರಾಷ್ಟ್ರ ಮತ್ತು ಮೈಸೂರು ಎರಡು ಕಡೆಯವರನ್ನು ವಿಚಾರಮಾಡಿ ಗರಿಷ್ಠ ಮಟ್ಟದಲ್ಲಿ ಡಿಸ್‌ಸ್ಯಾಟಿಸ್‌ಫ್ಯಾಕ್ಷನ್ ಆಲ್ಲದ ರೀತಿಯಲ್ಲಿ ತೀರ್ಮಾನಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಯಾವುದನ್ನೂ ಸ್ಪಷ್ಟಮಾಡಿಲ್ಲ. ಏನಿದ್ದರೂ ನಾನು ತೆರೆದ ಮನಸ್ಸಿನಿಂದ ಇದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಭೇಟಿ ಮಾಡಲಿ, ವಿಚಾರ ಮಾಡುತ್ತೇನೆ ಎಂಬುದಾಗಿ ತೆರೆದ ಮನಸ್ಸಿನಿಂದ ಅವರು ಹೇಳಿದ್ದಾರೆ.

ಇನ್ನೊಂದು ವಿಷಯ ಹೇಳಿದರು. Why is he shy of meeting me ಎಂದು ಹೇಳಿದರು. ಅವರು ಟ್ರಂಕ್ ಕಾಲ್ ಹಾಕಿದಾಗ ನನಗೆ ಸ್ವಸ್ಥವಿಲ್ಲವೆಂದು ಹೇಳಿದ್ದೀರಿ. ಯಾವಾಗ ಅಲ್ಲಿಗೆ ಹೋಗುತ್ತೇನೆ ಎನ್ನುವುದಕ್ಕೆ ಪತ್ರ ಬರೆದಿದ್ದೇನೆ ಮತ್ತು ಆ ಪತ್ರ ಈಗ ಡೆಲ್ಲಿಗೆ ಹೋಗಿದೆಯೆಂದು ಹೇಳಿದ್ದೀರಿ ನಾವು ಮಾನ್ಯ ಶ್ರೀ ಚವಾಣರನ್ನು ಭೇಟಿ ಮಾಡಿದಾಗ, ಮಾನ್ಯ ಶ್ರೀ ಗಂಗಾಧರ್‌ರವರು ಹೇಳಿದ ವಿಷಯವನ್ನು ಅವರ ಮುಖಕ್ಕೆ ಹೇಳಿದ್ದೇವೆ. ನೀವು ಮಹಾರಾಷ್ಟ್ರದಲ್ಲಿಯೇ ಹುಟ್ಟಿದ್ದೀರಿ, ಗೃಹ ಮಂತ್ರಿಗಳಾಗಿದ್ದೀರಿ ಆದ್ದರಿಂದ ಮೈಸೂರು ಮತ್ತು ಮಹಾರಾಷ್ಟ್ರ ಗಡಿ ವಿಚಾರದಲ್ಲಿ ಏನು ತೀರ್ಮಾನ ತೆಗೆದುಕೊಂಡರೂ ಆದರ ಬಗ್ಗೆ ಅನುಮಾನ ಬರುತ್ತದೆ, ರಾಷ್ಟ್ರದ ನಾಯಕರಾಗಿ ನೀವು ಆ ಮಟ್ಟಕ್ಕೆ ಇಳಿಯಬಾರದು ಎಂದು ಹೇಳಿದ್ದೇವೆ. ಆಗ ಮಾನ್ಯ ಶ್ರೀ ಚವಾಣ್ ಅವರು ಹೇಳಿದರು, ನಾನು ಮಹಾರಾಷ್ಟ್ರದಲ್ಲಿ ಹುಟ್ಟಿದ್ದರೂ ಈ ಸಮಸ್ಯೆ ನನ್ನ ರಾಜ್ಯಕ್ಕೆ ಮತ್ತು ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಹಾಗೆ ಇರುವುದರಿಂದ ಈ ವಿಚಾರವನ್ನು ಕ್ಯಾಬಿನೆಟ್ಟಿಗೆ ಒಟ್ಟಿದ್ದೇನೆ. ಏಕೆಂದರೆ ಆಬ್ಜೆರು ತೀರ್ಮಾನ ಮಾಡವುದು ಪಾರ್ಲಿಮೆಂಟ್. ಅವರ ಮನಸ್ಸನ್ನು ಒಲಿಸುವುದಕ್ಕಾಗಿ ನಾನು ಮಹಾರಾಷ್ಟ್ರದವನಾಗಿ ವರ್ತಿಸುವುದಿಲ್ಲವೆಂಬ ವಿಚಾರವನ್ನು ನಮ್ಮ ಮುಂದೆ ಹೇಳಿದ್ದಾರೆ.

Budget Estimates for 1970-71—Demands for grants, Demand No. 15 21, 23, 25 an 53.

Now we will take up demands for grants.

MR. SPEAKER:—The time available for debate would be 100 minutes for the Congress side including replies by the Ministers, 30 minutes for Congress (R) and 50 minutes for the SVD. The whips of the respective parties may kindly give me the list of speakers from each party allotting time according to this distribution. The total time available is 3½ hours.

SRI P. M. NADGOWDA (Minister for Development):—Sir, on the recommendation of the Governor, I beg to move:—

> "That a sum not exceeding Rs. 2,29,42,000 be granted to defray the charges which will come in course of payment during the financial year for the period ending 31st day of March 1971, in respect of 'Rural Development".

MR. SPEAKER:—Motion moved.

> "That a sum not exceediug Rs. 2,29,42,000 be granted defray the charges which will come in course of payment during the financial year for the period ending 31st day of March 1971, in respect of 'Rural Development".

Along with this Demand the other Demands *viz* Nos. 23, 25, 15 and 53 are demand to have been moved and are before the House for discussion.

ಶ್ರೀ ಕೆ. ಹೆಚ್. ಪಾಟೀಲ್ (ಹುಬ್ಬಳ್ಳಿ):—ಸನ್‌ಮಾನ್ಯ ಸಭಾಪತಿಗಳೇ, ಈವೊತ್ತಿನ ದಿವಸ ನಮ್ಮ ಎದುರಿಗೆ ಪಂಚಾಯಿತಿ ರಾಜ್ ಡೆವಲಪ್‌ಮೆಂಟ್ ಮತ್ತು ಕೋ-ಆಪರೇಟೀಪ್ ಮಂತ್ರಿಯವರು ಮಂಡಿಸಿರುವ ಮನವಿಗಳನ್ನು ಪ್ರಭಲವಾಗಿ ವಿರೋಧಿಸುತ್ತಾ, ಕೆಲವಾರು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಅನೇಕ ವರ್ಷಗಳವರೆಗೆ ಈ ಸಭೆಯ ಪ್ರತಿ ಸದಸ್ಯರು ಬಹುತೇಕ ಆ ಭಾಗ ಮತ್ತು ಈ ಭಾಗದ ಎಲ್ಲ ಸದಸ್ಯರೂ ಸಹ ಯಾವುದಾದರೂ ಒಂದು ಖಾತೆಯನ್ನು ಹೆಚ್ಚು ಪ್ರಭಲವಾಗಿಟೀಕಿಸಿದ್ದರೆ, ರಚನಾತ್ಮಕವಾದ ಸಲಹೆಗಳನ್ನು ಪ್ರತಿವರ್ಷವೂ ಕೊಡುತ್ತಾ ಬಂದಿದ್ದರೆ ಅದು ಸಹಕಾರ ಖಾತೆ ಒಂದೇ ಎಂದು ನೇರವಾಗಿ ಹೇಳಬಹುದು. ಆದರೂ ಸಹ ದುರ್ದೈವದಿಂದ ಯಾವ ತರಹದ ಸುಧಾರಣೆಗಳನ್ನೂ ನಾವು ಕಾಣಲಿಲ್ಲ. ಇದಕ್ಕೆ ಮಾನ್ಯ ಮಂತ್ರಿಯವರ ಪ್ರಕೃತಿಯಲ್ಲಿ ನೆಟ್ಟಗೆ ಇರಲಿಲ್ಲವೋ, ಅಜೂಬಾಜು ಜನರ ಉಪದೇಶದಿಂದಲೋ ಅಥವಾ ಸಹಕಾರ ಚಳುವಳಿ ಜನತಾ ಬಜಾರ್ ರೀತಿಯಲ್ಲಿ ನಡೆದುದರಿಂದ ಅವರ ಮನಸ್ಸು ಬೇರೆ ಕಡೆಗೆ ಹೋದುದರಿಂದ ಸುಧಾರಣೆ ಮಾಡುವುದಕ್ಕೆ ಆಗಲಿಲ್ಲವೋ ನನಗೆ ತಿಳಿಯದು. ಆಡದ್ದನ್ನು ಮಾಡಬಾರದು, ಅಂದದನ್ನು ಪುನಃ ರಿಪೀಟ್ ಮಾಡುವುದು ಸರಿಯಲ್ಲ, ಆದರೆ ಒಮ್ಮೆ ತಪ್ಪು ಮಾಡಿದ್ದು ಮತ್ತೆ ಮಾಡಬಾರದು ಎನ್ನುವುದನ್ನು ಜಾರಿಯಲ್ಲಿ ತರಲು ಈ ಮಂತ್ರಿಮಂಡಲದಲ್ಲಿ ಸಾಧ್ಯವಿಲ್ಲ. ಅನೇಕ ಸಲ ಸಹಕಾರ ಎನ್ನುವ ಹೆಸರಿಗೆ ನಿಜವಾದ ಸಹಕಾರ ಉಪಯೋಗಿಸಿಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ. ಸಹಕಾರ ಚಳುವಳಿ ಬಗ್ಗೆ ನೂಡುವ ಟೀಕೆಯನ್ನು ನೋಡಿದರೆ ನಿಜವಾಗಿ ಸಹಕಾರ ಕಾರ್ಯಕರ್ತರು ತಲೆ ತಗ್ಗಿಸಿ ಕೂಡುವ ಪರಿಸ್ಥಿತಿ ಇದೆ. ಅನೇಕರು ಮಾತನಾಡುವಾಗ ಹೇಳುತ್ತಾರೆ, ಒಂದು ಸಹಕಾರ ಸಂಘ ಹುಟ್ಟಿದರೆ ಅದು ಸರಕಾರದ ರೊಕ್ಕ ತಿನ್ನಲಿಕ್ಕೆ ಹುಟ್ಟಿತು, ಸರಕಾರದ ಆಶ್ರಯದೊಳಗೆ ಯಾರನ್ನೋ ಇಟ್ಟುಕೊಂಡು ಮಂತ್ರಿಗಳ ಕಡೆಯಿಂದ ಹಣಗಿಟ್ಟಿಸಲು ಪ್ರಾರಂಭವಾದ ಸಂಸ್ಥೆ ಎನ್ನುವ ಮನೋಭಾವನೆ ಇರುತ್ತದೆ. ಇಡೀ ಸಹಕಾರ ಚಳುವಳಿಯನ್ನು ಬೇರೆ ಹಿತಕ್ಕಾಗಿ ಉಪಯೋಗಿಸುವ ನಿಜವಾದ ಶಕ್ತಿ ನಮ್ಮಲ್ಲಿ ಇಲ್ಲ. ವೀರೇಂದ್ರ ಪಾಟೀಲರೂ ಏನಾದರೂ ತಪ್ಪಾಗಿದ್ದರೆ ನನ್ನ ಗಮನಕ್ಕೆ ತಂದರೆ ಹಿಂದೂಮುಂದೂ ನೋಡುವುದಿಲ್ಲ ನಮ್ಮ ಹಿತ ಕಾಯುವುದಿಲ್ಲ, ಎಂದು ನಿರ್ದಾಕ್ಷಿಣ್ಯವಾಗಿ ಅವರಿಗೆ ಶಿಕ್ಷಿಸಲಿಕ್ಕೆ

(ಶ್ರೀ ಕೆ. ಹೆಚ್. ಪಾಟೀಲ)

ನಾನು ಹಿಂದೊಮ್ಮುಂದೂ ನೋಡುವುದಿಲ್ಲ ಎಂಬ ಮಾತನ್ನು ಹೇಳಿದರು. ಅವರ ಮಾತನ್ನು ಕೇಳುವಾಗ ಕನ್ನಡನಾಡಿನಲ್ಲಿ ಇಂತಹ ವ್ಯಕ್ತಿ ಇದ್ದಾರೆಯೇ ಎಂಬ ಅಭಿಮಾನ ಉಂಟಾಗುತ್ತದೆ. ಆದರೆ ನಡೆದಂತೆ ನುಡಿಯದೆ ಇರುವುದನ್ನು ನೋಡಿದರೆ ಇವರು ನಿಜಲಿಂಗಪ್ಪನವರ ಪಟ್ಟಕ್ಕೆ ಬಂದವರು ಎನ್ನುವ ಅರ್ಥ ಬರುತ್ತದೆ. ವೀರೇಂದ್ರ ಪಾಟೀಲರು ಎರಡು ವರ್ಷಗಳ ಹಿಂದೆ ಮಾತನಾಡುವಾಗ ಹೇಳಿದರು, ನಿಮ್ಮಲ್ಲಿ ಧೈರ್ಯವಿದ್ದರೆ ಬರೆದುಕೊಡಿ ಪುರಸ್ಕಾರ ಮಾಡುತ್ತೇನೆ, ನಮ್ಮ ಕಡೆಗೆ ಕಳುಹಿಸಿಕೊಡಿ ಎಂದು ಹೇಳಿದರು. ಅವರ ಕಡೆಗೆ ಕೊಟ್ಟರೆ ಅದು ಕಸದ ಬುಟ್ಟಿಗೆ ಹೋಗುತ್ತದೆ. ಆದುದರಿಂದ ಸ್ಪೀಕರ್ ಅವರ ಮುಖಾಂತರ ಕಳುಹಿಸುತ್ತೇನೆ ಎಂದು ಹೇಳಿದೆ. ಔದಾರ್ಯದಿಂದ ಸ್ಪೀಕರ್‌ರವರು ಅವಕಾಶ ಕಲ್ಪಿಸಿಕೊಡಬೇಕಿತ್ತು. ಆದರೆ ಈ ಸಭೆಯಲ್ಲಿ ತೆಗೆದುಕೊಳ್ಳುವುದು ಬೇಡ ಬೇರೆ ಕಡೆ ವಿಚಾರಮಾಡೋಣ ಎಂದು ಹೇಳಿದರು. ವಿಚಾರಣೆ ಮಾಡಿದ್ದರೆ ಸಮಾಧಾನವಾಗುತ್ತಿತ್ತು. ಇದುವರೆಗೂ ಏನೂ ಮಾಡಿಲ್ಲ. ೩ನೇ ಏಪ್ರಿಲ್ ೧೯೬೯ನೇ ಇಸವಿಯಿಂದ ನನ್ನ ಸ್ನೇಹಿತರಾದ ಶ್ರೀ ಪಿ. ಎಂ. ನಾಡಗೌಡರು ಸಹಕಾರ ಸಚಿವರಾಗಿರುವುದು ದುರ್ದೈವದ ಸಂಗತಿ ಜನತೆಯ ಹಿತದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದ ಅವರ ಮೇಲೆ ಎನ್‌ಕ್ವೈರಿ ಆಗುವ ಅವಕಾಶ ಇದೆ ಎಂದು ಹೇಳುತ್ತೇನೆ. ಮಂತ್ರಿಮಂಡಲದಲ್ಲಿರುವುದರಿಂದ ಅವರಿಗೆ ಕೀರ್ತಿಬರುವುದಿಲ್ಲ ವೀರೇಂದ್ರ ಪಾಟೀಲರ ಮಂತ್ರಿಮಂಡಲಕ್ಕೆ ಕೀರ್ತಿಬರುವುದಿಲ್ಲ, ಮೈಸೂರು ರಾಜ್ಯಕ್ಕೆ ಅವಮಾನವಾಗುತ್ತದೆ ಎನ್ನುವ ಮಾತನ್ನು ಹೇಳಿದೆ. ನಾನು ಕೊಟ್ಟ ಅರ್ಜಿಯನ್ನೇ ಪೇಜು ಒಂದರಿಂದ ಹತ್ತರ ತನಕ ರಿಪೋರ್ಟ್‌ನಲ್ಲಿ ಎನಕಾರ್ಪೊರೇಟ್ ಮಾಡುತ್ತೇನೆ ಎಂದು ಹೇಳಿದರೆ ಓದುವುದಿಲ್ಲ. ಇಲ್ಲದಿದ್ದರೆ ಓದುತ್ತೇನೆ. ಕೋ-ಆಪರೇಟೀವ್ ಮಿನಿಸ್ಟರ್ ವಿರುದ್ಧ ಅಲಿಗೇಷನ್ ಕೊಟ್ಟಿದ್ದು ಇದೇ ಹೌಸ್‌ನಲ್ಲಿ ಹೊರಗೆ ಕೊಟ್ಟಿದ್ದಲ್ಲ. ಎಲ್ಲೆಲ್ಲಿ ಸಹಕಾರ ಮಂತ್ರಿಗಳು ಭ್ರಷ್ಟಾಚಾರ ಮಾಡಿದ್ದಾರೆ, ಎಲ್ಲೆಲ್ಲಿ ಆರೋಪ ಮಾಡಿದ್ದಾರೆ ಅದರ ಬಗ್ಗೆ ಎನ್‌ಕ್ವೈರಿ ಆಗಬೇಕು. ಶ್ರೀ ಸಿದ್ಧವೀರಪ್ಪನವರು ನನ್ನ ರಕ್ಷಣೆಗೆ ಬರುತ್ತೇನೆ ಎಂದರು. ನನಗೆ ಯಾರ ರಕ್ಷಣೆಯೂ ಬೇಕಾಗಿಲ್ಲ. ಇದರಿಂದ ತಪ್ಪುಕೊಟ್ಟಿದ್ದರೆ ಪ್ರಾಸಿಕ್ಯೂಷನ್ ಆಗುವುದಿದ್ದರೆ, ನೇರವಾಗಿ ನನಗೆ ಪ್ರಾಸಿಕ್ಯೂಷನ್ ಮಾಡಿದರೆ ನೇಣುಹಾಕುವ ಶಕ್ತಿ ವೀರೇಂದ್ರ ಪಾಟೀಲರಿಗೆ ಇದ್ದರೆ ಸಹನೆಯಿಂದ ಜನತೆಯ ಹಿತದೃಷ್ಟಿಯಿಂದ ಸ್ವೀಕಾರ ಮಾಡಲೂ ಸಹ ತಯಾರಿದ್ದೇನೆ. ಇಂತಹ ಭ್ರಷ್ಟಾಚಾರ ಬಯಲಿಗೆ ಎಳೆಯುವ ಶಕ್ತಿ ಸಾಮಾನ್ಯ ಮನುಷ್ಯನಿಗೆ ಇರುವುದಿಲ್ಲ ಎಂದು ಹೇಳುತ್ತೇನೆ. ಇದನ್ನು ವೀರೇಂದ್ರ ಪಾಟೀಲರ ಗಮನಕ್ಕೆ ತಂದು ಓದುತ್ತೇನೆ.

(1) The Hon. Shri P. M. Nadagauda has entered as Administrator of the Basaveshwar Vidyavardhaka Sangh, Bagalkot and has been utilising his official position as Minister and exploiting co-operative institutions, Agricultural Produce Market Committee, Taluka Development Boards etc., in order to and under the guise of building up funds for the said B.V.V. Sangha, Bagalkot. These institutions which are governed by their own rules and or bye-laws are incapable of diverting their funds towards any objects outside their own bye-laws. It is only under the direct pressure of the said Minister that many of the institutions and the higher officers are made to depart from the Law and under promises of granting Government financial aids to such institutions to compensate such departures.

It is pertinent to mention at this stage that the Government is also not competent to accord such sanction. The result is that gross-misapplication of funds by wilful abuse of power to the detriment of the institutions. The affairs of the B.V.V. Sangha, Baglkot are such that no Balance Sheet has yet been framed or presented to the General Body for approval during the period of his Administratorship. As no balance sheet was ready, the Annual General Body Meetings of the Sangha have not been convened. At any rate, the accounts of the Sangha have not been presented or was published, on the ground

among other things that the accounts are not properly maintained; one of the members of the sangha has moved the Assistant Charity Commissioner, Belgaum for holding an enquiry into the matter and the same is pending even now. Inspite of this the Sangh has been receiving the Annual Government Grants which could not have been possible but for the position held by the Hon'ble Minister both in the Sangh and in the Government.

Before he became the Minister, the Government of Mysore had refused to accord sanction to such diversions of the funds. To name an instance, such sanction was not accorded in the case of Bagalkot. T.D.B. contray to such precedent, we find that the said Minister has been sanctioning such illegal diversions.

It may be stated that such diversions of funds are not permitted under any law and the Minister's acts in this behalf are such as have flouted the law, all because of his personal interest in setting the law at naught for the sake of getting patronage for things in which he is personally interested. I have given some instances wherein actually diversion has been made :

(1) The A.P.M.C. Bagalkot, has already paid Rs. 25,000 to the said Sangh and another resolution is made to be passed by the A.P.M.C. expressing that they would contribute another Rs. 25,000

(2) He has collected Rs. 10,000 from the A.P.M.C., Bijapur.

(3) He has collected Rs. 15,000 from the A.P.M.C., Davangere of Chitradurga District.

(4) He has collected Rs. 10,000 from the A.P.M.C., Raichur.

(5) He has collected from the Sugar Factories like Hiranyakashi Sahakari Sakare Kharkhane, Sankeshwar, a sum of Rs. 15,000. He has collected donations for the said Sangh from the C.C.C. Banks and co-operative institutions.

other instances in which the said Minister has abused his position and powers are briefly cited as under :

(1) An old building belonging to the B.V.V. Sangh near Motgi Basavanna Temple, Bagalkot, has been got rented out to the District School Board, Bijapur, at a disproportionate rent of about Rs. 900 per month which is the highest rent at Bagalkot.

(2) Out of the huge amounts so collected for the B.V.V. Sangh, the said Minister has advanced without any sanctions from the General Body, moneys to the tune of lakhs of rupees to some friends and possibly which are bearing some personal interests, clearly acts of favouritism, nepotism and corruption involving breach of trust.

(3) This policy of accord sanction anceto diversions of funds is manifested by the said Minister in the interest of the B.V.V. Sangh

(ಶ್ರೀ ಕೆ. ಹೆಚ್. ಪಾಟೀಲ್)

only. In order to test that the Agricultural Produce Market Committee, Gadag, passed a resolution for diverting its funds to several educational institutions in Gadag and Gadag Taluka, in which case the said Minister has not accorded sanctions.

(4) Even when specific allegations where made against Shri C. G. Shettar, the then Joint Registrar of Co-operative Societies, Belgaum, regarding abuse of his official powers, the said Minister desisted from making any enquiries and allowed the official to continue to occupy his office premises without permission and without paying any rent to the detrnment of Government and the rate payers. On top of this, the said official had been given the double benefits of saving him from proceeding on leave preparatory to retirement by refusing him sanction of leave and allowing him to avail of leave on full pay after date of his superannuation by way of favouritism only.

ಈ ಮಾನ್ಯ ಮಂತ್ರಿವರ್ಯರ ಮಾತುಗಳನ್ನು ಕೇಳತಕ್ಕ ಮತ್ತು ಅವರು ಹೇಳಿದಂತೆ ಕುಣಿಯುವಂತಹ ಶ್ರೀ ಸಿ. ಬಿ. ಶೆಟ್ಟರು ಅಂತ ಹೇಳಿ ಒಬ್ಬರು ಅಧಿಕಾರಿ ಇದ್ದರು, ಅವರಿಗೆ ಎಕ್ಸ್‌ಟೆನ್‌ಷನ್ ಕೊಡಿಸಿದರು. ಅವರು ವಾಸ ಮಾಡುತ್ತಾ ಇದ್ದಂತಹ ಮನೆಯನ್ನು ಬಾಡಿಗೆ ಇಲ್ಲದೇ ವಾಸ ಮಾಡುವಂತಹ ಒಂದು ಅವಕಾಶವನ್ನು ಸಿವಿಲ್ ಸರ್ವೀಸ್ ರೂಲ್ಸ್‌ನಲ್ಲಿ ಇಲ್ಲದೇ ಇದ್ದರೂ ಸಹ ಅವರಿಗೆ ಮಾಡಿಕೊಟ್ಟರು. ಎನ್‌ಕ್ವೈರಿ ಸಹ ಮಾಡಲಿಲ್ಲ. ಅವರನ್ನು ನಂತರ ರಿಟೈರ್ ಆಗಲಿಕ್ಕ ಅವಕಾಶ ಮಾಡಿಕೊಟ್ಟು ಇನ್ನೂ ತನಕ ಸಹ ಅದು ತೀರ್ಮಾನ ಮಾಡಿಲ್ಲ. ಇದು ಇವರ ಎಫಿಷೆನ್ಸಿ, ಇವರ ಅನೆಸ್ಟಿ, ಇವರ ಇಂಟೆಗ್ರೆಟಿ, ಇದೇ ರೀತಿಯಿಂದ ಇವರಿಂದ ಪೋಷಿತವಾದ ಅನೇಕ ಸಂಘಗಳೂ ಇವೆ. ಈ ರೀತಿ ತಮ್ಮವರಿಗೆ ಉಪಕಾರ ಮಾಡುವಂತಹ ವಿರೋಧಿಗಳಿಗೆ ಅಪಕಾರ ಮಾಡುವಂತಹ ಪ್ರವೃತ್ತಿಯಲ್ಲಿ ತೊಡಗಿದ್ದಾರೆ. ಶ್ರೀಮಾನ್ ವಾಲಿ ಅನ್ನುವವರು ಚಿತ್ರದುರ್ಗದ ಡೆಪ್ಯೂಟಿ ಕಮೀಷನರು ಆಗಿದ್ದರು, ಅವರ ಮೇಲೆ ಇದೇ ಸಭೆಯಲ್ಲಿ ಪ್ರತಿಯೊಬ್ಬ ಸದಸ್ಯರೂ ಅದರಲ್ಲೂ ಇಂದಂ ಡೆಪ್ಯೂಟಿ ಮಿನಿಸ್ಟರಾಗಿರತಕ್ಕ ಶ್ರೀಮಾನ್ ಬಿ. ಎಸ್. ಗೌಡರೂ ಸಹ ಹಿಂದೆ ಇವರ ಬಗ್ಗೆ ಟೀಕೆ ಮಾಡಿದ್ದಾರೆ. ಅವರ ಬಗ್ಗೆ ಇಲ್ಲಿ ಟೀಕೆ ಮಾಡಿರುವಷ್ಟು ಮತ್ತೆ ಇನ್ನು ಯಾರ ಮೇಲೂ ಟೀಕೆ ಮಾಡಿಲ್ಲ. ಇಂತಹ ಕರಪ್ಟ್ ಮನುಷ್ಯನನ್ನು ತಿಳಿದೋ, ತಿಳಿಯದೆಯೋ ತಮಗೆ ಅನುಕೂಲವಾಗುತ್ತದೆ ಎಂಬ ಒಂದೇ ಒಂದು ಉದ್ದೇಶದಿಂದ ಅಡ್ಮಿನ್‌ಸ್ಟ್ರೇಟರ್ ಆಗಿ ಒಂದು ಸಂಸ್ಥೆಯಲ್ಲಿ ಇಟ್ಟರು. ಇವರ ಸಂಬಂಧ ಪ್ರಶ್ನೆ ಬಂದಾಗ ಈ ಹೌಸ್‌ನಲ್ಲಿ ಅವರನ್ನು ಅಲ್ಲಿ ಇಡುವುದಿಲ್ಲ ಎಂದು ಸ್ಪಷ್ಟವಾಗಿ ಆಶ್ವಾಸನೆ ಕೊಡದಿದ್ದರೂ ಮುಂದೆ ಅವರನ್ನು ಅಲ್ಲಿ ಕಂಟಿನ್ಯೂ ಮಾಡುವುದಿಲ್ಲ ಎಂದು ಹೇಳಿದರು. ೪-೫ ಲಕ್ಷ ರೂಪಾಯಿ ಆ ಸಹಕಾರ ಸಂಘಕ್ಕೆ ಕೊಟ್ಟಿದ್ದೀರಿ. ಗ್ಯಾರಂಟಿ ಕೊಟ್ಟಿದ್ದೀರಿ ೧೯೬೨ರಲ್ಲಿ ಮಂಜೂರಾದಂತಹ ಸೆಂಟ್ರಲ್ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಹಣ ಬರುವುದನ್ನು ಪಡೆಯುವದೂ ಸಹ ನಿಮಗೆ ಆಗಿಲ್ಲ. ನಿಮ್ಮ ಸೆಕ್ಷನ್ ೫೪ನ್ನು ಅಪ್ಲೈ ಮಾಡಿ ಲಾಭ ತೆಗೆದುಕೊಂಡ ಸಂಘದಲ್ಲಿ ನಿಮ್ಮ ಕರ್ತವ್ಯಶೀಲತೆಯನ್ನು ತೋರಿಸಬೇಕಾಗಿತ್ತು. ಇದೇ ಅಸೆಂಬ್ಲಿಯಲ್ಲಿ ಶ್ರೀಮಾನ್ ನಾಡಗೌಡರು ಈ ಸಂಘಗಳು ಬಹಳ ಉತ್ತಮ ರೀತಿಯಲ್ಲಿ ನಡೆದಿವೆ, ಬಹಳ ಶ್ರೇಯಸ್ಕರವಾಗಿ ಕೆಲಸ ಮಾಡಿದೆ ಎಂದು ಹೇಳಿರುವ ಮಾತಿನ ಬಗ್ಗೆ ಇಂದು ಅವರ ನಾಲಿಗೆ ಏನಾಯಿತು ಎಂದು ಕೇಳುತ್ತಾ ಇದ್ದೇನೆ. ಈಗಲಾದರೂ ನಾನು ಏನು ಹೇಳುತ್ತಾ ಇದ್ದೇನೆ ಅದರಲ್ಲಿ ಸತ್ಯಾಂಶ ಇದೆಯೇ ಇಲ್ಲವೇ ಎಂಬುದನ್ನು ಅವರು ತಿಳಿದುಕೊಂಡು ಪಾಟೀಲ್‌ರು ಏನು ಹೇಳುತ್ತಾರೆ ಅದರಲ್ಲಿ ಸತ್ಯಾಂಶ ಇಲ್ಲ ಬೇಕಾದರೆ ಅವರೇ ನೋಡಿಕೊಳ್ಳಲಿ ನಾನು ನಿಜಲಿಂಗಪ್ಪನವರು ಈ ಕಾರ್ಯದಲ್ಲಿ ಸಕ್ಸೆಸ್‌ಫುಲ್ ಆಗಿದ್ದೇವೆ ಅಂತ ಅನ್ನುವುದನ್ನು ತೋರಿಸಿಕೊಟ್ಟಿದ್ದರೆ ನಾನು ಒಪ್ಪುತ್ತಿದ್ದೆ. ನಿಮ್ಮಲ್ಲಿರುವಂತಹ ಸಹಕಾರ ಸಂಘದಲ್ಲಿ ಯಾವ ರೀತಿ ಮಾಡಿದ್ದೀರಿ ಎಂಬುದನ್ನು ನೋಡಿ. ಹುಬ್ಬಳ್ಳಿ ಮಿಲ್‌ನಲ್ಲಿ ನಿಮ್ಮವರೇ ಛೇರ್ಮನ್‌ರಾಗಿದ್ದಾರೆ ಎಂಬ ದೃಷ್ಟಿಯಿಂದ ಅವರಿಗೆ ಎಲ್ಲ ರೀತಿಯ ಸೌಕರ್ಯವನ್ನೂ ಮಾಡಿಕೊಟ್ಟಿದ್ದೀರಿ. ಸೆಕ್ಷನ್ ೫೪ನ್ನು ಅದಕ್ಕೆ ಹುಟ್ಟಿಸಿಕ್ಕೆ ನಿಮಗೆ ಬರಲಿಲ್ಲ ಒಂದು ಕೋಟಿ ೨೦ ಲಕ್ಷ ರೂಪಾಯಿಗಳನ್ನು ಸರ್ಕಾರದ ಹಣದ ಹೊಣೆ ಹಾಕಿದ್ದೀರಿ. ಬಂಡವಾಳವನ್ನು ಹಾಕಿದ್ದೀರಿ ಮತ್ತು ಸೆಂಟ್ರಲ್ ಬ್ಯಾಂಕಿನಿಂದ ಜಾಮೀನಾಗಿ ಸಾಲವನ್ನು ಕೊಡಿಸಿದ್ದೀರಿ. ಕಂತುಗಳ ಮೂಲಕವಾಗಿ ಹಣ ಕಟ್ಟಲು ಅವಕಾಶ ಮಾಡಿಕೊಟ್ಟಿದ್ದೀರಿ. ಸೆಂಟ್ರಲ್

ಬ್ಯಾಂಕಿನಲ್ಲಿ ಸಾಲ ಕೊಡಿಸಿ ನೀವು ಸಾಲಗಾರರಾಗಿದ್ದೀರಿ ಇದಕ್ಕಿಂತ ನಾಚಿಕೆಗೇಡು ಯಾವುದು ಇದೆ ಅಂತ ಕೇಳುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಸದಸ್ಯರು ನಿಮ್ಮ ಅಧಿಕಾರಿಗಳಿಗೆ ಕೇಳಿದರು, ಬೇರೆ ಯಾವುದಾದರೂ ಕಡೆಗೆ ಈ ಹಣವನ್ನು ತೊಡಗಿಸಿದ್ದರೆ ಎಷ್ಟೋ ಸೌಕರ್ಯಗಳನ್ನು ಪಡೆಯಬಹುದಾಗಿತ್ತು ಎಂದು ನಿಮ್ಮ ಮನಸ್ಸಿನಲ್ಲಿರುವುದು ಒಂದು, ಈ ಸಂಘಗಳನ್ನು ನಡೆಸುವುದು ನಿಮಗೆ ಬೇಕಿಲ್ಲ. ಉದ್ಯೋಗ ದಂಧೆಗಳನ್ನು ಉತ್ತಮಸ್ಥಿತಿಗೆ ತರಬೇಕೆಂಬುದನ್ನು ಆಲೋಚನೆ ಮಾಡುವುದು ನಿಮಗೆ ಬೇಕಿಲ್ಲ. ನಿಮಗೆ ಬೇಕಾಗಿರುವುದು ನಿಮ್ಮ ಹೊಟ್ಟೆ ತುಂಬಲಿ. ಆನಂತರ ಮುಂದೆ ನೋಡೋಣ ಎಂಬ ರೀತಿಯಲ್ಲಿ ನಿಮ್ಮ ನಡುವಳಿಕೆಯಾಗಿದೆ. ಮೊದಲೇ ನಷ್ಟ ಹೊಂದುತ್ತಾ ಇರುವ ಸಂಘಕ್ಕೆ ಜಾಮೀನಾಗಿ ಇನ್ನೂ ಆಷ್ಟು ಹಣ ಕೊಡಿಸಿ ಎಂದರೆ ಯಾವ ಹುಚ್ಚರೇ ಆಗಲಿ ಒಪ್ಪುತ್ತಾರೆಯೇ ಎಂದು ಕೇಳುತ್ತಾ ಇದ್ದೇನೆ. ಇಂತಹ ಇವರ ಚಾಳಿಯನ್ನು ನೋಡಿದರೆ ದೇಶದ ಜನ ಬದುಕಬಹುದೇ, ಬಾಳಬಹುದೇ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ. ಹಿಂದೆ ಇಂತಹದೇ ಒಂದು ಪ್ರಸಂಗ ಬಂತು. ರಾಮಪ್ಪಿಯ ಕಟ್ಟಡದ ಬಗ್ಗೆ ೧೩ ಲಕ್ಷ ರೂಪಾಯಿನ ಬಿಲ್ಡಿಂಗ್‌ಗೆ ೧೮ ಲಕ್ಷ ರೂಪಾಯಿ ಹೇಗೆ ಕೊಡುತ್ತೀರಿ ಅಂತ ಅನ್ನುವಂತಹ ಪ್ರಬಲವಾದ ವಿರೋಧ ಬಂದಾಗ ತಮ್ಮ ಮೇಲೆ ಅಪಾದನೆ ಬರುತ್ತದೆ ಅಂತ ಹೇಳಿ ಅದನ್ನು ಅಲ್ಲಿಗೇ ಬಿಟ್ಟುಬಿಟ್ಟಿರಿ.

3 P. M.

ಆದೊಂದೇ ಅಲ್ಲ, ಧಾರವಾಡದಲ್ಲಿ ಕೋಆಪರೇಟಿವ್ ಯೂನಿಯನ್ನಿಗೆ ಕಟ್ಟಡ ಪಡೆಯುವಾಗ ಯಾವ ನೀತಿಯನ್ನುನುಸರಿಸಿದಿರಿ? ಇದು ಬ್ರಷ್ಟಾಚಾರ ವಲ್ಲದೆ ಏನಿದೆ ಎಂದು ಹೇಳುತ್ತಿದ್ದೇನೆ. ಅದನ್ನು ಡಾಕ್ಯು-ಮೆಂಟಿನಿಂದ ಸ್ಪಷ್ಟಪಡಿಸುತ್ತೇನೆ ಅಲ್ಲಿ ಕೋಆಪರೇಟೀವ್ ಯೂನಿಯನ್ ಕಟ್ಟಡವನ್ನು ಖರೀದಿ-ಮಾಡುವಾಗ ಟೆಂಡರು ಕರೆದರೇ? ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಿದರೇ? ಹಾಗೆ ಮಾಡದಿದ್ದರೆ ಸಂಬಂಧ ಪಟ್ಟವರನ್ನೇಕೆ ಸಸ್ಪೆಂಡ್ ಮಾಡಬಾರದು? ಆ ಸಂಸ್ಥೆಯವರೇಕೆ ಸುಮ್ಮನಿದ್ದರು ಎಂದು ಏಕೆ ಕೇಳಲಿಲ್ಲ? ಷೇರು ಬಂಡವಾಳ ಸ್ವಲ್ಪವಿದ್ದರೂ ಕೂಡ ಲಕ್ಷಗಟ್ಟಲೆ ಅಡ್ವಾನ್ಸ್ ಕೊಡಲಾಗುತ್ತಿದೆ. ಇದಕ್ಕೆ ನಾಡಗೌಡ ರೊಬ್ಬರೇ ಜವಾಬ್ದಾರರಲ್ಲ, ಇಡೀ ಮಂತ್ರಿ ಮಂಡಲದ ಜವಾಬ್ದಾರಿ ಇದೆ, ಇಲ್ಲಿ ನಡೆಯುವ ಭ್ರಷ್ಟಾಚಾರದ ರಲ್ಲಿ ಎಲ್ಲರಿಗೂ ಷೇರ್ ಇದೆ. ಮುಖ್ಯ ಮಂತ್ರಿಗಳೂ ಇದರಲ್ಲಿ ಸೇರಿದ್ದಾರೆಂಬ ಸಂಶಯ ಬರಹತ್ತಿದೆ. ಮಂತ್ರಿಮಂಡಲ ಪೂರ್ಣವಾಗಿ ಭ್ರಷ್ಟಾಚಾರಕ್ಕೆ ಒಳಗಾಗಿದೆ. ಈ ಪ್ರಶ್ನೆಗೆ ಸಂಬಂಧಪಟ್ಟಹಾಗೆ ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ ಒರೋಣ. ಯಾವುದಾದರೂ ಸಂಘದಲ್ಲಿ ಸೆಕ್ರೆಟರಿಯನ್ನು ನೇಮಕವಾಡಬೇಕಾದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಅರ್ಜಿ ಕರೆಯಬೇಕು.ಪತ್ರಿಕೆಯಲ್ಲಿ ಪ್ರಕಟಿಸಬೇಕು. ರಿಜಿಸ್ಟ್ರಾರರ ಮಂಜೂರಿ ಪಡೆಯಬೇಕು; ಪ್ರಚಾರ ಮಾತ್ರ ಸಂಘದ್ದು; ಆದರೆ ಕೋಆಪರೇಟೀವ್ ಟ್ರಿಬ್ಯುನಲ್ ಸದಸ್ಯರನ್ನು ನೇಮಕಮಾಡಿದಿರಿ. ಆಗ ಟೆಂಡರ್ ಕರೆದರೇ? ಅರ್ಜಿ ಕರೆದರೇ? ಸಹಕಾರಿ ಚಳವಳಿಯ ಧೋರಣೆಯೇನು? ಸಹಕಾರದಲ್ಲಿ ಅನುಭವಸ್ಥರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಡವೇ? ನಮ್ಮಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಜಗತ್ತಿಗೇ ಗೊತ್ತಿದೆ. ನಿಮ್ಮ ಮಗಳನ್ನು ಕೊಡುವ ನಿಶ್ಚಯವಾದ ಕೂಡಲೇ ನಿಮ್ಮ ಭೀಗ ಶ್ರೀ ಕೆ ಎಸ್. ಪಾಟೀಲರನ್ನು ಟ್ರಿಬ್ಯುನಲ್‌ಮೆಂಬರರಾಗಿ ನೇಮಿಸಿದ್ದರಲ್ಲಿ ನಿಮ್ಮ ಭ್ರಷ್ಟಾಚಾರಬಯಲಾಗಿಲ್ಲವೆ? ಕೈರಾನ್‌ರವರ ವಿಷಯದಲ್ಲಿ ದಾಸ್ ಕಮಿಷನ್ ವರದಿಗಿಂತ ಇಲ್ಲಿ ನಡೆಯುವುದು ಯಾವರೀತಿಯಲ್ಲಿ ಕಡಿಮೆ ಯಿದೆ? ಅಂಥವರಮೇಲೇ ಅಪಾದನೆ ಮಾಡಿ ಟೀಕೆ ಮಾಡಿರುವಾಗ ನಿಮ್ಮನ್ನೇಕೆ ಬಿಟ್ಟಿರುವುದು? ವಿಠಲದಾಸ್‌ಜೆಟ್ಟಿಗೂ ಅವರ ಹಗಲಮೇಲೆ ಕೈಹಾಕಿ ಸ್ವಲ್ಪ ಜವಾಬ್ದಾರಿ ಹೊರಸದಿದ್ದರೆ, ಗದಗ್ ಸೊಸೈಟಿಗೆ ಆಹಾರಧಾನ್ಯದ ಏಜೆನ್ಸಿ ಕೊಡುವುದನ್ನು ಬಂದುಮಾಡಿ ಎಂದು ಹೇಳಿದರು, ಕಾರಣ ಬಾಕಿ ಇದೆ ಎಂಬುದು. ಆದರೆ ಆ ಸೊಸೈಟಿ ಅಲ್ಲದೆ ರಾಜ್ಯದಲ್ಲಿರುವ ಸಹಸ್ರಾರು ಸೊಸೈಟಿಗಳಲ್ಲಿ ಬಾಕಿ ಇರುವಾಗ ಇದನ್ನು ಬಂದು ಮಾಡುವಾಗ ವಿಠಲದಾಸಟ್ಟರ ಸಹಕಾರ ಬೇಡಿದರು. ಆಹಾರಧಾನ್ಯ ಲೈಯಸನ್ಸ್ ಹಿಂದಿದ್ದುದ್ದನ್ನು ಬಂದ್ ಮಾಡಲಾಯಿತು. ಇದಲ್ಲದೆ ರಾಜಯ್ಯನವರಿಗೂ ಸ್ವಲ್ಪ ಭ್ರಷ್ಟಾಚಾರವಾಗುವಂತೆ ಕಾರ್ಯ ವರ್ಗಾವಣೆ ಮಾಡಿದರು. ಗದಗ್‌ನಲ್ಲಿರುವ ಒಂದು ಕಾಟನ್ ಸೊಸೈಟಿಗೆ ಹತ್ತಿ ಕಾಳಿನ ಸಂಗ್ರಹಣೆ ಏಜೆನ್ಸಿ ಕೊಟ್ಟರೆ ಸಾಲದು, ಗದಗ್‌ನಲ್ಲಿ ಎರಡು ಮಾರ್ಕೆಟಿಂಗ್ ಸೊಸೈಟಿ ಮಾಡಿ ಎಂದು ಹೇಳಿದಿರಿ. ದೇಶದಾದ್ಯಂತ ಹತ್ತಿ ಕಾಳು ಹಂಚಿಕೆಯಲ್ಲಿ ಶ್ರೇಷ್ಟತೆ ಪಡೆದ ಸಂಘದ ವಿರುದ್ಧ ರಾಚಯ್ಯನವರ ಸಹಕಾರ ಪಡೆದರು. ನಿಮ್ಮ ವಾರ್ಷಿಕ ವರದಿ ನೋಡಿ, ಪ್ರಿಂಟ್‌ಮಾಡಿದೆ ಅದರಲ್ಲಿ ಯಾವುದು ತಪ್ಪು ಯಾವುದು ಸರಿ ಹೇಳಿ. ಅಧಿಕಾರಿಗಳು ನೀವು ಹೇಳಿದಂತೆ ಕೇಳಿಕೊಂಡಿದ್ದಾರೆ. ಬರೆದಿದ್ದರೆ ನಮಗಲ್ಲದ ನಿಮ್ಮ ಪಕ್ಷದವರಿಗೆ ನೀವು ಕೊಡುವ ಸಮಾಧಾನವೇನು? ಇದರಲ್ಲಿ ಯಾವುದು ಸರಿ. ಯಾವುದು ನಿಜವಲ್ಲ ಎಂಬುದನ್ನು ಹೇಳಿ. ಯಾಕೆಂದರೆ ಉದಾಹರಣೆಗಾಗಿ, ಗದಗ್ ಕೋಆಪರೇಟೀವ್ ಕಾಟನ್ ಸೊಸೈಟಿಯಲ್ಲಿ ೧೨ ಲಕ್ಷ ದುರುಪಯೋಗವಾಗಿದೆ, ಪೋಲೀಸ್ ಇನ್‌ವೆಸ್ಟಿಗೇಷನ್ನಿನಲ್ಲಿದೆ ಎಂದು ತಿಳಿಸಲಾಗಿದೆ. ಆದರಲ್ಲಿ ಎರಡು ಲಕ್ಷಕ್ಕಿಂತ ಹೆಚ್ಚು ಹಣ ಸಹ ಕಾರಿ ಷೇರಿದೆ ಎಂದು ತಿಳಿಸಲಾಗಿದೆ,ಇದಕ್ಕಿಂತ ಅಸತ್ಯ ಸಂಗತಿ ಬೇರೆ ಇಲ್ಲ ಏಕೆ ಅಸತ್ಯ ಹೇಳುವುದು? ದ್ವೇಷಕ್ಕೆ ಹೇಳಬಹುದು ಏನ್ನಬಹುದು. ಕಾಂಗ್ರೆಸ್ಸಿನವರೇ ಹೇಳುತ್ತಿದ್ದಾರೆ. ನಾನು ಹೇಳುವುದು ನಿಜವಲ್ಲದಿದ್ದರೆ

(ಶ್ರೀ ಕೆ ಹೆಚ್. ಪಾಟೀಲ್)

ನಾನು ಮಾತ್ರವಲ್ಲದೆ ನಮ್ಮ ಪಕ್ಷವೂ ಕೂಡ ರಾಜೀನಾಮೆ ಕೊಡುವುದು. ನೀವು ಹೇಳುವುದು ನಿಜವಲ್ಲದಿದ್ದರೆ ಸರಕಾರದವರು ರಾಜೀನಾಮೆ ಕೊಡಬೇಕು. ಸರಿಯಾಗಿ ಆಡಿಟ್ ಮಾಡಿಲ್ಲ. ಅಸಿಸ್ಟೆಂಟ್ ರಿಜಿಸ್ಟ್ರಾರರು ರಿಟೈರ್ ಆಗಿದ್ದಾರೆ. ಸಂಬಂಧಪಟ್ಟವರಮೇಲೇಕೆ ಕ್ರಮ ತೆಗೆದುಕೊಂಡಿಲ್ಲ? ಇಂಥ ಭ್ರಷ್ಟಾಚಾರ ಮಾಡುತ್ತಿರುವ ಸರಕಾರದ ಬಜೆಟ್ಟನ್ನು ಹೇಗೆ ಮಂಜೂರು ಮಾಡುವುದು? ಇಂದು ಗದಗ್ ಕಾಟನ್ ಕೋಆಪರೇಟೀವ್ ಸೊಸೈಟಿಯಲ್ಲಿ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಸರಕಾರದ ಷೇರಿದೆಯೇ? ಒಂದು ರೂಪಾಯಿಯಾದರು ಷೇರಿದೆಯೇ? ಒಂದು ವರ್ಷ ಸೇಂಗಾ ಧಾರಣೆ ಇಳಿದಾಗ ಬಡ ರೈತರು ಪಡೆದ ಸಾಲ ಬಾಕಿ ಉಳಿದಿದೆ, ಅವರ ಆಸ್ತಿ ಮಾರಿ ಇಂದೇ ಪಡೆಯಲು ಹೇಳಿದರೆ ಹಾಗೆ ಮಾಡುವುದು ಹೇಗೆ? ನಾನು ಹೋದರೂ ಹೋಗಬಹುದು, ನಿಮ್ಮಂಥವರ ಆಳ್ವಿಕೆಯಿಂದ ಆ ಸಂಘ ಹೋದರೂ ಹೋಗ ಬಹುದು, ನಿಮಗೆ ಅಂಜಿ, ನಿಮ್ಮ ಅಧಿಕಾರಿಗಳಿಗೆ ಅಂಜಿ ರೈತರ ಮನೆಮಠಗಳನ್ನು ಕೂಡಲೇ ಮಾರುವುದಿಲ್ಲ ಎಂದು ಹೇಳುತ್ತೀದ್ದೇನೆ. ಹತ್ತು, ಹನ್ನೆರಡು ಸೊಸೈಟಿಗಳಲ್ಲಿ ನಿಮಗೆ ಬೇಕಾದ ವ್ಯಾಪಾರಸ್ಥರ ಹಣ ೧೫-೨೦ ಲಕ್ಷ ರೂಪಾಯಿ ಬಾಕಿ ಇದ್ದಾಗ ಕಣ್ಣು ತೆರೆಯಲಿಲ್ಲ. ನೂರಿನ್ನೂರು ರೂಪಾಯಿ ರೈತರ ಬಾಕಿ ಇದ್ದರೆ ಅಂಥ ಬಾಕಿ ವಸೂಲ್ಮಾಡುವುದಕ್ಕೆ ತಾಸ ಕೊಡಬೇಕೆನ್ನುವುದು ಸಮಂಜಸವಿದೆಯೇ ಎಂದು ಅಧ್ಯಕ್ಷರ ಮೂಲಕ ತಮ್ಮನ್ನು ಕೇಳುತ್ತೇನೆ.

ಮಾರ್ಗದ ಮಲ್ಲಪ್ಪನವರು ಇರುವಂಥ ಸೊಸೈಟಿ ಸೂಪರ್‌ಸೀಡ್ ಮಾಡಬೇಕು ಎಂದು ಸೆಕ್ಷನ್ ೫೪ ಹಾಕಬೇಕೆಂದು ಯೋಚಿಸಿ, ಆ ಪ್ರಕಾರ ಮಾಡಿದರೆ ಏನು ಭಾವನೆ ಬರುತ್ತದೆಯೋ ೨೯ನೇ ಸೆಕ್ಷನ್ ಹೆಚ್ಚೋಣ ಎಂದು ಹೇಳಿ ಅಲ್ಲಿ ಅಡ್ಮಿನಿಸ್ಟ್ರೇಟರನ್ನು ನೇಮಿಸಿದ್ದೇವೆಂದು ಹೇಳುತ್ತ ಇದ್ದಾರೆ. ಅದೇ ರೀತಿ ಶ್ರೀ ವೀರಪ್ಪ ಗೌಡರ ವಿಚಾರ. ಎರಡು ವರ್ಷದ ತನಕ ಸುಮ್ಮನೆ ಇದ್ದು, ಎ.ಪಿ.ಸಿ.ಸಿ.ಗೆ ಹೋಗ ಬೇಕೆಂದು ಇದ್ದಾಗ ಪೋಲೀಸ್ ಅಧಿಕಾರಿಗಳು ಹೋಗಿ ನಿರಪರಾಧಿಗಳಾದವರನ್ನು ತೊಂದರೆಗೀಡು ಮಾಡಲು ನಿಮ್ಮ ಕೈವಾರಿಗಳಾಗಿ ವರ್ತನೆ ಮಾಡಿದರು ಮತ್ತು ಅವರಿಗೆ ತೊಂದರೆ ಕೊಡಬೇಕು ಎನ್ನುವ ಮನೋವೃತ್ತಿಯಿಂದ ಅವರ ಮೇಲೆ ಖಟ್ಲೆ ಹಾಕಿದ್ದಾರೆ.

ನ್ಯಾಷನಲ್ ಕೋ ಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಹಣವನ್ನು ಕೊಡುವಾಗ ಅದನ್ನು ವಿತರಣೆ ಮಾಡುತ್ತಿದ್ದೀರಿ. ನೀವು ಮಾಡಿದ ಭ್ರಷ್ಟಾಚಾರಗಳೆಲ್ಲ ಅವರ ಎದುರಿಗೆ ಬಂದಾಗ ಹಣವ ವಿತರಣೆ ಬಂದೇ ಆಗುತ್ತದೆ. ಇಂಡಿಕೇಟಿನವರು ಸಿಂಡಿಕೇಟಿನವರಿಗೆ ಬಂದು ಮಾಡಿದರು ಎಂದು ಹೇಳಬಹುದು. ಆದರೆ ಇಂಡಿಕೇಟಿನವರು ಆ ರೀತಿ ದ್ರೋಹ ಮಾಡುವುದಕ್ಕೆ ಹೋಗುವುದಿಲ್ಲ. ಅವರು ವಿವೇಕವಂತರಿರುತ್ತಾರೆ. ಅವರು ಆ ರೀತಿ ಯೋಚನೆ ಮಾಡಿದ್ದರೆ, ಸಿಂಡಿಕೇಟ್ ಇಂಡಿಕೇಟ್ ವಾಗ್ದಾನ ಪ್ರಾರಂಭವಾದ ಮೂರು ದಿವಸದೊಳಗೆ ಬಂದ್ ಆಗಬಹುದಾಗಿತ್ತು. ಇವರು ಮಾಡಿರತಕ್ಕ ಭ್ರಷ್ಟಾಚಾರಗಳು ಅಷ್ಟಿವೆ. ಷೇರು ಕ್ಯಾಪಿಟಲ್ ಎಷ್ಟಿರುತ್ತದೆ ಅದನ್ನು ಮೀರಿ ಸಾಲ ಕೊಡುವಂಥ ಸಂದರ್ಭದಲ್ಲಿ ಸೆಕ್ಷನ್ ೨೯ ಅಮಲು ಮಾಡುತ್ತೀರಾ ? ಸೂಪರ್‌ಸೀಡ್ ಮಾಡುತ್ತೀರಾ ? ಆದರೆ ಆಥರೈಸ್ಡ್ ಷೇರ್ ಕ್ಯಾಪಿಟಲ್‌ಗೆ ಮಿಕ್ಕಿ ಕೊಟ್ಟಿದ್ದೀರಿ, ಬಡವರ ರಕ್ತದಿಂದ ಬೆವರು ಸುರಿಸಿ ಸಂಪಾದನೆ ಮಾಡಿದಂಥ ಹಣವನ್ನು, ಟ್ಯಾಕ್ಸ್ ಹೇರಿ, ಅವರಿಂದ ಸಂಗ್ರಹ ಮಾಡಿ, ಕೇಂದ್ರದಿಂದ ಹಣವನ್ನು ಪಡೆದು ನಿಮ್ಮಂತರ ಕೈ ತುಂಬುವುದಕ್ಕೆ ಅದಂ ಮುಖಾಂತರ ನಿಮ್ಮ ಹೊಟ್ಟೆ ತುಂಬುವುದಕ್ಕೆ ಹಣ ವಿತರಣೆ ಮಾಡುತ್ತಿರುವುದು ನ್ಯಾಯವೇ ಎಂದು ಕೇಳುತ್ತೇನೆ. ಒಂದೇ ರೀತಿಯಿಂದ ಎಲ್ಲ ಸಂಘಗಳನ್ನೂ ನಡೆಸಿಕೊಳ್ಳಲಾರದೆ ಇದ್ದೀರಿ.

ಕಾಟಲ್ ಫೀಡ್ಸ್ ಪ್ರೋಸೆಸಿಂಗ್ ಸೊಸೈಟಿ. ಮಂಡ್ಯ, ಇದಕ್ಕೆ ಬೇಕಾದ ಸಹಾಯವನ್ನು ಮಾಡುತ್ತಿದ್ದೀರಿ. ವಿದ್ಯಾಮಂತ್ರಿಗಳ ಸಹಕಾರ ನಿಮಗೆ ಬೇಕಾಗಿದೆ. ಬಸವೇಶ್ವರ ಸಂಸ್ಥೆಗೆ ವಿದ್ಯಾ ಸಚಿವರ ಸಹಕಾರ ಬೇಕು ಎಂದು ಅವರಿಗೆ ನೀವು ಸಹಕಾರ ಕೊಡುತ್ತಿದ್ದೀರಿ. ಮ್ಯೂಚುಯಲ್ ಬೆನಿಫಿಷಿಯಲ್ ಕಂ ಡಿಸ್ಟ್ರಿಬ್ಯೂಷನ್ ಸ್ಕೀಂ ಆಗಿದೆ. ಮಂಡ್ಯ ಕೋ ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗೆ ಹೇರಳ ಹಣ ಕೊಟ್ಟಿರಿ. ಈ ಹಣ ಹೇಗೆ ಉಪಯೋಗವಾಯಿತು ? ಕ್ಯಾಟಲ್ ಫೀಡ್ಸ್ ಪ್ಲಾಂಟ್ ಇನ್ನೂ ತನಕ ಅಲ್ಲಿ ಪ್ರಾರಂಭವಾಗಿಲ್ಲ. ಇವೇ ಹಣವನ್ನು ಮತ್ತೊಂದು ಸಂಘಕ್ಕೆ ಕೊಡಿರಿ ಎಂದರೆ ಕೊಡಲಿಲ್ಲ. ಪ್ಲಾನ್, ಪ್ರಾಜೆಕ್ಟ್ ಎಲ್ಲ ಆಗಿದೆ, ಬಂದು ನೋಡಿ ಕಾರ್ಯ ಪ್ರಾರಂಭವಾಗಿದ್ದರೆ ಸಹಾಯ ಕೊಡಿ, ಅದು ಚಾಲೂ ಆದಾಗ ಕೊಡಿ, ಬಂದು ನೋಡಿ ಎಂದರೆ ಆ ಹಣವನ್ನು ಬೋರೇಗೌಡನ ಹಣವನ್ನು ಮತ್ತೊಂದು ಮೂಲೆಗೆ ಹಾಕಿದಿರಿ. ಉಪ-ಮಂತ್ರಿಗಳು ಬಂದು ನೋಡಿದರು ನಿಮ್ಮ ಸಹಕಾರ ಮಂತ್ರಿಗಳಿಗೆ ಹೇಳಿ. ಕೊಡಬೇಕಾದ ಸಹಾಯವನ್ನು ಕೊಡಲಿ ಎಂದರೆ ಯಾವುದೇ ರೀತಿಯ ಸಹಾಯ ಇನ್ನೂ ಬಂದಿಲ್ಲ. ಅಲ್ಲಿಂದ ಸಾಲ ಕೂಡ ಸಿಕ್ಕುವುದಿಲ್ಲ. ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್‌ನಲ್ಲಿ ನಿಮ್ಮ ಅಧಿಕಾರವಿಲ್ಲ, ಅದು ನಿಮಗೆ ಪೂರ್ತಿ ಹಿಡಿತಕ್ಕೆ ಒಳಪಟ್ಟಿಲ್ಲ. ಅಲ್ಲಿ ಕೇಂದ್ರದ ಆಡಳಿತಾಧಿಕಾರಿಗಳಿದ್ದಾರೆ.

ಆವರಿಗೆ ನ್ಯಾಯಬೇಕು ನಿಮ್ಮ ರಾಜಕೀಯ ಬೇಕಾಗಿಲ್ಲ. ಅವರು ಸಾಲ ಕೊಟ್ಟರು ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಿ. ನೀವು ಹೀಗೆಯೇ ವರ್ತಿಸಿದರೆ ಇನ್ನು ನಾಲ್ಕಾರು ತಿಂಗಳಿನಲ್ಲಿ, ಅಥವಾ ಮುಂದಿನ ವರ್ಷದ ಬಜೆಟ್ ಮಂಡನೆ ಮಾಡುವುದರೊಳಗೆ ಹೋಗುತ್ತೀರಿ.

ರಿಸರ್ವ್ ಬ್ಯಾಂಕಿನಿಂದ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಇಂದಿರಾ ಗಾಂಧಿಯವರು ಹಣದ ಕೊರತೆಯಿಂದ ಬಡಶ್ರೀತರು ಬಳಲಬಾರದು. ಹಳ್ಳಿಯಲ್ಲಿರುವ ಕೈಗಾರಿಕೋದ್ಯಮಿಗೆ ಹಣದ ಅಭಾವವಾಗಬಾರದು ಎಂದು ಹೇಳಿದ್ದಾರೆ. ಖಳ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡುವಂಥ ಕೇಂದ್ರದ ಧೋರಣೆ ಮನೆ ಮನೆಗೂ ಮುಟ್ಟಬೇಕು, ರಾಜ್ಯ ಸರ್ಕಾರದ ಮೂಲಕ ಮುಟ್ಟಿಬೇಕು. ರಾಜ್ಯ ಸರ್ಕಾರದ ತನ್ನ ಕರ್ತವ್ಯದಲ್ಲಿ ಚ್ಯುತಿ ಮಾಡಿದ್ದೇ ಆದರೆ ನಮ್ಮ ಧೋರಣೆಗೆ ಭಂಗ ಬರುತ್ತದೆ ಎಂದು ಹೇಳಿದ್ದಾರೆ. ಅಂಥ ಪ್ರಗತಿಪರವಾದ ಯೋಜನೆ ಇದ್ದರೂ ಸಹ, ಜನಪ್ರಿಯವಾದ ಯೋಜನೆ ಇದ್ದರೂ ಸಹ, ಇಲ್ಲಿರತಕ್ಕ ಸಂಘ ಸಂಸ್ಥೆಗಳಿಗೆ ನಿಮ್ಮ ಕರ್ತವ್ಯದ ಅಭಾವದಿಂದ ಸಹ ಹಣ ಸಿಕ್ಕದ ಹಾಗೆ ಆಗಿದೆ.

ರಿಸರ್ವ್ ಬ್ಯಾಂಕಿನವರು ಪ್ರೊಡಕ್ಷನ್ ಲೋನ್ ಮುಂತಾದುವನ್ನು ಕೊಟ್ಟಿದ್ದಾರೆ. ಇನ್ನೂ ಅನೇಕ ರೀತಿಯಲ್ಲಿ ೪೪ ಪರ್ಸೆಂಟ್ ಕವರ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ನಿಜವಾಗಿ ೧೦ ಪರ್ಸೆಂಟ್ ನಷ್ಟು ಜನರಿಗೆ ಕೂಡ ಸಿಕ್ಕಿಲ್ಲ. ಈ ಹೊತ್ತಿನ ದಿವಸ ಬೆಳೆ ಸಾಲ ಹುಚ್ಚುವಳಿಗಾಗಿ ಕೊಡಿರಿ ಎಂದರೆ ಎಷ್ಟು ಮಂದಿಗೆ ಕೊಟ್ಟಿದ್ದೀರಿ? ಸೊಸೈಟಿಯವರು ಕೊಡುವುದಕ್ಕೆ ಏನೇನೂ ಮಾಡಿಲ್ಲ ಎಂದು ಹೇಳುತ್ತೀರಿ. ಯಾವ ಸೊಸೈಟಿಯ ಮೇಲೆ ನಿಮ್ಮ ಹಿಡಿತವನ್ನು ಇಟ್ಟುಕೊಳ್ಳಬೇಕು ಎಂದು ನೋಡುತ್ತೀರಿ. ಈ ಕೆಲಸವನ್ನು ಮಿಷನರಿ ಮಾದರಿಯಲ್ಲಿ ಸೇವಾಭಾವನೆಯಿಂದ ಮಾಡಬೇಕು. ಜನತೆಯ ಕಲ್ಯಾಣವಾಗುವಂಥ ಉದಾತ್ತ ಮನೋಭಾವನೆ ಬರಬೇಕು. ಆದರೆ ನೀವು ಪೋಲೀಸ್ ಮಂತ್ರಿಗಳಂತೆ ವರ್ತಿಸುತ್ತೀರಿ, ಸಹಕಾರ ಮಂತ್ರಿಗಳಾಗಿಲ್ಲ. ಸಹಕಾರ ಮಂತ್ರಿಗಳಾಗಿ ಕೆಲಸ ಮಾಡಬೇಕು. ರಿಸರ್ವ್ ಬ್ಯಾಂಕಿನಿಂದ ತೆಗೆದುಕೊಳ್ಳುವ ಹಣವನ್ನು ರೈತನಿಗೆ ಕೊಡುವಾಗ ವಿಪರೀತ ಹೊರೆಬೀಳುವಂತೆ ಮಾಡಿದ್ದಾರೆ. ರಿಸರ್ವ್ ಬ್ಯಾಂಕಿನಿಂದ ಎರಡು, ಎರಡೂವರೆ ಪರ್ಸೆಂಟ್ ಬಡ್ಡಿಮೇಲೆ ಹಣವನ್ನು ಸಾಲ ತರುತ್ತೀರಿ. ಅದು ರೈತನಿಗೆ ಮುಟ್ಟುವ ವೇಳೆಗೆ ಅವನು ೯ ಪರ್ಸೆಂಟ್ ಕೊಡಬೇಕು ಎಂದರೆ ಯಾವ ದೃಷ್ಟಿಯಿಂದ ರೈತನಿಗೆ ಸಹಕಾರಿಯಾಗುವಂತೆ ಕೆಲಸಮಾಡುತ್ತಿದ್ದೀರಿ ಎಂದು ಕೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಮಾರ್ಕೆಟಿಂಗ್ ಫೈನಾನ್ಸಿದವರು ಉಳಿದ ರಾಜ್ಯಕ್ಕಿಂತ ಹೆಚ್ಚು ಹಣ ಒದಗಿಸಿದ್ದಾರೆ. ಒಂದೊಂದು ಸೊಸೈಟಿ ಲಕ್ಷಾಂತರ ರೂಪಾಯಿ ಬಳಸಿಕೊಂಡಿವೆ. ಇದಕ್ಕೆ ಹಣದ ಅಭಾವ ಇಲ್ಲ. ಆದರೆ ಮಹಾರಾಷ್ಟ್ರ ಗುಜರಾತ ರಾಜ್ಯಗಳಲ್ಲಿ ಪುನಃ ಕುತಿನ ರೂಪದಲ್ಲಿ ಕೊಟ್ಟು ಸ್ಟ್ಯಾಬಿಲೈಜ್ ಮಾಡಿದ್ದಾರೆ. ಕಂತು ಮಾಡಿಕೊಡುವ ಪಾಲಿಸಿಗೆ ರಿಜರ್ವ ಬ್ಯಾಂಕು ಅಡ್ಡಿ ಬರುವುದಿಲ್ಲ. ಆದರೂ ಕೂಡ ಹಣ ಹೇಗೆ ತೆಗೆದುಕೊಳ್ಳಬೇಕು ಎಂಬ ನಿಯಮ ನಿಮಗೆ ಗೊತ್ತಿಲ್ಲ. ದುರ್ದರ ಪ್ರಸಂಗ ಇದು ಬಂದಿದೆ. ಕೋ ಆಪರೇಟಿವ್ ಅಡ್ವೈಜರಿ ಕಮೀಟಿಗೆ ನಿಮ್ಮ ಪಾರ್ಟಿಯವರು ಚುನಾವಣೆಯಲ್ಲಿ ಸೋತವರನ್ನು ನೇಮಕ ಮಾಡುತ್ತೀರಿ. ಅಂಥವರಿಗೆ ಸಹಕಾರ ಅಂದರೆ ಏನು ಎನ್ನುವುದು ಗೊತ್ತಿರುವುದಿಲ್ಲ. ಅಂಥವರು ಏನು ಸಲಹೆ ಮಾಡಬಲ್ಲರು ? ಇದನ್ನು ನೋಡಿದರೆ ನಿಮ್ಮ ಸಹಕಾರ ಇಲಾಖೆ ಹೇಗೆ ನಡೆಯುತ್ತಿದೆ ಎಂಬುದು ಗೊತ್ತಾಗುತ್ತದೆ.

ಇನ್ನು ಪ್ರೊಸೆಸಿಂಗ್ ಸೊಸೈಟಿಗಳು ಬೆಳವಣಿಗೆ ಆಗಬೇಕು. ಯಾಕೆಂದರೆ ಸಾಮಾನು ಖರೀದಿ ಮಾಡತಕ್ಕಂಥ ಒಂದು ವ್ಯವಸ್ಥೆ ಇಲ್ಲದೇ ಹೋದರೆ ತೊಂದರೆಯಾಗುತ್ತದೆ. ಪ್ರೊಸೆಸಿಂಗ್ ಸೊಸೈಟಿ ಎಲ್ಲಾ ಕಡೆ ಟೌಮಿನಲ್ಲಿ ತರಬೇಕು ಮತ್ತು ಇದಕ್ಕೆ ಸಹಾಯ ಮಾಡಬೇಕು. ಬರೀ ಮೂರು ವರ್ಷಕ್ಕೊಮ್ಮೆ ಸೊಸೈಟಿ ಆಡಿಟ್ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಕ್ಷುಲ್ಲಕ ಕಾರಣಗಳು ಆಡಿಟ್ ರಿಪೋರ್ಟಿನಲ್ಲಿ ಇರುತ್ತವೆ. ಮಹತ್ವದ ವಿಷಯ ಎತ್ತಿ ಹೇಳುವುದಿಲ್ಲ. ಇದರ ಬಗ್ಗೆ ನಾನು ಮಾನ್ಯ ಮುಖ್ಯಿಗಳಾದ ಶ್ರೀ ನಾಡಗೌಡರನ್ನು ಒಬ್ಬರ ಮೇಲೆಯೇ ಆರೋಪ ಮಾಡುವುದಿಲ್ಲ. ಅವರನ್ನು ಮುಂದೆ ಮಾಡಿ ಇವರ ಹಿಂದೆ ಕೆಲವರ ಮಂತ್ರಿ ಮಂಡಳ ಇದೆ. ಇದು ಸಪ್ತ ಮಂಡಳವಾಗಿದೆ, ಹಂಚಿಕೊಳ್ಳುವ ಬ್ರಷ್ಟಚಾರಿ ಮಂಡಳವಾಗಿದೆ.

ಇನ್ನು ಸ್ಟೇಟ್ ಏಡ್ ಕೊಡುವಾಗ ಅದನ್ನು ಹೊಣೆಗೇಡಿತನದಿಂದ ಕೊಡುತ್ತಿದ್ದಾರೆ. ಇದರಲ್ಲಿ ಒಂದು ಪ್ರಾಮಾಣಿಕವಾದ ರೀತಿ ಪಾಲಿಸಿ ಇದೆಯೇ ? ಒಂದು ಪ್ರಾಮಾಣಿಕವಾದ ಪಾಲಿಸಿಗೆ ಅನುಗುಣವಾಗಿ ಕೊಡುತ್ತಾರೆಯೇ ? ಹರಿಜನರ ಅಪ್ ಲಿಫ್ಟಗಾಗಿ ಹೌಸಿಂಗ್ ಸ್ಕೀಂ ಇದೆ. ನಿಮ್ಮ ಅವಧಿಯಲ್ಲಿ ಒಂದಾದರೂ ಕಲ್ಯಾಣಕರ ಯೋಜನೆ ಮಾಡಿಸಿದ್ದು ಕಂಡು ಬಂದರೆ ಅದನ್ನು ಸ್ವಾಗತ ಮಾಡುತ್ತೇನೆ. ದಯವಿಟ್ಟು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು

(ಶ್ರೀ ಕೆ. ಹೆಚ್. ಪಾಟೀಲ್)

ಮುಂದೆ ಕೆ. ಎಚ್. ಪಾಟೀಲರು ಆಥವಾ ಇತರ ಸದಸ್ಯರು ಉಗ್ರ ಟೀಕೆ ಮಾಡದಂತೆ ವ್ಯವಸ್ಥೆ ಮಾಡಬೇಕು ಆಗ ನಮ್ಮ ರಾಜ್ಯ ಉಳಿಯುತ್ತದೆ. ಇಲ್ಲದಿದ್ದರೆ ನೀವು ನಮ್ಮ ರಾಜ್ಯವನ್ನು ಮಾರಿ ಬಿಡುತ್ತೀರಿ. ಇಂದು ಈ ಸದನದ ಮುಖಾಂತರ ಮಾನ್ಯ ಅಧ್ಯಕ್ಷರ ಮುಖಾಂತರ ಕೇಂದ್ರ ಸರಕಾರವನ್ನು ಕೇಳ ಬೇಕಾದ ಪ್ರಸಂಗ ಬಂದಿದೆ. ನ್ಯಾಷನಲ್ ಡವಲಪ್ಮೆಂಟ್ ಕೌನ್ಸಿಲ್ಲನ್ನು ಕೇಳಬೇಕಾದ ಕಾಲಬಂದಿದೆ. ಮೈಸೂರು ರಾಜ್ಯಕ್ಕೆ ಹಣ ಕೊಟ್ಟಿದ್ದೇವೆ ಎಂದು ಅವರು ಹೇಳುತ್ತಾರೆ. ಹುಬ್ಬಳ್ಳಿ ಬಾಗಲಕೋಟೆ ಎಲ್ಲ ಸಹಕಾರೀ ಸೊಸೈಟಿ ಗಳಿಗೆ ಬಿಲ್ಲುಗಳಿಗಾಗಿ ಹಣ ಕೊಟ್ಟಿದ್ದಾರೆ ಆದರೆ ಇದರಿಂದ ಏನಾಗಿದೆ ಅಂದರೆ ಕೆಲವಾರು ವ್ಯಕ್ತಿಗಳ ಹಿತಕ್ಕಾಗಿ ಹಣ ಕೊಟ್ಟಿದೆ. ರಾಜ್ಯದ ಹಿತಕ್ಕಾಗಿ ಹಣ ಕೊಟ್ಟಿಲ್ಲ ಸಹಕಾರ ಚಳವಳಿಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಈಗ ನಾನು ಮಾತನಾಡಲು ಕೊಟ್ಟಿರುವ ಅವಕಾಶ ಮುಗಿದಿದೆ. ಈ ವಿಷಯದ ಬಗ್ಗೆ ವಿವರವಾಗಿ ಮಾತನಾಡುವುದಾದರೆ ಒಂದೆರಡು ದಿವಸಗಳು ಬೇಕಾಗುತ್ತದೆ. ಆದುದರಿಂದ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಇದನ್ನು ತನಿಖೆ ಮಾಡುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ತನಿಖೆ ಪ್ರಾರಂಭ ಮಾಡಿದರೆ ಭ್ರಷ್ಟಾಚಾರದ ಬಗ್ಗೆ ಅವಶ್ಯಕವಾದ ಕಾಗದ ಪತ್ರಗಳನ್ನು ಹಾಜರ ಪಡಿಸಲಾಗುವುದು. ಹಣ ದುರುಪಯೋಗ ಮಾಡಿಕೊಳ್ಳುವುದರಿಂದ ಸೊಸೈಟಿಗಳನ್ನು ನೀವು ಮುರಿಯಲು ಹೊರಟಿದ್ದೀರಿ. ಆದರೆ ಸೊಸೈಟಿಗಳನ್ನು ಮುರಿಯಲು ಸಾಧ್ಯವಿಲ್ಲ. ಆದುದರಿಂದ ತನಿಖೆ ನಡೆಸುವ ಕ್ರಮ ತೆಗೆದುಕೊಳ್ಳ ಬೇಕು ಎಂದು ಇಷ್ಟು ಮಾತ್ರ ಹೇಳಿ ಸನ್ನ ಮಾತು ಮುಗಿಸುತ್ತೇನೆ.

3-30 P.M.

† ಶ್ರೀ ಎಂ. ಆರ್. ಪಾಟೀಲ್ (ನವಲಗುಂದ):—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳ ಪೈಕಿ ಕೋ ಆಪರೇಷನ್ ಡಿಮ್ಯಾಂಡಿಗೆ ಸಂಬಂಧಪಟ್ಟಹಾಗೆ ಮತ್ತು ಇನ್ನು ಕೆಲವು ಸಹಕಾರ ಸಂಸ್ಥೆಗಳ ಬೆಳವಣಿಗೆ ಹಾಗೂ ಅವುಗಳು ಸಾಧಿಸಿರತಕ್ಕ ಪ್ರಗತಿ ಮತ್ತು ತಾಲ್ಲೂಕ್ ಮಟ್ಟಗಳಲ್ಲಿ ಸ್ಥಾಪಿತವಾಗಿರತಕ್ಕ ಕ್ರೆಡಿಟ್ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಗಳ ಬಗ್ಗೆ ನಾನು ಆಡಬೇಕಾದ ಕೆಲವು ಮಾತುಗಳುಂಟು. ಅವುಗಳನ್ನು ಈಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇಲ್ಲಿಗೆ ಸುಮಾರು ೧೫ ವರ್ಷಗಳ ಹಿಂದೆ ರಾಜ್ಯದಲ್ಲಿ ಭಾರತ ಸರ್ಕಾರದವರು ಏರ್ಪಡಿಸಿದ್ದ ಒಂದು ರೂರಲ್ ಕ್ರೆಡಿಟ್ ಸರ್ವೆ ಸಂಸ್ಥೆಯವರು ರಾಜ್ಯಾದ್ಯಾಂತವೂ ತಿರುಗಿ ಅವರು ಅಮೂಲಾಗ್ರವಾಗಿ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆ ವರದಿಯಲ್ಲಿ ಅಡಕವಾಗಿರತಕ್ಕ ವಿಚಾರಗಳಲ್ಲಿ ಬಹಳ ಪ್ರಾಮುಖ್ಯ-ವಾದವುಗಳೆಂದರೆ ಸಾಧಾರಣವಾಗಿ ದೇಶಾದ್ಯಂತವೂ ಇರತಕ್ಕ ರೈತಾಪಿವರ್ಗದ ಜನರಲ್ಲಿ ಒಕ್ಕಲುತನದವರಲ್ಲಿ ನೂರಕ್ಕೆ ಅರವತ್ತೈದಕ್ಕೆ ಮೇಲ್ಪಟ್ಟು ಜನರು ಸಾಲದಲ್ಲಿ ಮುಳುಗಿದವರಾಗಿದ್ದಾರೆ, ಆ ಜನರು ಸ್ಥಳೀಯ ಶ್ರೀಮಂತರ ಇಲ್ಲವೇ ಸೆಟ್ಟರ ಕೈಗಳಿಗೆ ಸಿಕ್ಕಿ ಅವರು ಹಣ್ಣಾಗಿದ್ದಾರೆ, ಅವರು ಬಹಳ ಶೋಷಣೆ-ಗೊಳಗಾಗಿದ್ದಾರೆ, ಅವರೆಲ್ಲರೂ ಆ ಶ್ರೀಮಂತರ ಗುಲಾಮರಂತೆ ಕೆಲಸಮಾಡಿಕೊಂಡಿದ್ದಾರೆ, ಆ ಜನರನ್ನು ಆ ಗುಲಾಂಗಿರಿಯಿಂದ ವಿಮೋಚನೆ ಮಾಡಬೇಕಾಗಿದ್ದರೆ ಸರ್ಕಾರದವರು ಆ ಹಳ್ಳಿಯ ಜನರಿಗೆ ಉದಾರವಾಗಿ ಧನಸಹಾಯ ಮಾಡಲು ಮುಂದೆ ಬರಬೇಕೆಂದೂ ಮತ್ತು ಹಳ್ಳಿಯಿಂದ ಹಿಡಿದು ರಾಜಧಾನಿಯವರೆಗೂ ಒಕ್ಕಲುತನದಲ್ಲಿ ತೊಡಗಿರತಕ್ಕ ಸಣ್ಣ ಸಣ್ಣ ರೈತರಿಗೆ ಸಾಲ ಕೊಡಲು ಅಲ್ಲಲ್ಲಿ ಸಹಕಾರ ಸಂಘಗಳನ್ನೂ ಕ್ರೆಡಿಟ್ ಕೋಆಪರೇಟೀವ್ ಬ್ಯಾಂಕುಗಳನ್ನೂ ಮತ್ತು ರೈತರು ಬೆಳೆಯುತಕ್ಕ ಬೆಳೆಗಳಿಗೆ ಒಂದು ನ್ಯಾಯವಾದ ಬೆಲೆಯನ್ನು ದೊರಕಿಸಿ ಕೊಡುವುದಕ್ಕಾಗಿ ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿ ಅವರು ಆ ಶೋಷಣೆಮಾಡತಕ್ಕ ವರ್ಗವನ್ನು ಪ್ರತಿಗಟಿಸಿ ನಿಲ್ಲುವಂತೆ ಅವರಿಗೆ ಸಹಾಯವನ್ನು ನೀಡಿ ಅವರನ್ನು ಋಣವಿಮುಕ್ತರನ್ನಾಗಿ ಮಾಡಿ ಅವರಿಗೆ ಬೇಕಾದ ಧನಸಹಾಯವನ್ನು ನೀಡಿ, ಹಾಗೂ ಆ ಸಹಕಾರ ಸಂಸ್ಥೆಗಳು ಒಳ್ಳೆಯ ಸುಸಂಘಟಿತರಾದ ಮತ್ತು ಕುಶಲರಾದ ಜನಗಳಿಂದ ಕೂಡಿದ ಆಡಳಿತ ವರ್ಗಕ್ಕೆ ಅವುಗಳನ್ನೊಪ್ಪಿಸಿ ಆ ಗ್ರಾಮಾಂತರ ಪ್ರದೇಶಗಳಲ್ಲಿ ಋಣದಲ್ಲಿ ಮುಳಗಿರತಕ್ಕ ಜನರನ್ನು ಋಣಮುಕ್ತರನ್ನಾಗಿ ಮಾಡಬೇಕು ಎಂಬುದಾಗಿ ಆ ವರದಿಯಲ್ಲಿ ಹೇಳಿದ್ದಾರೆ. ಹಾಗೆ ಅವರು ಆ ವರದಿಯಲ್ಲಿ ಹೇಳಿರತಕ್ಕದ್ದನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸಂಪೂರ್ಣವಾಗಿ ಅನುಮೋದಿಸಿರುತ್ತವೆ ಮತ್ತು ಅದನ್ನು ದೇಶಾದ್ಯಂತವೂ ಜಾರಿಗೆ ತರುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನೂ ಕೂಡ ನಡೆಸಿವೆ. ಆದರೆ ಹಾಗೆ ಆ ಗ್ರಾಮಾಂತರ ಪ್ರದೇಶಗಳಲ್ಲಿದ್ದ ಸಾಲದ ಹೊರೆಯನ್ನು ಕಳೆದ ೧೦-೧೨ ವರ್ಷಗಳಲ್ಲಿ ಎಷ್ಟರಮಟ್ಟಿಗೆ ತಗ್ಗಿಸಲಾಗಿದೆ, ಎಷ್ಟರಮಟ್ಟಿಗೆ ಈ ಹಾದಿಯಲ್ಲಿ ಪ್ರಗತಿಯನ್ನು ನಾವು ಸಾಧಿಸಿದ್ದೇವೆ ಎಂಬುದನ್ನು ಈಗ ವಿಚಾರ ಮಾಡುವ ಸಮಯ ಬಂದಿದೆ.

ಹಳ್ಳಿಯ ಒಕ್ಕ ಗರಿಗೆ ಸಾಲ ಕೊಡತಕ್ಕ ವಿಚಾರದಲ್ಲಿ ನಾವು ಕೆಲಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದಾಗ್ಯೂ ರೈತರು ಬೆಳೆದ ಮಾಲನ್ನು ಉಳಿದ ಕಡೆ ಸಿಕ್ಕುವ ಬೆಲೆಗಿಂತ ಸ್ವಲ್ಪ ಹೆಚ್ಚು ಬೆಲೆ ಸಿಕ್ಕುವಂತೆ ಮಾಡಲು ಅಲ್ಲಲ್ಲಿ ಸ್ಥಾಪಿತವಾಗಿರತಕ್ಕ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಗಳು ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧಿಸಿವೆ ಎಂಬುದನ್ನು ಅವಲೋಕನ ಮಾಡಿದರೆ ಅದರಲ್ಲಿ ನಾವು ಸಂಪೂರ್ಣವಾಗಿ ವಿಫಲರಾಗಿದ್ದೇವೆ ಎಂದು ಹೇಳಬೇಕಾಗಿದೆ. ಈ ದಿವಸ ಒಂದೆರೆಡು ಜಿಲ್ಲೆಗಳಲ್ಲಿ ಸ್ಥಾಪಿತವಾಗಿರತಕ್ಕ ಮಾರ್ಕೆಟಿಂಗ್ ಸೊಸೈಟಿಗಳೂ ಮತ್ತು ಸ್ಟೇಟ್ ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿ ಇವುಗಳು ಆ ರೈತರು ಬೆಳೆದ ಮಾಲುಗಳನ್ನು ಅವರಿಗೆ ಲಾಭದಾಯಕವಾಗತಕ್ಕ ರೀತಿಯಲ್ಲಿ ಮಾರಾಟ ಮಾಡುವುದನ್ನು ಕೈಬಿಟ್ಟು ಆ ಬಗ್ಗೆ ಯಾವ ಪ್ರಯತ್ನವನ್ನೂ ಮಾಡದೆ ಗೊಬ್ಬರವನ್ನು ಹಂಚತಕ್ಕ ಕೆಲಸವನ್ನು ಕೈಗೊಂಡು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಉಂಟುಮಾಡಿದ್ದಾರೆ. ಇದು ಬಹಳ ದುಃಖಕರವಾದ ವಿಚಾರ. ಇನ್ನಾದರೂ ಆ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಆ ಗೊಬ್ಬರವನ್ನು ಹಂಚತಕ್ಕ ಕೆಲಸವನ್ನು ಅಗ್ರಿಕಲ್ಚರಲ್ ಇಲಾಖೆಗೆ ವಹಿಸಿ ಅದು ರೈತನು ಉತ್ಪಾದನೆ ಮಾಡತಕ್ಕ ಬೆಳೆಗಳಿಗೆ ಒಂದು ಉತ್ತಮ ಧಾರಣೆ ಸಿಗುವಂತೆ ಮಾಡತಕ್ಕ ಕೆಲಸವನ್ನು ಕೈಗೊಳ್ಳಬೇಕಾದ್ದು ಅತ್ಯಗತ್ಯ. ಇಲ್ಲಿಯತನಕ ಆ ಕೆಲಸವನ್ನು ಮಾಡದೆ ಇದ್ದುದಕ್ಕಾಗಿ ನಾನು ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಈ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಇನ್ನಾದರೂ ಅವು ತಮ್ಮ ಉದ್ಯೋಗದತ್ತ ಗಮನಕೊಡದಿದ್ದರೆ ಇವು ಬಹಳ ದಿನಗಳವರೆಗೆ ಉಳಿಯಲಾರವು. ಸರ್ಕಾರದವರು ಈ ಪ್ರಕ್ಯೂರ್‌ಮೆಂಟ್ ಮತ್ತು ಗೊಬ್ಬರಹಂಚತಕ್ಕ ಕೆಲಸಗಳನ್ನು ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳಿಂದ ತಪ್ಪಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇಲ್ಲವಾದರೆ ಅವೂ ಕೂಡ ಸದ್ಯದಲ್ಲೆ ಮುಗ್ಗರಿಸಿ ಕಪ್ಪೆಳಿಸಿ ಬೀಳುತ್ತವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಮಾರ್ಕೆಟಿಂಗ್ ಸೊಸೈಟಿಗಳನ್ನು ನೇಮಕ ಮಾಡಿದ್ದಾಗ್ಯೂ ಅಲ್ಲಿ ಅವುಗಳಿಂದ ರೈತರಿಗೇನು ಅಷ್ಟು ಅನುಕೂಲವಾದಂತೆ ಕಂಡುಬರುತ್ತಿಲ್ಲ. ಅಲ್ಲಿಯೂ ಅಷ್ಟು ಯಶಸ್ವಿಯನ್ನು ಅವು ಸಾಧಿಸಿಲ್ಲ. ಅಲ್ಲಿ ಮಾಮೂಲಿನಂತೆ ಸಾಹುಕಾರರೂ ಮತ್ತು ದಳ್ಳಾಳಿಗಳೂ ರೈತರಿಗೆ ಸಾಕಷ್ಟು ಸಾಲಗಳನ್ನು ಕೊಡುತ್ತಿದ್ದಾರೆ. ಅವರು ಮೊದಲಿನಂತೆ ವೈಯಕ್ತಿಕವಾಗಿ ವ್ಯಾಪಾರವನ್ನು ನಡೆಸತಕ್ಕ ಒಂದು ಪದ್ಧತಿ ಇನ್ನೂ ಸಾಗುತ್ತಲೇ ಬಂದಿದೆ. ಇಲ್ಲಿಯೂ ಕೂಡ ನಾವು ಪ್ರಗತಿಯನ್ನು ಹೊಂದಿರುವುದಿಲ್ಲ. ಅಂದರೆ ರೈತರಿಗೆ ಸಾಲ ಕೊಡತಕ್ಕ ವಿಚಾರದಲ್ಲಿಯೂ ನಾವು ಪ್ರಗತಿಯನ್ನು ಸಾಧಿಸಿಲ್ಲ ಎನ್ನಬಹುದು. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಅಲ್ಲಿ ಕೋಆಪರೇಟೀವ್ ಕ್ರೆಡಿಟ್ ಬ್ಯಾಂಕುಗಳಿಂದ ಸಾಲಪಡೆದವರ ಪೈಕಿ ನೂರಕ್ಕೆ ೨೫ ಜನರು ಮಾತ್ರ ಅದಕ್ಕೆ ತಮ್ಮ ಬೆಳೆಯನ್ನು ಮಾರಾಟ ಮಾಡಿ ಸಾಲವನ್ನು ತೀರಿಸತಕ್ಕ ಸ್ಥಿತಿಯಲ್ಲಿರುತ್ತಾರೆ. ಉಳಿದವರಿಗೆ ಅದೂ ಕೂಡ ಸಾಧ್ಯವಿಲ್ಲ. ಇನ್ನು ಉಳಿದ ಸಾಲಗಾರರೇನಿದ್ದಾರೆ ಅವರು ಈ ಸಹಕಾರ ಸಂಸ್ಥೆಗಳಲ್ಲೂ ಸಾಲಗಾರರಾಗಿದ್ದಾರೆ ಮತ್ತು ಹೊರಗಡೆಯಲ್ಲೂ ಸಾಹುಕಾರರಲ್ಲೂ ಸಾಲಗಾರರಾಗಿದ್ದಾರೆ. ಹೀಗೆ ಅವರು ಎರಡೂ ಕಡೆಗಳಲ್ಲಿ ಸಾಲಗಾರರಾಗಿದ್ದಾರೆ. ಅವರಿಗೆ ತಮ್ಮ ಸಾಲವನ್ನು ಸಕಾಲಕ್ಕೆ ಸಂಸ್ಥೆಗೆ ಮರುಪಾವತಿ ಮಾಡತಕ್ಕ ಜೈತನ್ಯವಿಲ್ಲ. ಆದ್ದರಿಂದ ಆ ಸಾಲಗಾರರೆಲ್ಲಾ ಹಣವನ್ನು ಸಹಕಾರ ಸಂಸ್ಥೆಗೆ ಮರುಪಾವತಿ ಮಾಡತಕ್ಕ ಬಗ್ಗೆ ಎಲ್ಲರೂ ಸೇರಿ ಒಂದು ಕಟ್ಟಾ ಪರತಂತ್ರ ಹಾಕುತ್ತಾರೆ—ಅದೇನು ಎಂದರೆ ಅವರು ಸಾಲದ ಹಣವನ್ನು ಮರುಪಾವತಿ ಮಾಡಿದ ನಂತರ ಮೂರನೆ ವರ್ಷಕ್ಕೆ ಮತ್ತೆ ಸಾಲಮಂಜೂರು ಮಾಡುವುದಕ್ಕೆ ಭರವಸೆಯನ್ನು ಕೊಟ್ಟರೆ ಮಾತ್ರ ಆ ಸಾಲದ ಹಣವನ್ನು ಮರುಪಾವತಿ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು. ಅಂಥ ಒತ್ತಾಯಕ್ಕೆ ಅವರು ಮಣಿಯಲೇ ಬೇಕು ಇಲ್ಲದಿದ್ದರೆ ಅವರಿಗೆ ಕೊಟ್ಟ ಸಾಲ ಹಿಂದಕ್ಕೆ ಬರುವಂತಿಲ್ಲ. ಹಾಗೆ ಅವರು ಸಾಲವನ್ನು ಮತ್ತೆ ಕೊಡತಕ್ಕ ಭರವಸೆಯನ್ನು ಕೊಟ್ಟ ಪಕ್ಷದಲ್ಲಿ ಆ ರೈತರುಗಳೆಲ್ಲಾ ತಮ್ಮ ಬೆಳೆಯನ್ನು ಮಾರಿ ಆದರಿಂದ ಬಂದ ಹಣವನ್ನು ಸಾಹುಕಾರಿ ವರ್ತಕರಿಗೆ ಪಾವತಿಮಾಡಿ ತಾವು ಮತ್ತೆ ಸಾಲಕ್ಕಿಕ್ಕತಕ್ಕ ಕಡೆ ಪಠಾಣರ ಬಡ್ಡಿಯನ್ನಾದರೂ ಕೊಟ್ಟು ತಿಂಗಳು ಎರಡು ತಿಂಗಳಿಗೆ ಸಾಲವನ್ನು ತಂದು ಆ ಸಹಕಾರ ಸಂಘಕ್ಕೆ ಸಾಲವನ್ನು ಭರ್ತಿಮಾಡುತ್ತಾರೆ ಆ ಕಾಲದಲ್ಲಿ ರೈತರು ನೂರಕ್ಕೆ ೨೦–೨೫ ರಷ್ಟು ಬಡ್ಡಿಯನ್ನು ಕೊಟ್ಟು ಹಣವನ್ನು ತಂದು ಸೊಸೈಟಿಗಳಿಗೆ ಭರ್ತಿ ಮಾಡುತ್ತಾರೆ. ಆನಂತರ ಆ ಸಹಕಾರ ಬ್ಯಾಂಕುಗಳಿಂದಲೇ ಸಾಲ ಪಡೆದು ಆ ದುಬಾರಿ ಬಡ್ಡಿಯ ಮೇಲೆ ತಂದ ಸಾಲವನ್ನು ತೀರಿಸುತ್ತಿದ್ದಾರೆ. ಹೀಗೆ ರೈತರು ಒಂದು ವಿಚಿತ್ರವಾದ ವಿಪತ್ತಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರಿಗೆ ಸಾಲ ಒಂದು ಕಡೆಯಲ್ಲಿ ಇಲ್ಲ, ಎರಡು ಕಡೆಗಳಲ್ಲಿ ಸಾಲ ಇರುತ್ತದೆ. ಇಂಥ ಒಂದು ವಿಚಿತ್ರ ರೀತಿಯಿಲ್ಲಿ ಸಾಲಪಾವತಿ ಆಗುತ್ತಿರುವುದನ್ನು ಗಮನಿಸಿದ ರಿಜರ್ವ್ ಬ್ಯಾಂಕಿನವರು ಇಷ್ಟು ಅಪಾರವಾದ ಸಾಲವನ್ನು ಹೇಗೆ ಇಷ್ಟು ಖಚಿತವಾಗಿ ನೀವು ಮಾರ್ಚ್ ತಿಂಗಳಲ್ಲಿ ಪ್ರಾರಂಭಮಾಡಿ ಮೇ ತಿಂಗಳೊಳಗೆ ಸಂಪೂರ್ಣವಾಗಿ ವಸೂಲ್ಮಾಡಲು ಸಾಧ್ಯ ? ಇದೇನು ಬರಿ ಬುಕ್ ಅಡ್ಜೆಸ್ಟ್‌ಮಾಡಿ ಹೀಗೆ ಸಾಲವಸೂಲಾಯಿತೆಂದು ಲೆಕ್ಕಗಳಲ್ಲಿ ತೋರಿಸುತ್ತಿದ್ದೀರಾ ಹೇಗೆ ಎಂದು ಪ್ರಶ್ನೆ ಮಾಡುತ್ತಿದ್ದಾರೆ ನಾಳೆ ಏನಾದರೂ ರಿಜರ್ವ್‌ಬ್ಯಾಂಕ್ ಸಾಲಕೊಡತಕ್ಕದ್ದನ್ನು ನಿಲ್ಲಿಸಿದಲ್ಲಿ ನಮ್ಮ ಸೆಂಟ್ರಲ್ ಕ್ರೆಡಿಟ್ ಕೋಆಪರೇಟೀವ್ ಬ್ಯಾಂಕ್ ಬಹಳ ಕಷ್ಟದಲ್ಲಿ ಸಿಕ್ಕಿ ಬೀಳಬಹುದು.

(ಶ್ರೀ ಎಂ. ಆರ್. ಪಾಟೀಲ)

ಇದಲ್ಲದೆ ಇನ್ನೂ ಒಂದು ದೊಡ್ಡ ದೋಷ ಈ ಸಹಕಾರ ಬ್ಯಾಂಕುಗಳಲ್ಲಿದೆ. ಕೆಲವು ಬ್ಯಾಂಕುಗಳಲ್ಲಿ ನೂರು ರೂಪಾಯಿ ಸಾಲ ಕೊಡಬೇಕಾದರೆ ಅದಕ್ಕೆ ಪ್ರತಿ ತಿಂಗಳೂ ಹತ್ತು ರೂಪಾಯಿಗಳನ್ನು ಷೇರ್ ರೂಪದಲ್ಲಿ ಕಟ್ಟಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಹಾಗೆ ಒತ್ತಾಯ ಮಾಡುವುದು ಒಂದು ವರ್ಷದಲ್ಲಿ ತಿಂಗಳಲ್ಲಿ. ಅವರು ಪ್ರತಿ ತಿಂಗಳೂ ೧೦ ರೂಪಾಯಿನಂತೆ ಷೇರನ್ನು ಕಟ್ಟುತ್ತಲೇ ಇರಬೇಕಂತೆ. ಅಷ್ಟೇ ಅಲ್ಲದೆ ಅಲ್ಲಿ ನೂರು ರೂಪಾಯಿ ಸಾಲ ಕೊಡಬೇಕಾದರೆ ಮೊದಲೇ ಬಡ್ಡಿಗೆಂದು ಹೇಳಿ ಹತ್ತು ರೂಪಾಯಿಗಳನ್ನು ಮುರಿದು ಕೊಂಡು ಆತನಿಗೆ ೯೦ ರೂಪಾಯಿಗಳನ್ನೂ ಮಾತ್ರ ಕೊಡಲಾಗುತ್ತದೆ. ಹಾಗೆ ೯೦ ರೂಪಾಯಿ ಸಾಲಕ್ಕೆ ೧೦ ರೂಪಾಯಿಗಳನ್ನು ಷೇರಿಗಾಗಿಯೂ ೧೦ ರೂಪಾಯಿಗಳನ್ನು ಬಡ್ಡಿಗಾಗಿಯೂ ಹೀಗೆ ಒಟ್ಟು ೨೦ ರೂಪಾಯಿಗಳನ್ನು ಕೊಡಬೇಕಾಗುವುದು. ಅಂದರೆ ಆತನು ನೂರಕ್ಕೆ ಒಂದು ವರ್ಷಕ್ಕೆ ೨೨ ರೂಪಾಯಿಗಳ ಬಡ್ಡಿಯನ್ನು ಕೊಟ್ಟಹಾಗಾಯಿತು. ಇನ್ನು ರಿಸರ್ವ್ ಮಾಡತಕ್ಕ ಹಣವೆಂದು ಹೇಳಿ ನೂರಕ್ಕೆ ನೂರು ರೂಪಾಯಿಗಳನ್ನು ಷೇರ್ ರೂಪದಲ್ಲಿ ವಸೂಲ್ಮಾಡುತ್ತಿದ್ದಾರೆ. ಹೀಗಾಗಿ ಒಬ್ಬ ರೈತ ನೂರು ರೂಪಾಯಿ ಸಾಲ ಪಡೆಯಬೇಕಾದರೆ ನೂರು ರೂಪಾಯಿಗಳನ್ನು ಷೇರ್ ರೂಪದಲ್ಲಿ ಕಟ್ಟಬೇಕು ಮತ್ತು ನೂರಕ್ಕೆ ೨೨ ರಂತೆ ಬಡ್ಡಿ ಕೊಡಬೇಕು. ಈ ವಿಚಾರವನ್ನು ನಾನು ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

This is an institution of exploitation. This cannot be tolerated This is a pernicious practice. This pernicious practice of collecting share amount of Rs. 10 every year from the borrower must be stopped.

ಸರ್ಕಾರದವರು ಇದನ್ನು ತಡೆಗಟ್ಟದಿದ್ದರೆ ರೈತರು ಖಂಡಿತ ಉಳಿಯುವುದಿಲ್ಲ. ರೈತರು ಇಂಥ ಸಹಕಾರ ಸಂಘಗಳನ್ನು ಸದ್ಯದಲ್ಲೆ ಬಿಡುವುದಕ್ಕೂ ಸಿದ್ಧವಾಗುತ್ತಿದ್ದಾರೆ ಕೆಲವು ಜನರಿಂದ ಕೇವಲ ೧೦ ರೂಪಾಯಿ ಷೇರ್ ತೆಗೆದುಕೊಂಡು ಅವನಿಗೆ ಆಡವಿಯಲ್ಲಿ ಅಂಗೈ ಅಗಲ ಜಮೀನು ಇಲ್ಲದಿದ್ದರೂ ಅವನಿಗೆ ಅಪಾರವಾಗಿ ಸಾಲವನ್ನು ಕೊಟ್ಟಿದ್ದಾರೆ ಇನ್ನು ಕೆಲವರಿಗೆ ನೂರು ರೂಪಾಯಿನ ಸಾಲಕ್ಕೆ ನೂರು ರೂಪಾಯಿಗಳ ಷೇರ್ ಇರಬೇಕೆಂದು ಹೇಳತಕ್ಕದ್ದು ಯಾವ ನೀತಿ ?

ಈ ರೀತಿ ಇರುವುದರಿಂದ ಸಹಕಾರ ಸಂಘಗಳ ಆಡಳಿತಕ್ಕ ಧಕ್ಕೆ ತರಲಿಕ್ಕೆ ಅವಕಾಶವಾಗುತ್ತದೆ. ಏತಕ್ಕೆಂದರೆ ೧೦೦ ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕೋಸ್ಕರ ೧೦ ರೂಪಾಯಿ ಷೇರು ಮೊಬಲಗನ್ನು ತೆಗೆದುಕೊಂಡರೆ ಆ ಸಹಕಾರ ಸಂಘದಲ್ಲಿ ಆತ ಪೂರ್ಣವಾಗಿ ಮೆಂಬರ್ ಆಗಿ ಇರುವುದಿಲ್ಲ. ಇದರಿಂದಾಗಿ ಸಹಕಾರ ಸಂಘದ ಆಡಳಿತ ಕೆಟ್ಟು ಹೋಗಿ ಸಂಸ್ಥೆಯೂ ಹಾಳಾಗಿ ಹೋಗುತ್ತದೆ. ಯಾವ ಸದಸ್ಯರೂ ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಳ್ಳದೆ ಇರುವುದಿಲ್ಲ. ಸಹಕಾರ ಸಂಘಗಳಲ್ಲಿ ಯಾವನಾದರೂ ಸಾಲ ತೆಗೆದುಕೊಂಡವನು ಮೂರನೆಯ ವರ್ಷದೊಳಗೆ ಆ ಸಾಲವನ್ನು ತೀರಿಸಿದರೆ ಪರವಾಗಿಲ್ಲ ಹಾಗೆ ಸಾಲವನ್ನು ತೆಗೆದುಕೊಂಡು ವಾಪಸ್ಸು ಕೊಡದೇ ಇದ್ದರೆ ಅವನ ಸದಸ್ಯತ್ವ ರದ್ದಾಗುವುದಿಲ್ಲ. ಈ ರೀತಿ ಅವನು ವಾಪಸ್ಸು ಕಟ್ಟದಿದ್ದರೆ ಅವನ ಸದಸ್ಯತ್ವ ರದ್ದಾಗುವಂತೆ ಮಾಡಬೇಕು. ಈ ನಿಯಮ ಹಾಕದಿದ್ದರೆ ಆ ಸಂಸ್ಥೆಯು ಹಾಳಾಗಿ ಹೋಗುವುದಕ್ಕೆ ಕಾರಣವಾಗುತ್ತದೆ. ಯಾವ ಯಾವ ಮೆಂಬರ್ ಆಯಾಯ ಸಂಸ್ಥೆಯಲ್ಲಿ ಈ ರೀತಿ ಇನ್‌ವಾಲ್ಟ್ ಆಗಿರುತ್ತಾನೋ ಅವನು ಈ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸದಸ್ಯತನ ಪಡೆದುಕೊಂಡು ಏನು ಜವಾಬ್ದಾರಿಯಿಂದ ಕೆಲಸ ಮಾಡಬಲ್ಲ. ಕೇವಲ ೧೦ ರೂಪಾಯಿ ಷೇರು ತೆಗೆದುಕೊಂಡ ಒಬ್ಬ ಪ್ರಜಾರಿ ಕೈಯಲ್ಲಿ ಈ ಸಂಸ್ಥೆ ಸಿಕ್ಕಿದರೆ ಆ ಸಂಸ್ಥೆಯು ಅವನತಿಯಾಗುತ್ತದೆ. ಇದಕ್ಕೆ ಬೇಕಾದರೆ ಒಂದು ಕಾಯಿದೆ ಮಂಡಲಿ ಹಣ ವಾಪಸ್ಸು ಕೊಡದಿದ್ದ ಡಿಫಾಲ್ಟಿಂಗ್ ಮೆಂಬರ್ಸ್ ಆ ಸೊಸೈಟಿಯಲ್ಲಿ ಇರಕ್ಕಕ್ಕದ್ದಲ್ಲ ಎಂದು. ಹಾಗಾದರೆ ಈ ಸಂಘದ ಉಳಿವು, ಇಲ್ಲದಿದ್ದರೆ ಈ ಸಂಸ್ಥೆಯು ಆಡಳಿತ ಕೆಟ್ಟು ಹೋಗುತ್ತದೆ ಎಂದು ಹೇಳುತ್ತೇನೆ.

ಈ ವೈಶಿಷ್ಟ್ಯವು ಸಹಕಾರಿ ಸಂಸ್ಥೆಗಳು ಮತ್ತು ಬ್ಯಾಂಕುಗಳು ಸಾಲ ನೀಡುತ್ತಾ ಇವೆ ಇದರಲ್ಲಿ ಒಂದು ತೊಂದರೆ ಇದೆ. ಯಾವನು ಸಾಲ ತೆಗೆದುಕೊಂಡಿರುತ್ತಾನೋ ಅವನು ಇಂಡಿವಿಜ್ಯೂಯಲ್ ಆಗಿ ಸಾಲ ತೆಗೆದುಕೊಂಡಿರುತ್ತಾನೆ ಇದು ಅಮಲ ಬಜಾವಣಿಗೆ ಕೋರ್ಟಿಗೆ ಹೋದರೆ ಒಂದು ಪ್ರಸಂಗ ಬರುತ್ತದೆ ಕಾನೂನು ಪ್ರಕಾರ ಯಾರು ಸಾಲ ತೆಗೆದುಕೊಂಡಿದ್ದಾರೋ ಅವರೇ ಬದ್ಧರು. ಬೇರೆ ಯವರ ಪ್ರಾಪರ್ಟಿ ಮೇಲೆ ಏನೂ ಕ್ರಮ ತೆಗೆದುಕೊಂಡರೆ ಅದು ಕ್ರಮಬದ್ಧವಾಗಿಲ್ಲ ಎನ್ನುವ ಪ್ರಸಂಗ ಬರುತ್ತದೆ. ಆದುದರಿಂದ ಈ ಸಹಕಾರಿ ಸಂಸ್ಥೆಯೋಗ್ಯವಾಗಿ ಬೆಳೆಯಬೇಕಾದರೆ ಈ ಕಾನೂನು ಬದಲಾವಣೆ ಆಗದೇ ಹೋದರೆ ಅಮಲ್ ಬಜಾವಣೆ ಮಾಡುವಾಗ ವಿಫಲವಾಗುತ್ತದೆ ಎಂದು ಸ್ಪಷ್ಟವಾಗಿ

ಹೇಳುತ್ತೇನೆ. ಮಹಾರಾಷ್ಟ್ರ ಮತ್ತು ಬಾಂಬೆ ಕಾನೂನಿನಲ್ಲಿ A person shall be entitled to be Member ಮತ್ತು a person includes a Joint family ಅಂತ ಇದೆ. ಆ ತರಹ ಕಾನೂನು ಇಲ್ಲಿಯೂ ಇದ್ದರೆ ಆ ಸಂಸ್ಥೆಯಲ್ಲಿ ಒಬ್ಬರು ಮೆಂಬರ್ ಆಗಿದ್ದರೂ ಸಾಲ ತೆಗೆದುಕೊಂಡರೆ ಎಲ್ಲರ ಮೇಲೂ ಜವಾಬ್ದಾರಿ ಇರುತ್ತದೆ. ದುರ್ದೈವದಿಂದ ನಮ್ಮ ಮೈಸೂರು ಕೋ-ಆಪರೇಟಿವ್ ಸೊಸೈಟಿ ಆಕ್ಟ್‌ನಲ್ಲಿ an individual shall be entitled to be a member ಎಂದು ಇರುವುದರಿಂದ ಆಮಲ್ ಬಜಾವಣೆ ನಡೆಸಲು ತೊಂದರೆಯಾಗುತ್ತದೆ. ಆದುದರಿಂದ ಯೋಗ್ಯ ರೀತಿಯಲ್ಲಿ ಈ ಕಾಯಿದೆಯನ್ನು ಬದಲಾಯಿಸಬೇಕೆಂದು ಹೇಳುತ್ತೇನೆ.

ನಾನು ಮೊದಲೇ ಹೇಳಿದಂತೆ ನಮ್ಮ ರೈತರನೇಕರು ಬರೀ ಕೋ-ಆಪರೇಟಿವ್ ಸೊಸೈಟಿ ಒಂದರಲ್ಲೇ ಸಾಲ ಪಡೆಯುವುದಷ್ಟೇ ಅಲ್ಲ ಬೇರೆ ಬೇರೆ ವ್ಯಾಪಾರಸ್ಥರು ಮತ್ತು ದಳ್ಳಾಳಿಗಳ ಹತ್ತಿರ ಸಾಲ ಪಡೆಯುತ್ತಾರೆ. ಹೀಗೆ ಅವರು ಎರಡು ಸಾಲಗಳನ್ನು ಮಾಡಿಕೊಂಡು ಅದನ್ನು ತೀರಿಸುವ ಶಕ್ತಿ ಇರುವುದಿಲ್ಲ. ಅತನು ಕೊ-ಆಪರೇಟಿವ್ ಸೊಸೈಟಿಯಲ್ಲಿ ಮೆಂಬರ್ ಆಗಿದ್ದರೂ, ದಳ್ಳಾಳಿಗಳು ಅಥವಾ ವ್ಯಾಪಾರಸ್ಥರುಗಳಾಟೆ ಮಾಡುವುದರಿಂದ ಅವರ ಸಾಲವನ್ನು ಮೊದಲು ತೀರಿಸಬೇಕಾಗಿರುವುದರಿಂದ ಈ ಸಂಸ್ಥೆಯ ಸಾಲ ವಾಪಸ್ಸು ಬರುವುದಿಲ್ಲ. ಆದುದರಿಂದ ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿ ಮಾಡುವುದು ಏನೆಂದರೆ ಸಾಲ ಕೊಡುವಂತ ಸಹಕಾರಿ ಸಂಸ್ಥೆಗಳು ಗಟ್ಟಿ ಮುಟ್ಟಾಗಿ ಭದ್ರವಾಗಿ ಉಳಿಯಬೇಕಾದರೆ ಇದರಲ್ಲಿರುವ ನಿಯಮಾವಳಿಯನ್ನು ಬದಲಾಯಿಸಬೇಕು ಹಾಗಾದರೆ ಈ ಸಂಸ್ಥೆ ಭದ್ರವಾಗಿ ಉಳಿಯುತ್ತದೆ ಎಂದು ತಿಳಿಯುತ್ತೇನೆ. ಸಾಲ ಪಡೆಯುವವನು ಒಂದು ಸೊಸೈಟಿಯಲ್ಲಿ ಸಾಲ ಪಡೆಯಬೇಕೇ ವಿನಃ ಎರಡನೇ ಕಡೆ ಸಾಲ ತೆಗೆದುಕೊಳ್ಳುವ ಪರಿಸ್ಥಿತಿ ಇದ್ದರೆ ಅಂತಹವನಿಗೆ ಸಾಲ ಕೊಡಬಾರದು. ಮತ್ತು ಆ ರೀತಿ ಎರಡನೇ ಕಡೆ ಸಾಲ ತೆಗೆದುಕೊಳ್ಳುವ ಹಾಗಿದ್ದರೆ ಅವನ ಮೆಂಬರ್‌ಷಿಪ್‌ನ್ನು ತೆಗೆದು ಹಾಕಬೇಕು. ರೂರಲ್ ಇಂಡಿಟೆಡ್‌ರೆಸ್ ಬಗ್ಗೆ ರೂರಲ್ ಕ್ರೆಡಿಟ್ ಸರ್ವೆ ಮಾಡಿ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆದರಲ್ಲಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸಹಕಾರಿ ಸಂಸ್ಥೆಗಳು ಭದ್ರವಾಗಿ ಉಳಿಯಬೇಕಾದರೆ ಯಾರು ಸಹಕಾರಿ ಸಂಘಗಳಲ್ಲಿ ಮಾತ್ರ ಸಾಲ ಪಡೆಯುತ್ತಾರೋ ಅಂತಹವರನ್ನು ಮಾತ್ರ ಮೆಂಬರ್ ಆಗಿ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಸಂಸ್ಥೆಗಳು ನಾಶವಾಗಿ ಬಿಡುತ್ತದೆ. ದುಡ್ಡು ಎನ್ನುವುದು ಹೇಗೆ ಮಹತ್ವವೋ, ಹಾಗೆಯೇ ಈ ಸಹಕಾರಿ ಸಂಘಗಳಲ್ಲಿ ನಿಷ್ಠೆಯಿಂದ ಇರುವುದು ಮಹತ್ವವನ್ನು. ಆದುದರಿಂದ ಸಹಕಾರಿ ಸಂಸ್ಥೆಗಳಲ್ಲಿ ತೃಪ್ತಿ ಇರುವವರಿಗೆ ಮಾತ್ರ ಸಾಲ ಕೊಡತಕ್ಕದ್ದು ಮತ್ತು ಅವರನ್ನು ಆ ಸಂಸ್ಥೆಯಲ್ಲಿ ಮೆಂಬರ್‌ನ್ನಾಗಿ ಮಾಡತಕ್ಕದ್ದು ಅದಲ್ಲದೆ ಹತ್ತಾರು ಕಡೆ ಸಾಲ ಮಾಡಿದವರನ್ನ ಮೆಂಬರ್‌ಮಾಡಿ ಇಟ್ಟುಕೊಳ್ಳಬಾರದು. ಅಂತಹವರನ್ನು ಮೆಂಬರ್ ಆಗಿ ಇಟ್ಟುಕೊಂಡರೆ ಈ ಸಂಸ್ಥೆ ಸುಭದ್ರವಾಗಿ ಇರುವುದಿಲ್ಲ. ಇದು ಅವನತಿಗೆ ಕಾರಣವಾಗುತ್ತದೆ ಎಂದು ನನಗೆ ಕಂಡು ಬರುತ್ತದೆ. ಆದುದರಿಂದ ಇದರಲ್ಲಿರುವ ಕಾಯಿದೆಯನ್ನು ಬದಲಾಯಿಸಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ವೇಳೆ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯಶೆಟ್ಟಿ :— (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸಹಕಾರಿ ಇಲಾಖೆ ಉಳಿಯಬೇಕೋ ಅಥವಾ ಅಳಿಯಬೇಕೋ ಎಂಬುದು ಮುಖ್ಯವಾದ ಪ್ರಶ್ನೆ. ಈ ಒಂದು ಸಹಕಾರಿ ರಂಗದ ವ್ಯಾಪ್ತಿ ಮಾನವ ಜೀವಿತದ ಎಲ್ಲ ರಂಗಗಳಲ್ಲಿಯೂ ಹರಡಿಕೊಂಡಿದೆ. ಹಾಕಿರುವ ಬಂಡವಾಳಕ್ಕೆ ಬರುತ್ತಿರುವ ಪ್ರತಿಫಲ, ಸಹಕಾರ ಕ್ಷೇತ್ರಗಳು ನಡೆಯುತ್ತಿರುವ ವಿಧಾನ, ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಅಲ್ಲಿ ನಡೆಯುತ್ತಿರುವ ಹಸ್ತಕ್ಷೇಪವನ್ನು ನೋಡಿದರೆ ಈ ಸಹಕಾರಿ ಕ್ಷೇತ್ರವನ್ನೇ ರದ್ದು ಮಾಡುವುದು ಒಳ್ಳೆಯದು. ಸಹಕಾರಿ ರಂಗದಲ್ಲಿ ಏನು ಒಂದು ಒಳ್ಳೆಯ ಭಾವನೆ ಜನರಲ್ಲಿ ಮೂಡಿತ್ತೋ ಆದು ಮಾಯವಾಗುತ್ತಿದೆ. ಯಾವ ಒಂದು ತತ್ವದ ಆಧಾರದ ಮೇಲೆ ನಡೆಯಬೇಕಾಗಿತ್ತೋ ಆ ಒಂದು ತತ್ವದ ಆಧಾರದ ಮೇಲೆ ಇವತ್ತಿನ ದಿವಸ ನಡೆಯುತ್ತಿಲ್ಲ. ಇವತ್ತು ರಾಜ್ಯ ಮಟ್ಟದಲ್ಲಿರುವ ಸಹಕಾರಿ ಸಂಘಗಳನ್ನು ತೆಗೆದುಕೊಂಡರೆ, ತಾಲ್ಲೂಕ್ ಮಟ್ಟದಲ್ಲಿರುವ ಸಹಕಾರಿ ಸಂಘಗಳನ್ನು ತೆಗೆದುಕೊಂಡರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಸಹಕಾರಿ ಸಂಘಗಳನ್ನು ತೆಗೆದುಕೊಂಡರೆ ಎಲ್ಲ ಕಡೆಯಲ್ಲಿಯೂ ಕೂಡ ಭ್ರಷ್ಟಾಚಾರ ಎಷ್ಟರಮಟ್ಟಿಗೆ ಹರಡಿದೆ ಎಂದರೆ ಸಹಕಾರಿ ಕ್ಷೇತ್ರದ ಬಗ್ಗೆ ಏನು ಅಭಿಪ್ರಾಯ ಇತ್ತೋ ಆ ಅಭಿಪ್ರಾಯವನ್ನೇ ಬದಲು ಮಾಡಬೇಕಾದ ಸಂದರ್ಭ ಬಂದಿದೆ. ಸ್ಟೇಟ್ ಹ್ಯಾಂಡ್‌ಲೂಮ್ ಸೊಸೈಟಿ, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ, ಸ್ಟೇಟ್ ಉಲ್ಲನ್ ಮಾರ್ಕೆಟಿಂಗ್ ಸೊಸೈಟಿ, ಸ್ಟೇಟ್ ಖಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಮುಂತಾದ ಸೊಸೈಟಿಗಳು ರಾಜ್ಯಮಟ್ಟದ ಇವೆ. ಈ ಸೊಸೈಟಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ನೋಡಿದರೆ ನಮ್ಮ ಜನತೆಯಲ್ಲಿ ನಿಜವಾಗಿಯೂ ಸಹಕಾರಿ ಕ್ಷೇತ್ರದಲ್ಲಿ ಪ್ರೇಮ ಹುಟ್ಟುವುದಿಲ್ಲ. ಸಹಕಾರಿ ಕ್ಷೇತ್ರ ಇಷ್ಟೊಂದು ಹದಗೆಟ್ಟಿರುವುದರಿಂದ ಈ ಖಾತೆಯನ್ನು ಹೊತ್ತಿರುವ ಮಂತ್ರಿಗಳು ಮರ್ಯಾದೆ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಯಿಂದ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಇನ್ನೂ ಒತ್ತಿಹೇಳಬೇಕೆಂದರೆ ಈ ರೀತಿ ಜಪಾನ್ ದೇಶದಲ್ಲಿ ನಡೆದಿದ್ದರೆ ಅಲ್ಲಿಯ ಮಂತ್ರಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು.

ಸ್ಟೇಟ್ ಹ್ಯಾಂಡ್‌ಲೂಮ್ ಸೊಸೈಟಿಯಲ್ಲಿ ಹಣದ ದುರುಪಯೋಗವಾದಮೇಲೆ ಆದನ್ನು ಸರ್ಕಾರ ದವರು ವಹಿಸಿಕೊಂಡರು. ಈ ಸೊಸೈಟಿಯಲ್ಲಿ ೧೦ ಲಕ್ಷ ರೂಪಾಯಿಗಳವರೆಗೆ ಷಾರ್ಟೇಜ್ ಬಂದಿದೆ.೨೪ ಗಜದ ೧೦೦ ಥಾನ್ ಬಟ್ಟೆ ಇದೆ ಎಂದು ಹೇಳುತ್ತಾರೆ, ಅದರಲ್ಲಿರುವುದು ೨೫ ಥಾನ್ ಬಟ್ಟೆ ಮಾತ್ರ. ೨೦೦ ಜೊತೆ ಪಂಚೆಗಳು ಇವೆ ಎಂದು ಹೇಳಿರುತ್ತಾರೆ, ತನಿಖೆ ಮಾಡಿ ನೋಡಿದರೆ ಅಲ್ಲಿ ೧೦೦ ಒಂಟಿ ಪಂಜೆಗಳು ಇರುತ್ತವೆ. ಇವತ್ತು ಸಹಕಾರಿ ಕ್ಷೇತ್ರದಲ್ಲಿರುವವರು ಎಂತಹ ಮಟ್ಟಕ್ಕೆ ಹೋಗಿದ್ದಾರೆಂದರೆ ತಾವೇ ಮಾಲಿಗೆ ಬೆಂಕಿ ಇಟ್ಟು ಇನ್ನೊಬ್ಬರ ಮೇಲೆ ಹಾಕುವ ಸ್ಥಿತಿಗೆ ಬಂದಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಇವತ್ತು ನ್ಯಾಯ, ಧರ್ಮ ಮತ್ತು ಒಳ್ಳೆಯ ನೀತಿ ಇಲ್ಲವಾಗಿವೆ. ಸ್ಟೇಟ್ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿಗೆ ಹಾಕಿರುವ ಬಂಡವಾಳವನ್ನು ನೋಡುವುದಾದರೆ ಇವತ್ತು ಅಲ್ಲಿರುವ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣವಿಲ್ಲವಾಗಿದೆ. ಅಲ್ಲಿರುವ ಅಧ್ಯಕ್ಷರು ಒಮ್ಮೆ ಕೌಂಟರ್ ಫೈಲ್‌ನಲ್ಲಿ ೨ ಸಾವಿರ ರೂಪಾಯಿಗಳೆಂದು ಬರೆದು ಮೈನ್ ಚೆಕ್ ಲೀಫ್‌ನಲ್ಲಿ ೪ ಸಾವಿರ ರೂಪಾಯಿಗಳು ಎಂದು ಬರೆದು ಹಣ ದುರುಪಯೋಗ ಮಾಡಿರುವ ನಿದರ್ಶನಗಳು ಬಹಳ ಇವೆ. ಇಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ನೋಡಿದರೆ ಬೇಲಿಯೇ ಎದ್ದು ಹೊಲ ಮೇದಂತೆ ಆಗಿದೆ. ಸ್ಟೇಟ್ ಉಲ್ಲನ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸರ್ಕಾರದವರು ಲಕ್ಷಗಟ್ಟಲೆ ಹಣವನ್ನು ಬಂಡವಾಳದ ರೂಪದಲ್ಲಿ ತೊಡಗಿಸಿದ್ದಾರೆ. ಇವತ್ತು ಆ ಸೊಸೈಟಿಯಿಂದ ಎಷ್ಟು ಓವರ್ ಡ್ಯೂ ಇದೆ, ಎಷ್ಟು ವಸೂಲಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನೋಡಬೇಕಾಗಿದೆ. ಸರ್ಕಾರದವರು ಯಾವ ಯಾವ ಸೊಸೈಟಿಗಳಿಗೆ ಹಣ ಕೊಟ್ಟಿದ್ದಾರೋ ಅಲ್ಲೆಲ್ಲಾ ಭ್ರಷ್ಟಾಚಾರ ಎಂಬುದು ತುಂಬಿತುಳುಕಾಡುತ್ತಿದೆ. ಕಾಲು ಭಾಗ ಹಣ ವಾಪಸ್ ಬರುವುದು ಕಷ್ಟವಾಗಿದೆ. ಸ್ಟೇಟ್ ಮಾರ್ಕ್‌ಟಿಂಗ್ ಸೊಸೈಟಿಯಲ್ಲಿ ಒಬ್ಬ ಮಹನೀಯ ೨೨ ವರ್ಷದಿಂದಲೂ ಅಧ್ಯಕ್ಷನಾಗಿದ್ದಾನೆ. ಮಂತ್ರಿಗಳು ಹೇಳುತ್ತಾರೆ, ಮನಾಪಲ್ಲಿ ಇರಬಾರದು ಎಂಬುದಾಗಿ. ಆದರೆ ಕಾರ್ಯತಃ ಈ ಮಂತ್ರಿಗಳು ಆದೇ ಮನುಷ್ಯ ಅರಿಸಿಬರುವಂತೆ ಪಡುವ ಕಷ್ಟಗಳನ್ನು ಹೇಳತೀರದು. ಪರೋಕ್ಷವಾಗಿ ಏನು ಸಹಾಯ ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದಾರೆ. ಮನಾಪಲ್ಲಿ ಇರಬಾರದೆಂದು ಹೇಳುವ ಮಂತ್ರಿಗಳೇ ತಮ್ಮ ಜಿಲ್ಲೆಯ ಪ್ರತಿನಿಧಿಗಳ ಓಟನ್ನು ಮತ್ತು ಸರ್ಕಾರೀ ಓಟುಗಳನ್ನು ಆ ಮನುಷ್ಯನಿಗೆ ಕೊಡಿಸುವುದಕ್ಕೆ ಪರೋಕ್ಷವಾಗಿ ಸಹಾಯ ಮಾಡುತ್ತಿದ್ದಾರೆ. ಆ ಸೊಸೈಟಿಯಲ್ಲಿ ಏನು ಏನು ವ್ಯವಹಾರಗಳು ನಡೆಯುತ್ತಿವೆ ಎಂಬುದು ನನಗೆ ಗೊತ್ತಿದೆ. ಭರ್ಮಾದಿಂದ ಆಲೂಗೆಡ್ಡೆಯನ್ನು ತರಿಸಿ ಮಾರಾಟ ಮಾಡಿದ್ದರಿಂದ ಸೊಸೈಟಿಗೆ ಲಕ್ಷಗಟ್ಟಲೆ ಹಣ ಲುಕ್ಸಾನಾಯಿತು. ಹರಿಯಾಣದಿಂದ ಕಡಲೆಕಾಳನ್ನು ತರಿಸಿ ಮಾರಾಟ ಮಾಡಿದ್ದರಿಂದ ಸೊಸೈಟಿಗೆ ಲಕ್ಷಾಂತರ ರೂಪಾಯಿಗಳ ನಷ್ಟವಾಯಿತು. ಪಂಜಾಬ್‌ನಿಂದ ಗೋಧಿಯನ್ನು ತರಿಸಿದ್ದರಿಂದ ಸೊಸೈಟಿಗೆ ಲಕ್ಷಾಂತರ ರೂಪಾಯಿಗಳ ನಷ್ಟವಾಯಿತು. ಸಿಲೋನ್‌ಗೆ ನಮ್ಮ ರಾಜ್ಯದ ಈರುಳ್ಳಿಯನ್ನು ಕಳಿಸುವ ವ್ಯಾಪಾರದಲ್ಲಿ ಲಕ್ಷಗಟ್ಟಲೆ ಹಣ ಲುಕ್ಷಾನಾಗಿದೆ. ಇದರಲ್ಲಿ ಅಧ್ಯಕ್ಷರ ಕೈವಾಡ ಇದೆ ಈ ಅಧ್ಯಕ್ಷರು ಲಕ್ಷಾಂತರ ರೂಪಾಯಿಗಳ ಆಸ್ತಿ ಮಾಡಿಕೊಂಡಿದ್ದಾರೆ. ಸೊಸೈಟಿ ರೇಟು ಲವಂಗ ಕೆ.ಜಿ.ಗೆ ೧೫೦ ರೂಪಾಯಿ ಇದ್ದರೆ ಮಾರ್ಕೆಟ್ ರೇಟ್ ೨೦೦ ರೂಪಾಯಿ ಇದೆ. ಈ ಲವಂಗವನ್ನು ಬೇರೆ ಸೊಸೈಟಿಗಳಿಗೆ ಮಾರಾಟ ಮಾಡಲಾಗಿದೆ ಎಂದು ಲೆಕ್ಕ ತೋರಿಸಿ ಹೊರಗಡೆ ಮಾರಾಟ ಮಾಡಿದ್ದಾರೆ. ಈ ವ್ಯವಹಾರದಲ್ಲಿ ಬೇರೆ ಸೊಸೈಟಿಗಳ ಅಧ್ಯಕ್ಷರನ್ನು ತಮ್ಮ ಕಡೆ ಮಾಡಿಕೊಂಡು ಹೊರಗಡೆ ಮಾರಾಟ ಮಾಡಿದ್ದಾರೆ. ಇಲ್ಲಿಗೆ ತರಿಸುವ ಯಾವ ಕಂಟ್ರೋಲ್ ಕಮಾಡಿಟೀಸ್ ಕೂಡಸಿಗದೆ ಮಂಗಳಮಾಯವಾಗುತ್ತಿದೆ. ಸ್ಟೇಟ್ ಲೆವಲ್ ಸೊಸೈಟಿಗಳಲ್ಲಿಯೇ ಈ ರೀತಿ ಯಾದರೆ ಸಾಮಾನ್ಯ ಸೊಸೈಟಿಗಳ ನೈತಿಕಮಟ್ಟ ಯಾವ ರೀತಿ ಇರುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು. ಜಿಲ್ಲಾ ಬ್ಯಾಂಕ್‌ಗಳಲ್ಲಿ ಎಷ್ಟರಮಟ್ಟಿಗೆ ಅನ್ಯಾಯ ಮತ್ತು ಅತ್ಯಾಚಾರ ನಡೆದಿದೆ ಎಂದರೆ, ಈ ಬಗ್ಗೆ ರಿಜರ್ವ್ ಬ್ಯಾಂಕ್‌ನವರು ಇನ್ಸ್‌ಪೆಕ್ಷನ್ ಮಾಡಿ ಅದರ ಆಧಾರದ ಮೇಲೆ ಕೊಟ್ಟಿರುವ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ೫ ಜಿಲ್ಲಾ ಬ್ಯಾಂಕ್‌ಗಳನ್ನು ವಜಾಮಾಡಬೇಕೆಂದು ಅವರು ವರದಿಯಲ್ಲಿ ತಿಳಿಸಿದ್ದರು. ಮೈಸೂರು ಜಿಲ್ಲೆಯಲ್ಲಿ ನಾನ್-ಕಾಂಗ್ರೆಸ್‌ನವರು ಅಧ್ಯಕ್ಷರಾಗುವ ಸಮಯ ಬಂದಾಗ ಆ ಜಿಲ್ಲಾ ಬ್ಯಾಂಕ್‌ನ್ನು ವಜಾ ಮಾಡಿ ಉಳಿದ ನಾಲ್ಕು ಬ್ಯಾಂಕ್‌ಗಳನ್ನು ವಜಾ ಮಾಡದೆ ಹಾಗೆ ನಡೆದುಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಇವತ್ತಿನ ದಿವಸ ಇದೇ ಆಸೆಂಬ್ಲಿಯಲ್ಲಿ ರಾಣೆಬೆನ್ನೂರು, ಸಿರಾ, ಪಾವಗಡ, ತುರವೇಕೆರೆ ಮುಂತಾದ ತಾಲ್ಲೂಕ್‌ಗಳಲ್ಲಿರುವ ತಾಲ್ಲೂಕ್ ಲೆವಲ್ ಸೊಸೈಟಿಗಳ ಬಗ್ಗೆ ಪ್ರಶ್ನೆ ಕೇಳಿದರೆ, ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಮಂತ್ರಿಗಳು ಉತ್ತರ ಕೊಡುತ್ತಾರೆ. ಈ ಸೊಸೈಟಿಗಳಿಂದ ಹಾಕಿರುವ ಹಣದಲ್ಲಿ ಕಾಲು ಭಾಗ ಬರುವುದು ಕಷ್ಟವಾಗಿದೆ. ರಾಣಿಬೆನ್ನೂರು ಸೊಸೈಟಿಯಲ್ಲಿ ಆಗಿರತಕ್ಕಂಥ ಅನ್ಯಾಯಗಳು ನಮ್ಮ ರಾಜ್ಯದ ಬೇರೆ ಯಾವ ತಾಲ್ಲೂಕ್ ಸೊಸೈಟಿಗಳಲ್ಲಿಯೂ ಸಹ ಆಗಿಲ್ಲವೆಂದು ಹೇಳಬಹುದು. ಆ ಸೊಸೈಟಿಯ ಅಧ್ಯಕ್ಷರು ಇವತ್ತು ಸನ್ಯಾಸ ಸ್ವೀಕಾರ

ಮಾಡುವುದಕ್ಕೆ ಹೊರಟಿದ್ದಾರೆ. ಸರ್ವಿಸ್ ಕೋ ಆಪರೇಟಿವ್ ಸೊಸೈಟಿಗಳ ವೈಖರಿಯನ್ನು ಹೇಳತೀರದಂತಾಗಿದೆ. ೩೦೦೦ ಸಾವಿರ ರೂಪಾಯಿಗಳನ್ನು ಸಾಲ ತೆಗೆದುಕೊಳ್ಳಬೇಕಾದರೆ ೧೦ ಪರ್‌ಸೆಂಟ್ ಷೇರ್ ತೆಗೆದುಕೊಳ್ಳಬೇಕಾಗುತ್ತದೆ. ಉಳಿದ ಹಣಕ್ಕೆ ೯ ಪರ್‌ಸೆಂಟ್ ಬಡ್ಡಿ ಹಾಕುತ್ತಾರೆ. ಅಲ್ಲಿಗೆ ೧೯ ಪರ್‌ಸೆಂಟ್ ಆಯಿತು. ಎನ್‌ಕಂಬರೆನ್ಸ್ ಸರ್ಟಿಫೀಕೇಟ್ ಮತ್ತು ಇತರೇ ಮೇಲೆ ಖರ್ಚಿಗಾಗಿ ೩ ಪರ್‌ಸೆಂಟ್ ಬಡ್ಡಿ ಹಾಕುತ್ತಾರೆ. ಈ ಪ್ರಕಾರ ೨೨ ಪರ್‌ಸೆಂಟ್ ಬಡ್ಡಿ ಕೊಟ್ಟು ಯಾವ ರೈತ ಸಾಲ ತೆಗೆದುಕೊಂಡು ವ್ಯವಸಾಯ ಮಾಡಲು ಸಾಧ್ಯವಾಗುತ್ತದೆ? ತೆಗೆದುಕೊಂಡ ಸಾಲದ ಅರ್ಧ ಭಾಗವನ್ನು ತೀರಿಸಿದನಂತರ ಷೇರ್ ಹಣವನ್ನು ವಾಪಸ್ ಕೇಳಿದರೆ ಅದನ್ನು ಕೊಡುವುದಕ್ಕೆ ಆ ಸೊಸೈಟಿಗಳಿಗೆ ಶಕ್ತಿ ಇರುವುದಿಲ್ಲ. ನನ್ನ ತಾಲ್ಲೂಕ್‌ನಲ್ಲಿಯೇ ಇರುವ ೪೬ ಸೊಸೈಟಿಗಳ ಪೈಕಿ ೨೬ ಸೊಸೈಟಿಗಳಿಗೆ ಷೇರ್ ಹಣವನ್ನು ವಾಪಸ್ ಕೊಡುವುದಕ್ಕೆ ಸಾಧ್ಯವಾಗಿಲ್ಲ ಇವತ್ತು ರಾಜ್ಯದಲ್ಲಿ ಸಹಕಾರಿ ಇಲಾಖೆ ಎಂಬುದು ಬೃಹದಾಕಾರವಾಗಿ ಬೆಳೆಯುತ್ತಿದೆ. ನಾನು ಹೇಳುವುದೆಂದರೆ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಸರಿಯಾಗಿ ಕೆಲಸ ಮಾಡದಿರುವುದರಿಂದ ಎಲ್ಲ ಕಡೆಯೂ ಕೂಡ ಸರ್ವನಾಶವಾಗುತ್ತಿದೆ. ಎಲ್ಲ ಸೊಸೈಟಿಗಳಲ್ಲಿಯೂ ಹಸ್ತಕ್ಷೇಪ ನಡೆಯುತ್ತಿದೆ. ತಿಪಟೂರು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಒಬ್ಬ ಸೆಕ್ರೆಟರಿ ಒಂದೂವರೆ ವರ್ಷದಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಆ ಮನುಷ್ಯನಿಗೆ ಕ್ವಾಲಿಫಿಕೇಷನ್ ಇಲ್ಲವಾದ್ದರಿಂದ ಆತನನ್ನು ಕೆಲಸದಿಂದ ತೆಗೆದುಹಾಕಿದ್ದೇನೆಂದು ರಿಜಿಸ್ಟ್ರಾರ್ ಅವರು ಹೇಳಿದ್ದರೂ ಕೂಡ ಅದೇ ಮನುಷ್ಯ ಅಲ್ಲಿ ಕೆಲಸ ಮಾಡುತ್ತಿದ್ದಾನೆ. ಇವತ್ತು ಒಂದು ಕೆ. ಜಿ. ಕೊಬ್ಬರಿಯ ಬೆಲೆ ೮-೯ ರೂಪಾಯಿಗಳು ಇದೆ. ದಳ್ಳಾಳಿ ರೇಟನ್ನು ಆ ಸೆಕ್ರೆಟರಿ ಯಾವ ರೀತಿ ಹಾಕಿಕೊಂಡರೂ ಕೂಡ ಕೇಳುವವರೇ ಇಲ್ಲವಾಗಿದೆ. ತಿಪಟೂರು ಕೊಬ್ಬರಿಗೆ ಹೆಸರಾದ ಸ್ಥಳ ಮತ್ತು ಮುಖ್ಯವಾದ ಮಾರ್ಕೆಟ್. ಇಂತಹ ಕಡೆಯೇ ಸರ್ಕಾರದವರು ತಕ್ಕ ಕ್ರಮ ತೆಗೆದುಕೊಂಡಿಲ್ಲ. ಶ್ರೀ ಎ. ಎಲ್. ಶಿವಪ್ಪನವರು ಈ ಬಗ್ಗೆ ಅನೇಕ ಕಾಗದಗಳನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಬರೆದಿದ್ದರೂ ಕೂಡ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಆ ಮನುಷ್ಯನನ್ನು ತೆಗೆದುಹಾಕಿದ್ದೇವೆಂದು ಹೇಳುತ್ತಾರೆ. ಆದರೆ ಅದೇ ಮನುಷ್ಯ ಅಲ್ಲಿ ಕಳೆದ ಒಂದೂವರೆ ವರ್ಷದಿಂದ ಕೆಲಸ ಮಾಡುತ್ತಿದ್ದಾನೆ. ಒಬ್ಬ ಸರಿಯಾದ ಮನುಷ್ಯನನ್ನು ಅಲ್ಲಿಗೆ ಪೋಸ್ಟ್ ಮಾಡುವುದಕ್ಕೆ ಈ ಮಂತ್ರಿಗಳಿಗೆ ಯೋಗ್ಯತೆ ಇಲ್ಲದಿದ್ದರೆ ಇವರು ಸಹಕಾರಿ ರಂಗವನ್ನು ಯಾವ ರೀತಿ ಅಭಿವೃದ್ಧಿ ಮಾಡುತ್ತಾರೆಂದು ಕೇಳುತ್ತೇನೆ ಸಹಕಾರಿ ರಂಗವನ್ನು ಅಭಿವೃದ್ಧಿಗೊಳಿಸುತ್ತಿದ್ದೇವೆಂದು ಅವರು ಹೇಳುವುದರಲ್ಲಿ ಅರ್ಥವಿದೆಯೇ, ಕೊಂಚವಾದರೂ ತಿರುಳು ಇದೆಯೇ ಎಂದು ಕೇಳುತ್ತೇನೆ. ತಿಪಟೂರು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಈಗಿರುವ ಮನುಷ್ಯನನ್ನು ತೆಗೆದು ಹಾಕಬೇಕೆಂದು ರಿಜಿಸ್ಟ್ರಾರ್ ಅವರು ಹೇಳಿದ್ದರೂ ಕೂಡ ಸರ್ಕಾರದವರು ಆದೇ ಮನುಷ್ಯನನ್ನು ಮುಂದುವರಿಸಬೇಕಾದರೆ ಆ ಮನುಷ್ಯ ಇವರಿಗೆ ಬೇಕಾದವನು ಇರಬೇಕೆಂದು ಕಾಣುತ್ತದೆ. ಇವರ ಸಂಬಂಧಿ ಇರಬೇಕೆಂದು ಕಾಣುತ್ತದೆ. ಇದೇ ರೀತಿ ನಡೆದರೆ ನಿಜವಾಗಿಯೂ ರೈತರ ಕ್ಷೇಮವಾಗುತ್ತದೆಯೇ, ರೈತರು ಉದ್ಧಾರವಾಗುತ್ತಾರೆಯೇ ಎಂದು ಕೇಳುತ್ತೇನೆ.

ಇವೊತ್ತಿನ ದಿವಸ ಸಹಕಾರ ಸಂಘಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಸ್ಟೇಟ್ ಲೆವೆಲ್ ಎಂದು ಮೂರುತರಹ ಸೊಸೈಟಿಗಳು ಇವೆ. ಡಿಸ್ಟ್ರಿಕ್ಟ್ ಕೋಆಪರೇಟಿವ್ ಬ್ಯಾಂಕನ್ನು ತೆಗೆದು ಇವುಗಳನ್ನು ಟಾಟ್ಯೆರ್ಸ್, ಸಿಸ್ಟಂಮಿನ ಎಪೆಕ್ಸ್ ಬ್ಯಾಂಕನ್ನು ಓಪನ್ ಮಾಡಿದರೆ ಅದರಿಂದ ಬಹಳ ಉಪಕಾರವಾಗುತ್ತದೆ. ಮತ್ತು ಸಹಕಾರಿ ಚಳುವಳಿ ಯಶಸ್ವಿಯಾಗುತ್ತದೆ. ರಿಸರ್ವ್ ಬ್ಯಾಂಕಿನವರು ೩ ಪರ್ಸೆಂಟ್ ಬಡ್ಡಿ ಪ್ರಕಾರ ಕೊಟ್ಟರೆಲ್ಲಿದು ರೈತರಿಗೆ ತಲುಪುವ ಹೊತ್ತಿಗೆ ೮-೧೦ ಪರ್ಸೆಂಟ್ ಆಗುತ್ತದೆ. ಇದರಿಂದ ರೈತರಿಗೆ ಕಷ್ಟವಾಗುತ್ತದೆ. ನಾನು ಹೇಳಿದ ರೀತಿ ಮಾಡದೆ ಈಗ ಇರುವ ರೀತಿಯಲ್ಲಿಯೇ ಇದನ್ನು ಮುಂದುವರಿಸಿಕೊಂಡು ಹೋದರೆ ರೈತರು ಸಹಕಾರ ಸಂಘಗಳಲ್ಲಿ ಹಾಕಿರತಕ್ಕ ಶೇರ್ ಹಣವನ್ನು ವಾಪಸ್ಸು ಪಡೆದುಕೊಳ್ಳಬೇಕಾಗುತ್ತದೆ. ಸಹಕಾರ ಸಂಘಗಳಿಂದ ರೈತರಿಗೆ ಎಷ್ಟು ಅನುಕೂಲವಾಗಬೇಕೋ ಅಷ್ಟು ಅನುಕೂಲವಾಗದೇ ರೈತರನ್ನು ಶೋಷಣೆ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಡಿಸ್ಟ್ರಿಕ್ಟ್ ಬ್ಯಾಂಕಿನವರಿಗೆ ಸರ್ಕಾರದವರು ಸಬ್ಸಿಡಿ ಕೊಡುತ್ತಾರೆ ಗ್ಯಾರಂಟ್ ಕೊಡುತ್ತಾರೆ. ಈಗ ಒಂದು ಡಿಸ್ಟ್ರಿಕ್ಟ್‌ನಲ್ಲಿ ೩-೪ ಡಿಸ್ಟ್ರಿಕ್ಟ್ ಕೋಆಪರೇಟಿವ್ ಬ್ಯಾಂಕುಗಳು ಆವೆ. ಆದರೆ ಇವುಗಳಲ್ಲಿ ಸಾಕಷ್ಟು ಟ್ರಾನ್ಸಾಕ್ಷನ್ಸ್ ಆಗುತ್ತಿಲ್ಲ ಈಗ ಉದಾಹರಣೆಗೆ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿರತಕ್ಕ ಡಿಸ್ಟ್ರಿಕ್ಟ್ ಕೋಆಪರೇಟಿವ್ ಬ್ಯಾಂಕಿನ ಬ್ರಾಂಚುಗಳಲ್ಲಿ ಸಾಕಷ್ಟು ಟ್ರಾಂಜಾಕ್ಷನ್‌ಗಳು ಆಗುವುದಿಲ್ಲ. ಒಂದು ದಿವಸಕ್ಕೆ ೩-೪ ಟ್ರಾಂಜಾಕ್ಷನ್‌ಗಳು ಆಗುತ್ತಿವೆ. ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಡಿಸ್ಟ್ರಿಕ್ಟ್ ಕೋಆಪರೇಟೀವ್ ಬ್ಯಾಂಕಿನ ಬ್ರಾಂಚ್ ಇದೆ, ಅದಕ್ಕೆ ಒಬ್ಬರು ಮ್ಯಾನೇಜರು, ೪-೬ ಜನ ಗುಮಾಸ್ತರು, ಸೆಕ್ರೆಟರಿ ಇತ್ಯಾದಿ ೩೬ ಜನರಿಗೆ ಸಂಬಳ ಕೊಡಬೇಕಾಗುತ್ತದೆ. ಮತ್ತು ಅದಕ್ಕೆ ಬೇಕಾದಂತಹ ಫರ್ನಿಚರ್ ಇತ್ಯಾದಿಗಳನ್ನೆಲ್ಲಾ ಒದಗಿಸಿದ್ದಾರೆ. ಇದರಲ್ಲಿ ಒಂದು ದಿವಸಕ್ಕೆ ೩-೪ ಟ್ರಾಂಜಾಕ್ಷನ್‌ಗಳು ಕೂಡ ಆಗುವುದಿಲ್ಲ. ಇದು ವೇಸ್ಟ್. ಸಹಕಾರದ ಮೂಲತತ್ವ, ಮಿತವ್ಯಯ ಇರಬೇಕೆಂಬುದು ಆದರೆ ಇದರಲ್ಲಿ ಎಷ್ಟು ಮಿತವ್ಯಯ ಇರಬೇಕೋ ಅದು ಇಲ್ಲ ಸುಮ್ಮನೆ ನಮ್ಮನ್ನು ಮರುಳು ಮಾಡಿ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ಹಾಗೆ ಒಂದು ದೊಡ್ಡ ಫಿಗರ್ ಅನ್ನು ಕೊಟ್ಟು

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ನಮ್ಮ ದೇಶದಲ್ಲಿ ಇಷ್ಟು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದೇವೆ ಇಷ್ಟು ಲಕ್ಷ ಜನ ಶೇರ್ ಹೋಲ್ಡರುಗಳು ಇದ್ದಾರೆ. ಈ ಸೊಸೈಟಿಗಳಲ್ಲಿ ಇಷ್ಟು ಕೋಟಿ ರೂಪಾಯಿಗಳನ್ನು ಜನಗಳಿಗೆ ಕ್ರೆಡಿಟ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇವೊತ್ತಿನ ದಿವಸ ಬಹಳ ಮುಖ್ಯವಾಗಿ ನಾವು ೨-೩ ಕೋಟಿ ರೂಪಾಯಿಗಳ ಸಬ್ಸಿಡಿ ಕೊಟ್ಟಿದ್ದೇವೆ, ಮ್ಯಾನೇಜೀರಿಯಲ್ ಕಾಸ್ಟ್ ಗ್ರಾಂಟ್ ಇತ್ಯಾದಿಗಳನ್ನೆಲ್ಲಾ ಕೊಟ್ಟಿದ್ದೇವೆ ಎಂದು ದೊಡ್ಡದಾದ ಅಂಕಿ ಸಂಖ್ಯೆಗಳನ್ನು ಕೊಟ್ಟು ಈ ಸಭೆಯ ಸದಸ್ಯರನ್ನು ಮರಳು ಮಾಡಿದ್ದಾರೆ. ಒನರಾ ಬ್ಯಾಂಕಿನವರು ಮತ್ತು ಮೈಸೂರು ಬ್ಯಾಂಕಿನವರು ನಿಮ್ಮ ಕೋಆಪರೇಟಿವ್ ಬ್ಯಾಂಕಿಗೆ ಪೇಡ್ ಸೆಕ್ರೆಟರಿಯನ್ನು ನೆಮಿಸಿ ನ್ಯಾಯವಾಗಿ ವ್ಯವಹಾರ ಮಾಡಿದರೆ ನಾವು ಅವುಗಳಿಗೆ ಹಣ ಸಹಾಯವನ್ನು ಮಾಡುತ್ತೇವೆ ಎಂದು ಹೇಳಿದರೆ ಆ ರೀತಿ ಇವರು ಮಾಡುವುದಿಲ್ಲ. ಸಹಕಾರ ಸಂಘಗಳಲ್ಲಿ ಕೆಲಸ ಮಾಡುವುದಕ್ಕೆ ಯೋಗ್ಯತೆ ಬೇಡವೇ, ಕ್ವಾಲಿಫಿಕೇಷನ್ ಬೇಡವೇ, ಎಕ್ಸ್‌ಪೀರಿಯನ್ಸ್ ಬೇಡವೆ ಮನುಷ್ಯತ್ವ ಬೇಡವೇ ? ಪ್ರಜಾರಿಗಳು ಸೆಕ್ರೆಟರಿ ಮತ್ತು ಪ್ರೆಸಿಡೆಂಟರಾಗಿರುವ ಸಹಕಾರ ಸಂಘಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿದೆ. ಇದರಲ್ಲಿ ಇನ್ನೊಂದು ದೊಡ್ಡ ಸಮಸ್ಯೆ ಏನೆಂದರೆ ಸಹಕಾರ ಸಂಘಗಳಿಗೆ ಪ್ರೆಸಿಡೆಂಟರಾಗಿರತಕ್ಕ ಪ್ರಜಾರಿಗಳು ಏನು ಮಾಡುತ್ತಾರೆ ಎಂದರೆ ಪಾಪ ಯಾರೋ ಎಸ್. ಎಸ್. ಎಲ್.ಸಿ. ಪಾಸಾಗಿರತಕ್ಕ ಒಬ್ಬ ಬಡ ಹುಡುಗನನ್ನು ಸೊಸೈಟಿಗಳಿಗೆ ಸೆಕ್ರೆಟರಿ ಮಾಡಿ ಯಾವುದೋ ಲೆಕ್ಕಕ್ಕೆದುಡ್ಡನ್ನು ಖರ್ಚು ಹಾಕಿ ಹಣ ಹೊಡೆಯುತ್ತಿದ್ದಾರೆ. ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಸೊಸೈಟಿಗೆ ಪ್ರೆಸಿಡೆಂಟರಾಗಿದ್ದ ಒಬ್ಬ ಪ್ರಜಾರಿಯು ೧೯೬೭ನೇ ಇಸವಿಯಲ್ಲಿ ಒಂದು ಸೊಸೈಟಿಯಲ್ಲಿ ಯಾವು ಯಾವುದೇ ಲೆಕ್ಕಕ್ಕೆ ಖರ್ಚು ಹಾಕಿಸಿ ಎಲೆಕ್ಷನಿಗೆ ಹಣವನ್ನು ಖರ್ಚು ಮಾಡಿ ಕೊನೆಗೆ ಅದಕ್ಕೆ ಒಬ್ಬ ಗುಮಾಸ್ತನನ್ನು ಜವಾಬ್ದಾರನನಾಗಿ ಮಾಡಿದರು. ಕೊನೆಗೆ ಅವನು ಡಿಸ್‌ಮಿಸ್ ಆದ, ಅವನನ್ನು ತೇಜೋವಧೆ ಮಾಡಿದರು. ಪಾಪ ಅವನು ಇವೊತ್ತು ಹೊಟ್ಟೆಗೆ ಅನ್ನವಿಲ್ಲದೆ ಆಲೆಯುತ್ತಿದ್ದಾನೆ. ಅನೇಕ ಸೊಸೈಟಿಗಳಲ್ಲಿ ಈ ತರಹ ನಡೆಯುತ್ತಿದೆ. ಹೀಗಿದ್ದರೂ ಕೂಡ ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಿಲ್ಲ. ಅನೇಕ ಕನ್ಸೊಮರ್ಸ್ ಸೊಸೈಟಿಗಳಲ್ಲಿ ಸೆಕ್ರೆಟರಿಗಳು, ಪ್ರೆಸಿಡೆಂಟರು ಹಣವನ್ನು ತಿನ್ನುತ್ತಿದ್ದಾರೆ. ಆ ಹಣವನ್ನು ಸಂಬಂಧಪಟ್ಟವರಿಂದ ವಸೂಲು ಮಾಡುವುದಕ್ಕೆ ಇವರ ಕೈಯಲ್ಲಿ ಸಾಧ್ಯವಿಲ್ಲ. ನಮ್ಮ ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಕನ್‌ಜ್ಯೂಮರ್ ಸೊಸೈಟಿಯ ಒಬ್ಬ ಸೆಕ್ರೆಟರಿ ಏನು ಮಾಡಿದ್ದಾನೆ ಎಂದರೆ ಆ ಸೊಸೈಟಿಯಲ್ಲಿ ೧೯೬೮-೬೯ನೇ ಇಸವಿಯಲ್ಲಿ ಟ್ರೆಜರಿಗೆ ಹಣ ಕಟ್ಟಿದ್ದಂಥಾ ಚಲನ್ ತೆಗೆದುಕೊಂಡು ಅದರಲ್ಲಿ ಸರಿಯಾಗಿ ಸೀಲ್ ಬಿದ್ದಿಲ್ಲದೆ ಇರುವುದನ್ನು ನೋಡಿ, ಅದರಲ್ಲಿನ ಡೇಟ್ ತಿದ್ದಿ ೧೯೭೦ನೇ ಇಸವಿಗೆ ಖರ್ಚು ಹಾಕಿದ್ದಾರೆ. ಅದನ್ನು ಜಮಾತೋರಿಸಿದ್ದಾರೆ ಆ ರೀತಿ ಮಾಡಿದವರ ಮೇಲೆ ಏನು ಕ್ರಮತೆಗೆದುಕೊಳ್ಳುತ್ತೀರಿ ಈ ನಮ್ಮ ಸಹಾಕಾರ ಮಂತ್ರಿಗಳು ಯಾರು ಮೇಲೂ ಕ್ರಮ ತೆಗೆದುಕೊಳ್ಳುವುದಿಲ್ಲ. ಇವರ ಪಾಲಿಸಿ ಹೇಗಿದೆ ಎಂದರೆ ಗೋ ಸ್ಲೋ ಅಂಡ್ ಸೇವ್ ಹಿಮ್ ಎಂದು ಹೇಳುತ್ತಿದ್ದಾರೆ. ಈ ರೀತಿ ಇವರು ಮಾಡುವುದಾದರ ಸಹಕಾರ ಇಲಾಖೆ ನಾಶವಾಗುತ್ತದೆ ಇಷ್ಟೆಂದು ಅನ್ಯಾಯ ನಡೆಯುತಕ್ಕ ಈ ಸಹಕಾರ ಇಲಾಖೆಯಲ್ಲಿ ಈ ಮಂತ್ರಿಗಳು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈ ಇಲಾಖೆಯನ್ನು ಜವಾಬ್ದಾರಿಯಿಂದ ನಿರ್ವಹಿಸುವುದಕ್ಕೆ ಈ ಮಂತ್ರಿಗಳಿಗೆ ಶಕ್ತಿ ಇಲ್ಲ. ಆದ್ದರಿಂದ ನಿಜವಾಗಿ ಇವರಿಗೆ ಆತ್ಮಗೌರವ ಇದ್ದರೆ ಇಲಾಖೆಯನ್ನು ಬೇರೆಯವರಿಗೆ ವಹಿಸಿದರೆ ಒಳ್ಳೆಯದು ಪ್ರಜಾಪ್ರಭುತ್ವವನ್ನು ಉಳಿಸಬೇಕು, ದೇಶವನ್ನು ಕಟ್ಟಬೇಕು, ದೇಶದ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕು ಎಂದು ಹೇಳುವಾಗ ಇವರು ಮಾತ್ರ ಗೋಸ್ಲೊ ಅಂಡ್ ಸೇವ್ ಹಿಮ್ ಎಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಈ ದೃಷ್ಟಿಯಿಂದ ಈಗಿರತಕ್ಕ ಸಹಕಾರ ಮಂತ್ರಿಗಳು ಕೂಡಲೇ ರಾಜೀನಾಮೆಯನ್ನು ನೀಡಿ ದಕ್ಷರಾದಂತಹ ಬೇರೆಯವರಿಗೆ ಈ ಸ್ಥಾನವನ್ನು ಬಿಟ್ಟುಕೊಡಬೇಕು, ಆಡಿಟ್ ವರದಿಯ ಪ್ರಕಾರ ತಪ್ಪಿತಸ್ಥರ ಮೇಲೆ ಸಿವಿಲ್ ಕ್ರಮಗಳನ್ನು ತೆಗೆದುಕೊಳ್ಳಬೇಕು. ಜಿಲ್ಲಾ ಬ್ಯಾಂಕುಗಳನ್ನು ಕೂಡಲೇ ರದ್ದು ಮಾಡಬೇಕು. ಎಪೆಕ್ಸ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಬೇಕು. ಜಿಲ್ಲಾ ಬ್ಯಾಂಕಿನ ಎಲ್ಲಾ ಶಾಖೆಗಳನ್ನೂ ತೆಗೆಯಬೇಕು. ಈ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟು ಯೋಗ್ಯರಾದಂತಹ ಬೇರೊಬ್ಬ ಮಂತ್ರಿಗಳನ್ನು ಈ ಸ್ಥಾನಕ್ಕೆ ನೇಮಿಸಿದರೆ ಸಹಕಾರ ಬೆಳೆದು ಜನಗಳಿಗೆ ಅನುಕೂಲವಾಗುತ್ತದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ದೊಡ್ಡನಗೌಡ (ಶಿರಗುಪ್ಪ) :—ಸನ್ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಒಂದೆರಡು ವಿಚಾರಗಳನ್ನು ಸಹಕಾರ ಇಲಾಖೆಯ ಬಗ್ಗೆ, ಪಂಚಾಯಿತಿಗಳ ಬಗ್ಗೆ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ ಸ್ವಾಮಿ ಅನೇಕ ಸದಸ್ಯರು ಪ್ರತಿವರ್ಷವೂ

ಸಹಕಾರ ಸಂಘಗಳ ಬಗ್ಗೆ ಸಹಕಾರ ಇಲಾಖೆಯ ಬಗ್ಗೆ ಟೀಕೆಗಳನ್ನು ಮಾಡುತ್ತಾ ಬರುತ್ತಿದ್ದಾರೆ. ಆದರೆ ಸರ್ಕಾರದವರಾಗಲೀ, ಜನತೆಯಾಗಲೀ ಇದನ್ನು ಯಾವರೀತಿ ಮಾಡಬೇಕೆಂದು ಯೋಚನೆ ಮಾಡುತ್ತಿಲ್ಲ. ಇದು ಪ್ರತಿಯೊಬ್ಬರಿಗೂ ಸಂಬಂಧಪಟ್ಟ ವಿಷಯ ಆದ್ದರಿಂದ ಇದನ್ನು ಎಲ್ಲರೂ ಯೋಚನೆ ಮಾಡಿ ಒಂದು ಒಳ್ಳೆಯ ಸ್ಥಿತಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಈಗಿನ ಪರಿಸ್ಥಿತಿಯಲ್ಲಿ ದೇಶದಲ್ಲಿ ದಳ್ಳಾಳಿಗಳಾಗಲೀ, ಮನಿಲೆಂಡರುಗಳಾಗಲಿ, ಎಲ್ಲಾ ರೈತರಿಗೂ ದುಡ್ಡು ಕೊಡುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ರೈತರಿಗೆ ಹೇಗೆ ಹಣವನ್ನು ಒದಗಿಸಬೇಕು ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಸಾಹುಕಾರರಾಗಲೀ, ಸೊಸೈಟಿಗಳಾಗಲೀ, ಅಥವಾ ಇನ್ನು ಯಾವುದೇ ಮಾಧ್ಯಮಾಂತರವಾಗಲೀ, ಹಳ್ಳಿಯ ಜನಸಂಖ್ಯೆಗೆ ಅನುಗುಣವಾಗಿ ೧೫ ಪರ್ಸೆಂಟಿಗಿಂತ ಜಾಸ್ತಿ ಯಾವ ರೈತನಿಗೂ ನಾವು ಸಾಲವನ್ನು ಪೂರೈಸುವುದಕ್ಕೆ, ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ಕೊಟ್ಟ ಸಾಲ ಪಾಪಸ್ಸು ಬರುವುದೂ ಇಲ್ಲ. ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ದೇಶದಲ್ಲಿ ಇಂಥಾ ಕಷ್ಟಪರಿಸ್ಥಿತಿ ಉಂಟಾಗಿರುವಾಗ ಹಳ್ಳಿಗರ ಅಭಿವೃದ್ಧಿ ಆಗುವಂತೆ ಮಾಡಿ, ಅವರಿಗೆ ಕಲ್ಯಾಣವಾಗುವಂತೆ ಮಾಡುವುದು ಅತ್ಯಗತ್ಯ. ಇವೊತ್ತು ನಮ್ಮ ದೇಶದಲ್ಲಿ ಅನೇಕ ಸೊಸೈಟಿಗಳು ದೋಷಪೂರಿತವಾಗಿವೆ ಅನೇಕ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ದೋಷಪೂರಿತವಾದ ಸೊಸೈಟಿಗಳ ಮೇಲೆ ಅದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮತೆಗೆದುಕೊಳ್ಳುವುದು ಅಗತ್ಯ. ದೇಶಕ್ಕೆ ಕಲ್ಯಾಣವನ್ನುಂಟು ಮಾಡುವ ದೃಷ್ಟಿಯಿಂದ ಸರ್ಕಾರದವರು ಈ ಸೊಸೈಟಿಗಳ ಕಡೆಗೆ ಗಮನವನ್ನು ಹರಿಸಬೇಕು ಎಂದು ನಾನು ಹೇಳುತ್ತೇನೆ. ಇಲ್ಲಿಯವರೆಗೂ ಸಹಕಾರ ಇಲಾಖೆಯಮುಖಾಂತರ ನಾವು ರೈತರಿಗೆ ೧೦-೧೫ ಪರ್‌ಸೆಂಟ್ ಫೈನಾನ್ಸ್ ಒದಗಿಸಿರಬಹುದು. ಕೆಲವು ಶಾಖೆಗಳಲ್ಲಿ ದೋಷಪೂರಿತವಾದ ವ್ಯವಸ್ಥೆಯಾಗಿರಬಹುದು. ಆದರೂ ನೀರಾವರಿ ಪ್ರದೇಶದಲ್ಲಿ ಪ್ರತಿಯೊಬ್ಬ ರೈತನಿಗೂ ಸಾಧ್ಯವಾದಷ್ಟು ಸಾಲ ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಇದರಿಂದ ಆವನು ದಳ್ಳಾಳಿಗಳ ಮುಖಾಂತರ ಸಾಲ ಪಡೆಯುವುದು ಕೊನೆಯಾಗುವುದು. ಅದನ್ನು ಸರ್ಕಾರದವರು ಎಚ ರಿಕೆಯಿಂದ ಗಮನಿಸಿ ತಿಳಿದು ಕೊಳ್ಳಬೇಕು.

ಇನ್ನು ರೂರಲ್ ಹೌಸಿಂಗ್ ಸ್ಕೀಮ್, ಇವತ್ತು ಅನೇಕ ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿ ಮುಗಿದಿಲ್ಲವೆಂದು ಹೇಳುತ್ತಿದ್ದಾರೆ. ಈ ಸ್ಕೀಂ ೧೦ ವರ್ಷಗಳಿಂದಲೂ ಜಾರಿಯಲ್ಲಿ ಇದೆ. ಇದಕ್ಕೆ ಸರ್ಕಾರದವರು ಕಡಿಮೆ ಹಣ ಕೊಟ್ಟರೆ ಈ ಯೋಜನೆಯು ಯಶಸ್ವಿಯಾಗುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಎಲ್ಲಾ ಹಳ್ಳಿಗಳಿಗೆ ಸೇರಿ ೧೦ ಲಕ್ಷ ರೂಪಾಯಿ ಕೊಟ್ಟರೆ ಈ ಸ್ಕೀಂ ಯಾವ ರೀತಿ ಯಶಸ್ವಿಯಾಗುತ್ತದೆ ಎಂಬುದನ್ನು ಸರ್ಕಾರದವರು ಗಮನಿಸಬೇಕು. ಮುಂದಾದರೂ ಈ ರೂರಲ್ ಹೌಸಿಂಗ್ ಸ್ಕೀಂ ಯಶಸ್ವಿಯಾಗಿ ನಡೆಯಬೇಕಾಗಿದೆ. ಮತ್ತು ಅದರಿಂದ ಅನೇಕ ಹಳ್ಳಿಗಳ ಉದ್ಧಾರವಾಗಬೇಕಾಗಿದೆ ಮತ್ತು ಅನೇಕ ಬಡವರು ಇದರಿಂದ ಲಾಭ ಪಡೆಯಬೇಕಾಗಿದೆ.

ಇವತ್ತು ರೈತರಿಗೆ ಸಹಕಾರಿ ಸಂಘಗಳ ಮೂಲಕ ಗೊಬ್ಬರವನ್ನು, ಬೀಜಗಳನ್ನು ಎಲ್ಲಾ ರೈತರಿಗೆ ಒದಗಿಸಬೇಕಾಗಿದೆ, ಅಂದರೆ ಸಹಕಾರಿ ಸಂಘಗಳನ್ನು ಸರ್ಕಾರದವರು ಉದ್ಧಾರ ಮಾಡಬೇಕಾಗಿದೆ. ಇವತ್ತು ಜನತೆಯೂ ಕೂಡ ಮನಸ್ಸು ಬದಲಾಯಿಸಬೇಕಾಗಿದೆ. ಇವತ್ತಿನ ದಿವಸ ರೈತರು ಉಳಿಯಬೇಕಾದರೆ, ಪ್ರತಿಯೊಂದು ಹಳ್ಳಿಯಲ್ಲಿಯೂ ಸಹಕಾರಿ ಸಂಘಗಳು ಒಳ್ಳೆ ರೀತಿಯಲ್ಲಿ ಕೆಲಸಮಾಡಿ, ಜನರು ಒಳ್ಳೆಯ ಮನಸ್ಸಿನಿಂದ ದುಡಿದರೆ ರೈತರ ಏಳಿಗೆಯಾಗುತ್ತದೆ ಎಂದು ಹೇಳುತ್ತೇನೆ. ಪಂಚಾಯತ್ ಬಗ್ಗೆ ಜಿಲ್ಲಾಪರಿಷತ್ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಪಂಚಾಯತಿಗಳಲ್ಲಿ ಕೆಲಸವು ಸರಿಯಾಗಿ ನಡೆಯುತ್ತಾ ಇಲ್ಲ; ಮತ್ತು ಅದರ ಮೇಲ್ವಿಚಾರಣೆಯನ್ನು ಸರ್ಕಾರದವರು ವಹಿಸುತ್ತಾ ಇಲ್ಲ. ಇವತ್ತು ಹಳ್ಳಿಯ ಉದ್ಧಾರವಾಗಬೇಕಾದರೆ, ಅಲ್ಲಿ ಪಂಚಾಯತಿಗಳು, ಸಹಕಾರಿ ಸಂಘಗಳು ಎಲ್ಲಾ ಚೆನ್ನಾಗಿ ಕೆಲಸ ಮಾಡಬೇಕಾಗುತ್ತದೆ. ಇವತ್ತು ನಮ್ಮ ದೇಶದ ಆಹಾರ ಪರಿಸ್ಥಿತಿ ಹೋದ ವರ್ಷಕ್ಕಿಂತ ಉತ್ತಮ ಗೊಂಡಿದೆ. ಇವತ್ತು ಸರ್ಕಾರ ಮಾರ್ಕೆಟಿಂಗ್ ಸೊಸೈಟಿಗಳಿಗೆ ಪ್ರೊಕ್ಯೂರ್‌ಮೆಂಟ್ ಜವಾಬ್ದಾರಿಯನ್ನು ವಹಿಸಿದೆ. ಇವತ್ತು ಅನೇಕ ಸೊಸೈಟಿಗಳು ಕ್ರಮವಾಗಿ ನಡೆದುಕೊಂಡು ಬಂದಿವೆ. ಆದರೂ ಕೆಲವೊಂದು ಸೊಸೈಟಿಗಳಿಗೆ ಅನೇಕ ಕಷ್ಟಗಳು ಬಂದಿರುತ್ತವೆ. ಈಗ ಕಷ್ಟವೇನೆಂದರೆ, ಪ್ರತಿಯೊಂದು ಸೊಸೈಟಿಯಲ್ಲಿಯೂ ನೆಲ್ಲನ್ನು ಅಕ್ಕಿ ಮಾಡಿದ ನಂತರ ಎರಡು ತಿಂಗಳಲ್ಲಿ ಆ ಸ್ಟಾಕನ್ನು ವಿನಿಯೋಗಿಸುವುದು ಸರ್ಕಾರದ ಜವಾಬ್ದಾರಿ. ಆದರೆ ಅನೇಕ ಸೊಸೈಟಿಗಳಲ್ಲಿ ೬-೮ ತಿಂಗಳಾದರೂ ಹಾಗೆಯೇ ಬಿಟ್ಟು ಅಕ್ಕಿ ಸ್ಟಾಕ್ ಕೂಡ ಹಾಳಾಗಿ, ಅದರಿಂದ ಸೊಸೈಟಿಗೆ ಮತ್ತು ಸರ್ಕಾರಕ್ಕೆ ನಷ್ಟ ಬರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಡಿಪಾರ್ಟ್‌ಮೆಂಟಿನಲ್ಲಿ ಸಾಕಷ್ಟು ಸ್ಟಾಕ್ ಇದೆ. ಮುಂದೆ ಕೂಡ ಎಲ್ಲಾ ಸೊಸೈಟಿಗಳು ಸ್ವಂತವಾಗಿ ಪರ್ಚೇಸ್ ಮಾಡಿ ವ್ಯಾಪಾರ ಮಾಡುವುದಕ್ಕೆ ಅನುಮತಿ ಕೊಟ್ಟರೆ, ಇದರಿಂದ ಸರ್ಕಾರಕ್ಕೂ ಒಳ್ಳೆಯದಾಗುತ್ತದೆ, ಮತ್ತು ರೈತರಿಗೂ ಕಾಂಪಿಟಿಟೀವ್ ರೇಟ್ ಸಿಗುತ್ತದೆ; ಮತ್ತು ಮಾರ್ಕೆಟ್ಟಿನಲ್ಲೂ ಸರಿಯಾದ ರೇಟ್ ಇರುತ್ತದೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಎಂ. ದೊಡ್ಡನಗೌಡ)

ಕೊನೆಯದಾಗಿ ತುಕೋಳ್ ಕಮಿಷನ್ ರಿಪೋರ್ಟು ಬಗ್ಗೆ ಒಂದು ಮಾತು ಹೇಳುತ್ತೇನೆ. ಇವರ ವರದಿ ಪ್ರಕಾರ ಕೋ ಆಪರೇಟಿವ್ ಇಲಾಖೆಯಲ್ಲಿರುವ ಸಿಬ್ಬಂದಿಗಳಿಗೆ ಬಹಳ ಅನ್ಯಾಯವಾಗಿದೆ. ಅಲ್ಲಿರುವ ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ಸ್ ಮತ್ತು ಇನ್‌ಸ್ಪೆಕ್ಟರ್ಸ್ ಎಲ್ಲಾ ಏನಿದ್ದಾರೆ, ಅವರಿಗೆ ತುಕೋಳ್ ವರದಿ ಪ್ರಕಾರ ಯಾವ ಹೆಚ್ಚಳವೂ ಆಗಿಲ್ಲ ಆದರೆ ಆಗ್ರಿಕಲ್ಚರಲ್ ಇಲಾಖೆಯ ಸ್ಕೇಲ್ಸ್ ಹೆಚ್ಚು ಮಾಡುವುದು ಅನಾವಶ್ಯವೆಂದು ಹೇಳಿದರೂ ಗ್ರಾಜ್ಯುಯೇಟ್ ಇನ್ಸ್‌ಪೆಕ್ಟರಿಗೆ ೨೧೦, ನಾನ್ ಗ್ರಾಜ್ಯುಯೇಟ್ಸ್ ೧೯೦ ಮಾಡಿದ್ದಾರೆ ಇದೇ ರೀತಿ ಸಿ ಇ ಒ, ಎಸ್ ಇ ಒ ಇವರಿಗೆ ಕೇವಲ ೧೦ ರೂಪಾಯಿ ಕೊಟ್ಟಿರುವುದರಿಂದ ಆ ನೌಕರರಿಗೆ ಅಸಮಾಧಾನವಾಗಿದೆ. ಇದು ಯಾವ ರೀತಿ ಮಾಡಿದ್ದಾರೆಂಬುದನ್ನು ಸಂಬಂಧಪಟ್ಟ ಮಂತ್ರಿಯವರು ಗಮನಿಸಿ ಅವರಿಗೆ ನ್ಯಾಯ ದೊರೆಯುವಂತೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್):— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಹಕಾರ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನಾಡುತ್ತೇನೆ. ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಅತ್ಯಂತ ಮಹತ್ವವಾದ ಇಲಾಖೆಯೆಂದರೆ, ಈ ಸಹಕಾರ ಇಲಾಖೆ. ಉಳಿದ ಇಲಾಖೆಯಲ್ಲಿ ಜನರ ಪ್ರತಿನಿಧಿಗಳ ಕೈಯಲ್ಲಿ ಹಣಕಾಸಿನ ವ್ಯವಹಾರ ಇರುವುದಿಲ್ಲ. ಆದರೆ ಈ ಇಲಾಖೆಯಲ್ಲಿ ಜನರ ಪ್ರತಿನಿಧಿಗಳ ಕೈಯಲ್ಲಿ ಹೇರಳವಾದ ಧನವನ್ನು ಕೊಟ್ಟು ಸರ್ಕಾರ ಹಾಗೂ ಸಮಾಜಕ್ಕೆ ಅದರ ಸದುಪಯೋಗ ಆಗಬೇಕೆನ್ನುವ ಉದ್ದೇಶದಿಂದ, ಅಭಿವೃದ್ಧಿ ಸಹಕಾರ, ಮತ್ತು ಪಂಚಾಯತಿ ರಾಜ್ಯ ಇಲಾಖೆಯನ್ನು ಆರಂಭ ಮಾಡಿದ್ದಾರೆ. ಈ ಇಲಾಖೆಯನ್ನು ಎಂಥವರ ಕೈಯಲ್ಲಿ ಕೊಡಬೇಕೆನ್ನುವ ಮಾತನ್ನು ವಿಚಾರ ಮಾಡುವುದಾದರೆ, ಸಂಸ್ಕೃತಿಯಲ್ಲಿ, ದಕ್ಷತೆಯಲ್ಲಿ ಮತ್ತು ವಿನ್ಯೆಯಲ್ಲಿ ಪರಿಣಿತರಾದಂತಹ, ಕಳಂಕರಹಿತವಾದ ವ್ಯಕ್ತಿತ್ವವನ್ನು ಗಳಿಸಿದಂತಹ ಮಹನೀಯರ ಕೈಯಲ್ಲಿ ಈ ಖಾತೆಯನ್ನು ಕೊಟ್ಟರೆ ಸಮಾಜ ಉದ್ಧಾರವಾಗುತ್ತದೆ. ಆದರೆ ಅಧಮರ ಕೈಯಲ್ಲಿ ಈ ಖಾತೆಯನ್ನು ಕೊಟ್ಟಾಗ ಸಮಾಜ ಅಧೋಗತಿಗೆ ಹೋಗಿ, ದೇಶ ತನ್ನ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುವ ದುರ್ದೈವ ಬರಬಹುದು. ಸಹಕಾರ ಸಂಸ್ಥೆಯಲ್ಲಿ ನಡೆಯುವಂತಹ ಅವ್ಯವಹಾರಗಳನ್ನು ಅನೇಕರು ಹೇಳಿದ್ದಾರೆ. ಆದರೆ ಅಸೆಂಬ್ಲಿಯಲ್ಲಿ ಯಾವುದಾದರೂ ಮಹತ್ವದ ಮಾತನ್ನು ಹೇಳಿದರೂ ಅದಕ್ಕೆ ತಕ್ಕ ಗಮನ ಕೊಟ್ಟು ಸರ್ಕಾರದವರು ತಪ್ಪಿತಸ್ಥರಿಗೆ ಶಿಕ್ಷೆಯನ್ನು ಮಾಡುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ. ಆ ದೃಷ್ಟಿಯಿಂದ ಅಸೆಂಬ್ಲಿಯಲ್ಲಿ ಮಾತನಾಡುವ ಕಾಲ ವ್ಯರ್ಥವಾಗುತ್ತದೋ ಎಂಬ ಹೆದರಿಕೆ ಬರುತ್ತಿದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಬಿಜಾಪುರ ಜಿಲ್ಲೆಯ ಡಿ ಸಿ ಸಿ ಬ್ಯಾಂಕಿನ ಮಾಲಿಂಗಪುರ್ ಶಾಖೆಯಲ್ಲಿ ಧೂಪದನ್ನ ಎಂಬ ಒಬ್ಬರು ಮ್ಯಾನೇಜರ್ ಇದ್ದರು. ಅವರು ೨೨ ಸಾವಿರ ನಗದನ್ನು ತೆಗೆದುಕೊಂಡು ೨೩ ತಿಂಗಳುಗಳು ಪರಾರಿಯಾಗಿ ಹೋದರು.

ಆತನ ಮೇಲೆ ಪೋಲೀಸ್ ಇನ್‌ವೆಸ್ಟಿಗೇಷನ್ ಆಯಿತು ಪೋಲೀಸಿನವರನ್ನು ಕರೆದುಕೊಂಡು ಹೋಗಿ ಜಪ್ತಿ ಮಾಡಿಸಿ ಆತನ ಕಡೆಯಿಂದ ಜಮೀನು ಮಾರಿಸಿ ೨೬ ಸಾವಿರ ರೂಪಾಯಿಗಳನ್ನು ತೆಗೆದುಕೊಂಡರು. ಅಂತಹ ಡೈರಕ್ಟರ್ ಸಾಹೇಬರುಗಳು ಅಸೆಂಬ್ಲಿಯಲ್ಲಿ ಬಹಳ ಜನರು ಇದ್ದಾರೆ. ಈ ವಿಚಾರವನ್ನು ನಾನು ಅಧಿಕಾರಿಗಳಿಗೆ ಮತ್ತು ಮಂತ್ರಿಗಳ ಗಮನಕ್ಕೆ ತರುವುದು ಅಷ್ಟೇ ಅಲ್ಲ ಮಾನ್ಯ ಮಿತ್ರರಾದಂಥ ಮಾನ್ಯ ಶ್ರೀ ನಾಡಗೌಡರ ಗಮನವನ್ನು ಸೆಳೆಯುತ್ತಿದ್ದೇನೆ. ಇಂತಹವರನ್ನು ಸರ್ವಿಸ್ಸಿನಲ್ಲಿ ಸೇರುಸುವುದರಿಂದ ಮಕ್ಕಳು ತಾಳಾಗಿ ಹೋಗುತ್ತಾರೆ. ಇವರು ಈಗ ಮಕ್ಕಳ ಆಸ್ತಿಯನ್ನು ಕಳೆಯುವುದಕ್ಕೆ ಹೊರಟಿದ್ದಾರೆ. ಸಹಕಾರಿ ಶಾಖೆಯಲ್ಲಿ ನಿದ್ರೆ ಹೊಡೆಯುತ್ತಿದ್ದಾರೆ. ಕಚ್ಚಾಟಗಳೇ ಜಾಸ್ತಿ. ಅನೇಕರು ನೀತಿಭ್ರಷ್ಟರಾಗಿ ಇರುತ್ತಾರೆ. ಇದರಿಂದ ಮಕ್ಕಳ ಆಸ್ತಿಪಾಸ್ತಿ ಹಾಳಾಗಿ ಹೋಗುತ್ತಿದೆ. ಆದ್ದರಿಂದ ವರ್ಷದ ಅಂತ್ಯದೊಳಗೆ ಇದನ್ನು ತನಿಖೆಮಾಡಿ ನಾನು ಹೇಳುವುದರಲ್ಲಿ ಸತ್ಯಾಂಶವಿದೆಯೇ ಎಂಬುದನ್ನು ಖಾತರಿಮಾಡಿಕೊಂಡು ಸರ್ಕಾರದವರು ಇದನ್ನು ಸರಿಯಾಗಿ ನೋಡಿಕೊಳ್ಳಬೇಕು. ಡಿ. ಸಿ. ಸಿ. ಬ್ಯಾಂಕಿನವರು ಲೋಕಲ್ಲಾಗಿ ಒಬ್ಬ ಇನ್‌ಸ್ಪೆಕ್ಟರ್ ಅವರನ್ನು ಇಟ್ಟಿದ್ದಾರೆ. ಅವರು ಮಾನ್ಯ ಶ್ರೀ ಎಂ. ಆರ್. ಪಾಟೀಲ್ ಅವರು ಹೇಳಿದಂತೆ, ಎಷ್ಟೋ ದುಡ್ಡನ್ನು ಹೆಚ್ಚು ಬಡ್ಡಿಗೆ ಕೊಟ್ಟು ಹಣ ಪೋಲು ಮಾಡುತ್ತಿದ್ದಾರೆ. ಅವರನ್ನು ಹೊರಗಡೆ ವರ್ಗಮಾಡಿ ಎಂದರೆ, ಅಲ್ಲಿ ಸಹಕಾರ ಮಂತ್ರಿಗಳ ಮಿತ್ರರು ಚೇರ್‌ಮನ್ ಆಗಿ ಇರುವವರೆಗೂ ಆಗುವುದಿಲ್ಲವೆಂದು ಹೇಳಿದರು. ಆದ್ದರಿಂದ ಸಹಕಾರ ಶಾಖೆ ತಿದ್ದುಪಡಿಯಾಗುವ ಉತ್ತಮವಾದ ಕಾಲ ಇನ್ನೂ ಬಂದಿಲ್ಲ. ಆದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ನಲ್ಲಿ ೧೬ ಸಾವಿರ ರೂಪಾಯಿಗಳ ಭ್ರಷ್ಟಾಚಾರ ಮಾಡಿದಂಥ ಒಬ್ಬ ಸೆಕ್ರೆಟರಿಯನ್ನು ತೆಗೆದಿದ್ದಾರೆಂದು ಸಹಕಾರ ಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ. ಆದರೂ ಇವತ್ತಿನವರೆಗೂ ಆತ ಸಂಬಳವನ್ನು ಆ ಬ್ಯಾಂಕಿನಿಂದಲೇ

ತೆಗೆದುಕೊಳ್ಳುತ್ತಿದ್ದಾನೆ. ಅವನ ಮಾವನ ಹೆಸರಿನಲ್ಲಿ ೨೦ ಸಾವಿರ ರೂಪಾಯಿಗಳ ಸಾಲ ಕೊಡಿಸಿದ್ದಾನೆ ಮತ್ತು ಮಾವನ ಪರವಾಗಿ ಆತನೇ ಕಂತು ಕೊಟ್ಟು ತುಂಬಿಸುವುದಕ್ಕೆ ಹೊರಟಿದ್ದಾನೆ. ರೈತರ ಮನೆತನವನ್ನು ಹಾಳುಮಾಡುತ್ತಿದ್ದಾರೆ.

ಈ ಸಹಕಾರ ಸಂಘಗಳು ವ್ಯಾಪಾರಗಾರರ ದಳ್ಳಾಳಿಗಳಂತೆ ಮತ್ತು ಸಾಹುಕಾರರ ಕಪಿ ಮುಷ್ಟಿಯಿಂದ ಕೆಲಸ ಮಾಡುತ್ತೀವೆ. ಹಳ್ಳಿಗಳ ಸುಧಾರಣೆ ಮತ್ತು ಭೂಮಿ ಸುಧಾರಣೆಯಾಗುವಂತೆ ಈ ಸಹಕಾರ ಸಂಘಗಳು ಕೆಲಸ ಮಾಡಬೇಕು. ಸಮಾಜದಿಂದ ಸಿಗುವಂಥ ಹಣವನ್ನು ಸದುಪಯೋಗ ಮಾಡಿಕೊಂಡು ರೈತರಲ್ಲಿ ಮಿತವ್ಯಯ, ಮತ್ತು ಅವರು ಹೆಚ್ಚಾಗಿ ದುಡಿಯುವಂಥ ಉತ್ಸಾಹವನ್ನು ಉಂಟು ಮಾಡಬೇಕು. ಎಂತಹ ಸರ್ಕಾರ ಬರಲಿ, ರಾಜ್ಯಗಳು ಅಳಿಯಲಿ ಅಥವಾ ಉಳಿಯಲಿ ರೈತರ ಅಭಿವೃದ್ಧಿಯಾಗಬೇಕಾದರೆ ಪಂಚಾಯಿತಿಗಳು ಮತ್ತು ಗ್ರಾಮಪಂಚಾಯಿತಿಗಳು ಮತ್ತು ಸಹಕಾರ ಸಂಘಗಳು ಮಾತ್ರ ಸ್ವತಂತ್ರವಾಗಿರಬೇಕು. ಅಲ್ಲಿ ಮಾತ್ರ ಭ್ರಷ್ಟಾಚಾರ ಇರಕೂಡದು. ಈ ರೀತಿ ಯೋಗ್ಯವಾದ ಆಡಳಿತವನ್ನು ಮಾಡಿ ದಕ್ಷತೆಯಿಂದ ಸಂಬಂಧಪಟ್ಟ ಕಾನೂನುಗಳನ್ನು ತಿದ್ದುಪಡಿಮಾಡಿ ಅವುಗಳನ್ನು ಹೆಚ್ಚಿನ ದರ್ಜೆಗೆ ಏರಿಸುವ ಹಾಗೆ ಮಾಡಬೇಕು.

ಇನ್ನು ಅಭಿವೃದ್ಧಿ ಇಲಾಖೆಯಲ್ಲಿ ಹಳ್ಳಿಗಳಲ್ಲಿ ಕೆಲಸ ಮಾಡಲು ಉತ್ಸವಂವಾದ ಮತ್ತು ನೀತಿಪಂತರಾದ ಜನರನ್ನು ನೇಮಿಸಬೇಕು. ಯಾವನು ಬೇಡ ಎಂದು ಹೇಳುತ್ತಾನೋ ಅವನನ್ನು ಒತ್ತಾಯದಿಂದ ಅಲ್ಲಿಗೆ ಹಾಕುತ್ತೀರಿ. ಅಲ್ಲಿ ಅವನಿಗೆ ಅನೇಕ ವಿಷಯಗಳು ಗೊತ್ತಿಲ್ಲದೆ ಅಕ್ರಮ ವ್ಯವಹಾರ ಎಷ್ಟೊ ನಡೆಯುತ್ತದೆ. ಇದು ದೇಶದ ಪ್ರಶ್ನೆಯಲ್ಲ. ರಾಷ್ಟ್ರದ ಪ್ರಶ್ನೆಯೆನ್ನುವ ಮಾತನ್ನು ಗಮನದಲ್ಲಿಟ್ಟುಕೊಂಡು ಇಡೀ ಮಂತ್ರಿಮಂಡಲದವರು ಈ ವಿಷಯವನ್ನು ಕೂಲಂಕುಷವಾಗಿ ವಿಚಾರ ಮಾಡಬೇಕು. ಯಾವ ಸ್ಥಾನಕ್ಕೆ ಯಾರನ್ನು ಇಟ್ಟುಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡಿಕೊಂಡು ಅದರಲ್ಲಿ ತಕ್ಕ ಬದಲಾವಣೆಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಒಂದೆರಡು ನಿಮಿಷಗಳ ಕಾಲ ಹೆಚ್ಚಿನ ಅವಕಾಶವನ್ನು ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI G. CHANDRAKANT (Bidar) Mr. Speaker, Sir, while opposing the Demands placed before this House, I would like to say a few words on this occasion.

† The very pious idea of co-operative movement in the minds of these people seems to have gone. The movement of co-operation was started with the intention to see that everybody in the state and the nation is benefited ther by ultimately. On the contrary, instead of the ultimate consumer or the ultimate man in-the-street being be nefi ted, it is a few people who happen to be the benchmen or the strong supporters of a few in power are now standing to benefit. They have got a certain set of people who are made presidents or Vice-presidents etc. There are about four or five people in Bidar and it is they alone who become the President of this society or that society. They are given the President ship or Vice-presidentship turn by turn. This is how the co-operative societies have become the pasture lands for them and that is how these societies are going to dogs.

I would like to point out that the Taluka Agricultural Marketing Society president is also a bus operator and there is a lorry for carryng agrieultural produce from the fields to the T. A. P. M. S. That man is playing a lot of misohief in the sense that he is using th society's lorrie. for his own purpose and the tyres of the lorries for his own busess These are clearly detectable. Unfortunately, these people have no mind to detect that.

(Sri G, CHANDRAKANT)

In one case, a sum of Rs. 62,000 was the collection made. The expenditure incurred is Rs. 60,000. I do not know whether any Officers have looked into the books maintained in respect of the lorry; I also do not know whether auditors go there and audit the accounts. This is not the only instance. There are a good number of instances. I do not think I shall be able to tell the other instances within the short time at my disposal.

4-30 P.M.

This Department will be doing a great service to the people of Bangalore if they redress one long-standing grievance. There is one Officer by name Sri Hanumanthappa, who is the Superintendent of the Bangalore Regulated Marketing Yard. He has been in Bangalore for the last eight years in the same Department. Even Sri T.R. Shamanna, hon. Member of this House, also spoke to me about him to-day; he also stated that he has been here for the last 8 years and that there are several complaints against him. Nobody has been able to shift him. I do not know whether he is related to some big influential man. Even if he is related to a powerful person, I suggest that he should not continue in that post or in Bangalore as he has been responsible for so many injustices and nuisances. I am told that on the Tumkur Road a Marketing Yard is being built and that he is plying lot of mischief in the allotment of plots for the construction of shops. It appears he has got some outsiders, those who are not residing within the Bangalore Regulated Marketing Yard, got them registered bogusly; and has been allotting plots at a cheaper rate. I do not know what the procedure followed there is, with respect to allotment of plots. I wish to inform the Hon. Minister concerned that there are several complaints against him. The complaints against him seem to be genuine. The Government will be doing a great service to the citizens if he is removed from his present post and an enquiry is held against him. I wish, in the first instance, that Sri Hanumanthappa be immediately transferred out or suspended and enquiry held into the complaints against him. To-day also a few businessmen met me and stated that they had made several representations and written several letters to the concerned Authorities against this Superintendent of the Bangalore Regulated Marketing Yard.

With regard to Food, I wish to say a few words. There is vast propaganda with regard to the growing of hybrid jowar. The Government have adopted a policy to purchase hybrid jowar at a fixed price, namely, Rs. 45 from the agriculturists. But when the agricoutlurist take their produce to the T.A.P.M.S. the Society has been refursing to purchase at the rate fixed by the Government and has been offering lesser price. This has been the complaint at several places. If

Government remove this complaint, it will be a great incentive to the agriculturists to produce more and more hybrid jowar and other hybrid varieties. If this State of affairs continues, hereafter the agriculturists may refuse to take up to growing of hybrid jowar, maize etc. I would appeal to the Minister concerned and other Officers to issue a circular to the T.A.P.M.S. to buy the produce without delay which cause inconvenience to the agriculturists whenever they bring their produce to the T.A.P.M.S.

Another point is, there are no facilities to store these foodgrains. About 800 bags of foodgrains have been rendered unfit for human consumption. The concerned authorities were thinking of disposing of this stuff for cattle-feed purposes. When the Minister visited our place, I brought to his notice that these foodgrains were unfit for human consumption. If it is sold for being used as fodder for animals, I am afraid that it may result in the death of animals. If it has been proved that it is unfit for human consumption, it is better it is destroyed. That has not been done and there is an idea to dispose it of for being used as fodder. I once again stress that it is better that the stock is destroyed and no attempt made to see that it is sold for being utilised as cattle-feed.

With these few words, I thank you and close.

† ಶ್ರೀ ವೆಂಕಾನಾಯಕ (ಹರಪನಹಳ್ಳಿ).—ಸನ್‌ಮಾನ್ಯ ಸಭಾಪತಿಗಳೇ, ಸಹಕಾರ, ಗ್ರಾಮಾಭಿವೃದ್ಧಿ, ಪಂಚಾಯಿತಿ ರಾಜ್ಯ, ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಇತರ ಇಲಾಖೆಗಳ ಬಗ್ಗೆ ತಂದಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ನಾಲ್ಕಾರು ವಿಷಯಗಳನ್ನು ತಮ್ಮ ಮುಂದೆ ಹೇಳಲು ನಾನು ಇಚ್ಛಿಸುತ್ತೇನೆ.

ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಬಗ್ಗೆ ಕೆಲವು ಮಾನ್ಯ ಸ್ನೇಹಿತರು ಮಾತನಾಡುತ್ತಾ ಕೆಲವು ವಿಷಯಗಳನ್ನು ಆಡಿದ್ದಾರೆ. ನಾನು ನಮ್ಮ ಬಳ್ಳಾರಿ ಜಿಲ್ಲೆ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಎಂ. ಎಸ್. ಮತ್ತು ಎನ್. ಎಸ್. ನಲ್ಲಿ ಒಂದು ಲಕ್ಷ ೮೦ ಸಾವಿರ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಖೋತಾ ಮಾಡಿದ್ದಾರೆ. ಶ್ರೀಮಾನ್ ನಾಡಗೌಡರು ಬಂದ ಮೇಲೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಕೆಲವು ಯೋಜನೆಗಳನ್ನು ಸಹ ಕಾರ್ಯರೂಪಕ್ಕೆ ತಂದಿಲ್ಲ. ಇವುಗಳನ್ನು ಮುಂದಿನ ವರ್ಷದ ಬಜೆಟ್ಟಿನಲ್ಲಾದರೂ ಸೇರಿಸಿ ಕಾರ್ಯರೂಪಕ್ಕೆ ತರುತ್ತಾರೆಂದು ನಂಬಿದ್ದೇನೆ. ಹಾಗೂ ನಮ್ಮ ಜಿಲ್ಲೆಯಲ್ಲಿರತಕ್ಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ಮತ್ತು ಸಹಕಾರ ಸಂಘಗಳನ್ನು ಮುಂದಕ್ಕೆ ತರಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ರೂರಲ್ ವಾಟರ್ ಸ್ಕೀಂ ಬಗೆ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಪ್ರತಿಯೊಂದು ಹಳ್ಳಿಯಲ್ಲಿಯೂ ಬಹಳ ಅಭಿವೃದ್ಧಿ ಕೆಲಸವನ್ನು ಮಾಡಬೇಕಾಗಿದೆ. ಎಲ್ಲಾ ಊರುಗಳಲ್ಲಿಯೂ ಒಳ್ಳೆಯ ಕುಡಿಯುವ ನೀರಿನ ಸರಬರಾಜು ಮಾಡಬೇಕು. ನಾವು ರೇಡಿಯೋಗಳಲ್ಲಿ, ಪತ್ರಿಕೆಗಳಲ್ಲಿ ನೋಡಿದ್ದೇವೆ ಈ ವಿಚಾರದ ಬಗ್ಗೆ ಬಹಳ ಸಾಕಷ್ಟು ಕೆಲಸಗಳು ನಡೆಯುತ್ತಾ ಇದೆ ಎಂದು, ಆದರೆ ಸ್ವಾತಂತ್ರ್ಯ ಬಂದೂ ೨೨ ವರ್ಷಗಳಾದರೂ ಈವೊತ್ತಿನವರೆಗೂ ನಮ್ಮ ತಾಲ್ಲೂಕಿನಲ್ಲಿ ಏನೂ ಕೆಲಸ ನಡೆದಿಲ್ಲ. ನಮ್ಮ ಹರಪನಹಳ್ಳಿ ತಾಲ್ಲೂಕಿಗೆ ಒಂದು ಯೋಜನೆಯನ್ನು ಮಂಜೂರು ಮಾಡಿದರು. ಅದು ಈವೊತ್ತಿನವರೆಗೂ ಕಾರ್ಯ ರೂಪಕ್ಕೆ ಬಂದಿಲ್ಲ. ಈ ಹರಪನಹಳ್ಳಿ ಯೋಜನೆಯನ್ನು ಮುಂದಾದರೂ ಶೀಘ್ರವಾಗಿ ಮಾಡಿಸಿ ಕೊಡುತ್ತಾರೆಂದು ನಂಬುತ್ತೇನೆ. ಈ ಯೋಜನೆಯನ್ನು ತೆಗೆದುಕೊಳ್ಳದೆ ಹೋದರೆ ಬೇಸಿಗೆ ಕಾಲದಲ್ಲಿ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಸಚಿವರು ಯಾರನ್ನಾದರೂ ಕಳುಹಿಸಿ ಬೇಸಿಗೆ ಕಾಲದಲ್ಲಿ ಅಲ್ಲಿಯ ಜನರ ಕಷ್ಟ ಏನು ಎಂಬುದನ್ನು ವೆರಿಫೈ ಮಾಡಿಸಬೇಕು. ಬೇಕಾದರೆ ನಮ್ಮ ಜಿಲ್ಲಾಧಿಕಾರಿಗಳಿಂದಾಗಲಿ, ಬಿ. ಡಿ. ಓ. ಗಳಿಂದಾಗಲಿ, ಅಲ್ಲಿನ ನೀರಿನ ಕಷ್ಟದ ಬಗ್ಗೆ ವರದಿಗಳನ್ನು ತರಿಸಿಕೊಳ್ಳಲಿ. ಈ ರಿಲೀಫ್ ವರ್ಕ್ಸ್

(ಶ್ರೀ ವೆಂಕಾನಾಯಕ)

ಮಾಡುವಾಗ ಡೆಪ್ಯುಟಿ ಕಮೀಷನ್ನರ ವರದಿ ಮೇಲೆ ಕೆಲವು ಭಾವಿಗಳನ್ನು ಐದು ಆಡಿ ಹತ್ತು ಆಡಿ ಆಳ ಮಾಡಬೇಕೆಂದಿದ್ದರು. ಆದನ್ನು ಆದರೂ ಮಾಡಿದರೆ ಬಹಳಷ್ಟು ಜನಗಳಿಗೆ ನೀರಿನ ಸರಬರಾಯಿ ಅನುಕೂಲ ವಾಗುತ್ತದೆ. ಈ ವಿಚಾರದಲ್ಲಿ ಅಲ್ಲಿನ ಎಂ. ಎಲ್. ಎ. ಗಳು ಎಂ. ಎಲ್. ಸಿ. ಗಳು ವರದಿ ಸಲ್ಲಿಸಿದ್ದಾರೆ. ಈ ಬೇಡಿಕೆಗಳನ್ನು ಸಫಲಗೊಳಿಸದಿದ್ದರೆ ಅಲ್ಲಿಯ ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಗಳ ಬಗ್ಗೆ ಜನರು ಏನು ತಿಳಿದುಕೊಳ್ಳುತ್ತಾರೆ. ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಆದುದರಿಂದ ಈ ಕೆಲಸ ಗಳನ್ನು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ರೀತಿಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಕನಿಷ್ಟಪಕ್ಷ ಒಂದೊಂದು ಊರಿಗೆ ಒಂದೊಂದು ವಾಟರ್ ಸಪ್ಲೈ ಸ್ಕೀಂ ಆದರೂ ಇರಬೇಕು. ಅದೇ ರೀತಿ ನಮ್ಮ ತಾಲ್ಲೂಕಿನ ಬಗ್ಗೆ ನಾಲ್ಕೈದು ಪ್ರಪೋಜಲ್ಸ್ ಇವೆ ಎಂದು ಕೇಳಿದ್ದೇನೆ. ತೆಲಗಿ, ಹುಚ್ಚಂಗಿ, ದುರ್ಗ, ಅರಸಿಕೆರೆ ಇವುಗಳ ಬಗ್ಗೆ ಪ್ರಪೋಜಲ್ಸ್ ಮಾಡಿದ್ದಾರೆ. ಚಿಟಗೇರಿಯಲ್ಲಿ ಅರ್ಧಂಬರ್ಧ ಕೆಲಸವಾಗಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಸ್ವಲ್ಪ ಕೆಲಸಗಳು ಆಗಿವೆ. ಈ ಹರಪನಹಳ್ಳಿ ತಾಲ್ಲೂಕಿನ ಬಗ್ಗೆ ಮಾನ್ಯ ಸಚಿವರು ವಿಶೇಷವಾದಂಥ ಗಮನಕೊಟ್ಟು ಅಲ್ಲಿನ ನೀರಿನ ಅಭಾವವನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಮನವಿ ಸಲ್ಲಿಸುತ್ತೇನೆ. ಮೂರನೆಯದಾಗಿ ಈ ಕೊ-ಆಪರೇಟೀವ್ ಸೊಸೈಟಿಗಳ ಬಗ್ಗೆ ತಮ್ಮ ಮುಂದೆ ಹೇಳ ಬಯಸುತ್ತೇನೆ-ಏನೆಂದರೆ ನಮ್ಮ ತಾಲ್ಲೂಕಿನಲ್ಲಿ ಕೆಲವು ಗ್ರಾಮಾಂತರ ಕೋ-ಆಪರೇಟೀವ್ ಸೊಸೈಟಿಗಳು ಇವೆ. ಅವು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ.

ಕೆಲವು ಸೊಸೈಟಿಗಳಲ್ಲಿ ೫-೬ ವರ್ಷಗಳಿಂದ ಮಾತನಾಡಿಸುವವರೇ ಇಲ್ಲ, ಅವು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ, ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ಸೊಸೈಟಿಗಳಿಗೆ ಮತ್ತಷ್ಟು ಅಲಾಟ್‌ಮೆಂಟ್ ಕೊಟ್ಟು ಅವುಗಳ ಮೂಲಕ ಸಾಲ ದೊರಕುವಂತೆ ಮಾಡಿದ್ದೀರಿ, ಮುಂದೆ ಅಲ್ಲಿ ಸುಸೂತ್ರವಾಗಿ ಕೆಲಸವಾಗುವಂತೆ ನೋಡಿ ಕೊಡಬೇಕು. ಅಧಿಕಾರಿಗಳು ಕೆಲವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ, ಕೆಲವರು ಚೆನ್ನಾಗಿ ಕೆಲಸ ಮಾಡುವುದಿಲ್ಲ. ಜಮಖಂಡಿ ಸಾಹೇಬರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕು, ಅವರಂತಹ ಆಫೀಸರು ಸಿಕ್ಕರೆ ನಮ್ಮ ಪುಣ್ಯ. ಹಿಂದಿನಸಲ ಎರಡು ಮೂರು ಸೊಸೈಟಿಗಳ ವಿಷಯ ಹೇಳಿದ್ದೆ, ಅವರು ಜವಾಬ್ದಾರಿ ಹೊತ್ತುಕೊಂಡು ಮಾಡಿಸಿಕೊಡುತ್ತೇನೆ ಎಂದು ಹೇಳಿದರು, ಅದೇ ರೀತಿಯಿಂದ ಮಾಡಿದ್ದಾರೆ. ನಮ್ಮ ಬಳ್ಳಾರಿಯಲ್ಲಿ ಒಂದು ಸೊಸೈಟಿಗೆ ೩೫-೩೬ ಸಾವಿರ ರೂಪಾಯಿ, ಒಂದು ಸೊಸೈಟಿಗೆ ೪೫ ಸಾವಿರ ರೂಪಾಯಿ, ಇನ್ನೊಂದು ಸೊಸೈಟಿಗೆ ೫೮ ಸಾವಿರ ರೂಪಾಯಿ ಬ್ಯಾಂಕಿನಿಂದ ಸಾಲ ದೊರಕಿಸಿ ಕೊಟ್ಟು ಈ ವರ್ಷ ಆ ಸಾಲದಿಂದ ಗೊಬ್ಬರ, ಬೀಜ ಮುಂತಾದುವನ್ನು ವ್ಯವಸಾಯಕ್ಕೆ ತೆಗೆದುಕೊಂಡು ನಮ್ಮ ತಾಲ್ಲೂಕಿನಲ್ಲಿ ಹೈಬ್ರಿಡ್ ಜೋಳದ ಬೆಳೆಯನ್ನು ಬಹಳ ಜನ ರೈತರು ಚೆನ್ನಾಗಿ ಬೆಳಸಿದರು. ಹರಪನಹಳ್ಳಿ ತಾಲ್ಲೂಕು ಹೈಬ್ರಿಡ್ ಜೋಳದ ಸುಂದರ ನಗರ ಅಂತ ಬೋರ್ಡ್ ಹಾಕಿಸಿಕೊಂಡಿದ್ದಾರೆ, ಅದಕ್ಕೆ ಮತ್ತಷ್ಟು ಸಹಕಾರ ಕೊಡಬೇಕು. ಕೆಲವು ಗ್ರಾಮಸೇವಕರು ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಮುಂಗಾರಿ ಜೋಳದ ಬೆಳೆಗೆ ಈ ವರ್ಷ ಹುಳ ಬಿದ್ದು ನಾಶವಾಗಿದೆ. ತಾವು ತಮ್ಮ ಇಲಾಖೆಯಿಂದ ಆಗಬೇಕಾದ ಕೆಲಸಗಳನ್ನು ಮುಂದೆ ಸುಸೂತ್ರವಾಗಿ ಮಾಡಿಸಿಕೊಡುತ್ತೀರಿ ಎಂದು ನಂಬಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ಮತ್ತೊಂದು ಸಲ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ. "ಜೈ ಹಿಂದ್"

ಶ್ರೀ ಟಿ. ಆರ್. ಶಾಮಣ್ಣ (ಕೋಟೆ)

ಮಾನ್ಯ ಸಭಾಪತಿಗಳೇ, ಈ ದಿನ ಮೊದಲನೆಯದಾಗಿ ಆಹಾರದ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಈಗ ಸರ್ಕಾರ ದವರು ಅನುಸರಿಸುತ್ತಾ ಇರತಕ್ಕ ಆಹಾರದ ನೀತಿ ಬಳಕೆದಾರನಿಗೆ ಆಗಲಿ ಅಥವಾ ಅದನ್ನು ಉತ್ಪಾದನೆ ಮಾಡುವವನಿಗೆ ಆಗಲಿ ಹೆಚ್ಚು ಸಹಾಯವಾಗುತ್ತಾ ಇಲ್ಲ ಎಂಬುದು ನನ್ನ ಭಾವನೆ. ಈಗಿನ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದಂತಹ ಇನ್‌ಫಾರ್ಮಲ್ ರೇಷನಿಂಗ್ ಇರತಕ್ಕ ಸ್ಥಳದಲ್ಲಿ ಅಂದರೆ ರೇಷನ್ ಪಾಪುಗಳಲ್ಲಿ ಸಕ್ಕರೆ ಒಂದು ಬಿಟ್ಟು ಬೇರೆ ಯಾವ ಆಹಾರ ಪದಾರ್ಥವೂ ಕೂಡ ವ್ಯಾಪಾರ ಆಗದೇ ಇರುವ ವಿಚಾರ ಆಹಾರದ ಇಲಾಖೆಯವರಿಗೆ ಗೊತ್ತಿರಬಹುದು. ಅವರ ಆಡಳಿತ ಸುವ್ಯವಸ್ಥಿತವಾಗಿಲ್ಲದೇ ಇರುವುದರಿಂದ ಶೇಖರಣೆಮಾಡತಕ್ಕ ಬತ್ತ ಮತ್ತು ಬತ್ತವನ್ನು ಅಕ್ಕಿಮಾಡುವ ವಿಚಾರದಲ್ಲಿ ಬಹಳ ಹುಷಾರಿನಿಂದ ಕೆಲಸ ಮಾಡದೆ ನ್ಯಾಯವಾಗಿ ಉತ್ಪಾದನೆ ಮಾಡತಕ್ಕವನಿಗೆ ಸರಿಯಾದಂತಹ ಬೆಲೆ ದೊರಕದೆ, ಬಳಕೆದಾರನಿಗೆ ಬಹಳ ಕೆಟ್ಟ ಅಂದರೆ ಕಚಡಾ ಅಕ್ಕಿಯನ್ನು ಒದಗಿಸುತ್ತಾ ಇರುವುದು ಈ ಆಹಾರ ಇಲಾಖೆಯ ಒಂದು

ವೈಖರಿ ಎಂದು ಕಾಣುತ್ತದೆ. ಒಳ್ಳೆಯ ಆಕ್ಕಿಯನ್ನು ಒದಗಿಸುವುದರ ಬಗ್ಗೆ ಸರ್ಕಾರ ಯಶಸ್ಸನ್ನು ಗಳಿಸಿಲ್ಲ. ಇದಕ್ಕೆ ಸರ್ಕಾರ ಹೊಣೆಯನ್ನು ಹೊರಬೇಕು. ಈಚೆಗೆ ಗೋಧಿಯನ್ನು ಸರಿಯಾದಂತಹ ರೀತಿಯಲ್ಲಿ ಶೇಖರಣೆ ಮಾಡದೆ ಒಳ್ಳೆಯ ಗೋಧಿ ಸಿಕ್ಕಲಿಲ್ಲ ಎಂದು ಹೇಳಿ ಅನೇಕ ಕಡೆ ಹೇಳುತ್ತಾ ಇದ್ದಾರೆ. ನನ್ನ ಸಲಹೆಯಾದರೂ ಇಷ್ಟೆ. ಈಗಿನ ಆಹಾರ ಪರಿಸ್ಥಿತಿ ಸ್ವಲ್ಪ ಸಡಿಲವಾಗಿರುವುದರಿಂದ ಸರ್ಕಾರ ಸಾಕಾದಷ್ಟು ಬಫರ್ ಸ್ಟಾಕ್ ಇಟ್ಟುಕೊಂಡು ಆಹಾರ ಸಾಮಾನುಗಳನ್ನು ಫ್ರೀ ಮಾರ್ಕೆಟಿನಲ್ಲಿ ಮಾರುವುದಕ್ಕೆ ಅವಕಾಶಮಾಡಿ ಕಂಟ್ರೋಲನ್ನು ಸಡಿಲಮಾಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಸೂಚನೆ ಕೊಡಲಿಚ್ಛಿಸುತ್ತೇನೆ. ಅನೇಕ ನ್ಯಾಯವಾದಂತಹ ವರ್ತಕರು ಇದ್ದಾರೆ, ನಿಜ, ಆದರೂ ಈ ವಿಧವಾದ ಅನುಕೂಲವನ್ನು ಉಪಯೋಗಿಸಿಕೊಂಡು ಸಮಾಜವನ್ನು ಶೋಷಣೆ ಮಾಡತಕ್ಕ ವರ್ತಕರೂ ಇದ್ದಾರೆ. ಅಂಥವರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡು ಆಹಾರ ಪರಿಸ್ಥಿತಿಯನ್ನು ಸರಿಪಡಿಸಬೇಕು. ಮತ್ತು ಪೇಟೆಯಲ್ಲಿ ಎಣ್ಣೆ, ಡಾಲ್ಡ, ಮೆಣಸಿನಕಾಯಿ, ಬೇಳೆಗಳು ಮತ್ತು ಕೆಲವು ವಿಧವಾದ ಟೈರು, ಟ್ಯೂಬುಗಳು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಾ ಇವೆ. ಕೆಲವು ವರ್ತಕರು ಹೆಚ್ಚು ಲಾಭಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಈ ಸಾಮಾನುಗಳಿಗೆ ಕೃತಕವಾಗಿ ಬೆಲೆ ಏರಿಸುವುದಕ್ಕೆ ಅವಕಾಶ ಕೊಡದಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಈಗಿನ ಆಹಾರ ಮಂತ್ರಿಗಳು ಅಧಿಕಾರ ವಹಿಸಿಕೊಂಡಮೇಲೆ ಅವರ ಅದೃಷ್ಟವೋ ಏನೊ ಅವರ ದಕ್ಷತೆಯಿಂದ ಅಂತ ಒಪ್ಪಿಕೊಳ್ಳದಿದ್ದರೂ ಕೂಡ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿದೆ. ಉತ್ತಮ ಸ್ಥಿತಿಯಲ್ಲಿರುವಾಗಲೇ ಇದನ್ನು ಇನ್ನೂ ಸರಿಪಡಿಸುವುದಕ್ಕೆ ಅವಕಾಶವಿದೆ ಎಂಬುದನ್ನೂ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಸಹಕಾರ ಸಂಸ್ಥೆ ಮತ್ತು ಸಂಘಗಳ ವಿಚಾರ ಹೇಳಬೇಕಾದರೆ ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ಮತ್ತು ಜನಗಳ ಸುಖದ ಬಗ್ಗೆ ಯಾವುದಾದರೂ ಒಂದು ಆಶಾಕಿರಣ ಇದ್ದರೆ ಅದು ಈ ಸಹಕಾರ ಸಂಘದಿಂದ. ಈಗೇನಾಗಿದೆ ಎಂದರೆ ಸಹಕಾರ ಸಂಘಗಳಲ್ಲಿ ಬೇಕಾದ ಹಾಗೆ ದುಡ್ಡು ಖರ್ಚಾದರೂ ಕೂಡ ಜನಗಳಿಗೆ ಆದರಿಂದ ತಕ್ಕ ಪ್ರತಿಫಲದೊರೆಯದೇ ಸಹಕಾರ ಸಂಘಗಳ ಅಸಹಕಾರದಿಂದ ದೇಶಕ್ಕೆ ತೊಂದರೆಯಾಗುತ್ತಾ ಇದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದಕ್ಕೆ ಕಾರಣ ಇಷ್ಟೆ, ಸಹಕಾರ ತತ್ವದ ಪ್ರಕಾರ ಸರ್ಕಾರದ ಹಿಡಿತ ಸಹಕಾರ ಸಂಘಗಳ ಮೇಲೆ ಎಷ್ಟು ಕಡಿಮೆಯಾಗಿ ಇರುತ್ತದೆಯೋ ಅಷ್ಟೂ ಚೆನ್ನಾಗಿ ಬೆಳೆಯುತ್ತವೆ. ಬೆಳೆಯದೇ ಇರುವುದಕ್ಕೆ ಈ ಸಹಕಾರ ಸಂಘಗಳನ್ನು ಸರ್ಕಾರದ ಒಂದು ಇಲಾಖೆ ಇದ್ದಹಾಗೆ ಮಾಡಿಕೊಂಡು ಸಾವಿರಾರು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ಅಲ್ಲಿ ಹಾಕಿಕೊಂಡು ಅವುಗಳ ಮೇಲ್ವಿಚಾರಣೆ ನಡೆಸುತ್ತಾ ಇರುವುದು ಮೊದಲನೆಯ ಕಾರಣ. ಸಹಕಾರ ಸಂಘಗಳನ್ನು ರಾಜಕೀಯಕ್ಕೆ ಉಪಯೋಗಿಸಿಕೊಂಡು ಜನಗಳ ಸೌಕರ್ಯವನ್ನು ರಾಜಕೀಯ ಬೆಳವಣಿಗೆಯಾಗುವುದಕ್ಕೆ ಉಪಯೋಗ ಮಾಡಿಕೊಂಡಿರುವುದು ಎರಡನೆಯ ಕಾರಣ. ಸಹಕಾರ ಸಂಘಗಳಲ್ಲಿ ಕೆಲವು ಜನ ಪ್ರೊಫೆಷನಲ್ ಕೋ ಆಪರೇಟರ್ಸ್ ಅಂತ ಸೇರಿಕೊಂಡಿದ್ದಾರೆ. ಅವರು ಸೊಸೈಟಿ ಹುಟ್ಟಿದಾಗಿನಿಂದ ಅದನ್ನು ಮುಳುಗಿಸುವ ತನಕ ತಮ್ಮ ಅಧೀನದಲ್ಲಿಟ್ಟುಕೊಂಡು ಇದನ್ನೇ ತಮ್ಮ ಪ್ರೊಫೆಷನ್ನಾಗಿ ಇಟ್ಟುಕೊಂಡಿದ್ದಾರೆ. ಇಂತಹ ಮಹನೀಯರು ಅನೇಕರು ಇದ್ದಾರೆ.

ಈ ಮಹನೀಯರ ಹಿಡಿತದಿಂದ ತಪ್ಪಿಸುವುದಕ್ಕಾಗದೆ ಅವರ ಬಲೆಗೆ ಸರಕಾರ ಬಿದ್ದಿರುವುದು ಬಹಳ ಶೋಚನೀಯವಾದ ವಿಚಾರ. ಈದಾಹರಣೆಗೆ ಕೆಲವು ಮುಖ್ಯವಾದ ಸೊಸೈಟಿಗಳನ್ನು ತೆಗೆದುಕೊಂಡರೆ ಎಷ್ಟು ವರ್ಷವಾದರೂ ಹಿಂದಿನವರೇ ಡೈರೆಕ್ಟರುಗಳಾಗಿ, ಅಧ್ಯಕ್ಷರಾಗಿ ಇರುವುದಕ್ಕೆ ಅವಕಾಶವಿರುವುದರಿಂದ ಅವರು ಸೊಸೈಟಿಯನ್ನು ಮುಳುಗಿಸುವುದಕ್ಕೆ ಎಷ್ಟು ಪ್ರಯತ್ನಬೇಕೋ ಅಷ್ಟನ್ನು ಮಾಡುತ್ತಿದ್ದಾರೆ. ಇದರ ಜೊತೆಗೆ ಸರಕಾರದವರು ಕಾಯಿದೆ ತಿದ್ದುಪಡಿ ಮಾಡಿದಾಗ ಒಂದು ಲೋಪ ಮಾಡಿರಬಹುದು. ಮೊದಲು ಡೈರೆಕ್ಟರುಗಳನ್ನು ವರ್ಷಕ್ಕೆ ಒಂದು ಸಲವಾದರೂ ಬದಲಾಯಿಸುತ್ತಿದ್ದರು. ಈಗ ಎಷ್ಟು ವರ್ಷವಾದರೂ ಅವರೇ ಇರಬಹುದು. ಅವರ ಬದಲಾವಣೆಯಾದರೆ ಆಗ ಸೊಸೈಟಿಯ ಆತಳಿತದಲ್ಲಿ ಸ್ವಲ್ಪ ಬದಲಾವಣೆಯಾಗುವುದು. ಒಬ್ಬ ಡೈರೆಕ್ಟರು ಇಷ್ಟು ವರ್ಷಗಳಿಗಿಂತ ಹೆಚ್ಚು ಕಾಲ ಇರಬಾರದು. ಹೊಸಬರು ಬರುವುದಕ್ಕೆ ಅವಕಾಶ ಮಾಡಬೇಕು ಎಂದು ಹಿಂದಿದ್ದ ಅವಕಾಶವನ್ನು ಬದಲಾಯಿಸಿರುವುದು ಸರಕಾರ ಚಳವಳಿಗೇ ತೊಂದರೆಯಾಗಿದೆ. ದೇಶಾಭ್ಯುದಯಕ್ಕೆ ಇದ್ದ ಮುಖ್ಯವಾದ ಹೆದ್ದಾರಿ ಸಹಕಾರ ಚಳವಳಿ. ಇಂಗ್ಲೆಂಡಿನಲ್ಲಿ ಮೊದಲು ಸಹಕಾರ ಸಂಸ್ಥೆ ಹುಟ್ಟಿತು. ಜರ್ಮನಿಯಲ್ಲಿ ಸಾಲ ಕೊಡುವುದಕ್ಕೆ ಸೊಸೈಟಿ ಶುರುವಾಗಿ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು. ಜಪಾನ್ ಮತ್ತು ಡೆನ್ಮಾರ್ಕ್‌ಗಳಲ್ಲಿ ಭಾರಿ ಸೊಸೈಟಿಗಳು ಪ್ರಾರಂಭವಾದುವು. ಅವುಗಳಿಂದ ಎಲ್ಲಾ ದೇಶಗಳಲ್ಲೂ ಸುಖಸೌಕರ್ಯಗಳು ಹೆಚ್ಚಿದರೆ ಇಂಡಿಯಾ ದೇಶದಲ್ಲಿ ಸಹಕಾರ ಸಂಘಗಳು ಹೇಗೆ ನಡೆಯುತ್ತಿವೆಯೆಂದರೆ ಅವುಗಳಿಂದ ಪ್ರಗತಿಗೆ ಬದಲಾಗಿ ಹಾನಿಯಾಗುತ್ತಿದೆ. ಇದಕ್ಕೆ ಈ ಕಾಶಪಿರುವುದು ಶೋಚನೀಯ. ನಿಜವಾಗಿಯೂ ದೇಶೋದ್ಧಾರವಾಗಬೇಕಾದರೆ ಸಹಕಾರ

(ಶ್ರೀ ಟಿ, ಆರ್, ತಾಮಣ್ಣ)

ಚಳವಳಿಯಿಂದಲೇ ಆಗಬೇಕು. ಬೇರೆ ರೀತಿಯಿಂದ ಆಗುವುದಿಲ್ಲ. ಆದರೆ ಅದನ್ನು ರಾಜಕೀಯ ಒತ್ತಡಕ್ಕೆ, ಸರಕಾರದ ಹಿಡಿತಕ್ಕೆ ಮತ್ತು ಸ್ವಾರ್ಥಿಗಳ ಪ್ರಭಾವಕ್ಕೆ ಸಿಕ್ಕಿಸಿ ಸಹಕಾರ ಸಂಘಗಳನ್ನು ಹಾಳು ಮಾಡುವುದು ಶೋಚನೀಯವಾಗಿದೆ. ಮಲ್ಟಿ ಪರ್ಪಸ್ ಸೊಸೈಟಿ ಎಂದು ಮೊದಲು ಮಾಡಿದರು, ಅದು ಸರಿಯಾಗಿ ನಡೆಯಲಿಲ್ಲ. ಈಗ ಜನತಾ ಬಜಾರುಗಳನ್ನು ತೆರೆದಿದ್ದಾರೆ. ಆದರೆ ಅಲ್ಲಿರುವವರು ಬರುವ ಕಮಿಷನ್ ಆಸೆಗಾಗಿ ಕೆಲಸಕ್ಕೆ ಬಾರದ ಸಾಮಾನುಗಳು, ಬಟ್ಟೆಬರೆ ಬೇಕಾದಷ್ಟು ತಂದು ಹಾಕಿ ಅವು ಮಾರಾಟವಾಗದೆ ಉಳಿಯುತ್ತಿವೆ, ಹೀಗಾಗಿ ಕೆಲವು ಸೊಸೈಟಿಗಳು ಮುಚ್ಚಲ್ಪಟ್ಟವು. ಬೆಂಗಳೂರಿನಲ್ಲಿ ಬೆಂಗಳೂರು ಸಿಟಿ ಕೋ ಆಪರೇಟಿವ್ ಸೊಸೈಟಿ ಪ್ರಾರಂಭವಾಗಿ ೬೫ ವರ್ಷವಾಯ್ತು. ಈಗ ಅದನ್ನು ಮುಚ್ಚುವ ಪರಿಸ್ಥಿತಿ ಇದೆ. ಅದಕ್ಕೆ ಒಬ್ಬ ಅಡ್ಮಿನಿ ಸ್ಟ್ರೇಟರನ್ನು ನೇಮಕ ಮಾಡಬೇಕೆಂದು ಜನರಲ್ ಬಾಡಿ ಮೀಟಿಂಗಿನಲ್ಲಿ ನಿರ್ಣಯ ಮಾಡಿ ವರ್ಷಗಟ್ಟಲೆಯಾದರೂ ಅವರನ್ನು ನೇಮಕ ಮಾಡಿಲ್ಲ. ಹಾಗೆ ಮಾಡಿದ್ದರೆ ಮಿತಿ ಮೀರಿದ ಅಧಿಕಾರ ತಪ್ಪಿಸುವುದಕ್ಕಾಗುವುದಿಲ್ಲ. ಬೆಂಗಳೂರು ಸಿಟಿ ಕೋ ಆಪರೇಟಿವ್ ಸೊಸೈಟಿ ಮೊದಲು ಶುರುವಾಗಿರುವುದು. ಅದು ಮುಳುಗುವ ಪರಿಸ್ಥಿತಿಯಿರುವಾಗ ಅದಕ್ಕೆ ಅವಕಾಶ ಕೊಡದಂತೆ ರಾಜಕೀಯ ಕೈವಾಡದಿಂದ ತಪ್ಪಿಸುವುದಕ್ಕೆ ಸರಕಾರ ತೀವ್ರ ಗಮನ ಕೊಟ್ಟು ತಕ್ಕ ಕ್ರಮ ಕೈಕೊಳ್ಳಬೇಕು.

ಸಾಲ ಕೊಡುವಾಗ ಪ್ರಭಾವ ಬೀರಿ ಆ ಮೂಲಕ ಸಾಲ ಪಡೆಯುತ್ತಿರುವುದರಿಂದ ಬ್ಯಾಡ್ ಡೆಟ್ಸ್ ಹೆಚ್ಚಾಗಿ ಅನೇಕ ಕ್ರೆಡಿಟ್ ಸೊಸೈಟಿಗಳು ಹಾಳಾಗಿವೆ. ಇನ್ನು ಕೆಲವು ಮುಳುಗುವುದರಲ್ಲಿವೆ. ಆದುದರಿಂದ ಅದಷ್ಟು ಸರಕಾರ ಎಚ್ಚರಿಕೆಯಿಂದ ಇರಬೇಕೇ ಹೊರತು ನೇರವಾಗಿ ತಾನೇ ಆಡಳಿತ ವಹಿಸಿಕೊಂಡು ನಡೆಸುವುದು ಒಳ್ಳೆಯದಲ್ಲ.

ಪಂಚಾಯತ್ ರಾಜ್ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟಿನಿಂದ ದೇಶಕ್ಕೆ ಯಾವ ವಿಧದಲ್ಲೂ ಅನುಕೂಲವಾಗಿಲ್ಲ. ಆ ಇಲಾಖೆಯನ್ನು ಎಷ್ಟು ಬೇಗ ಮುಚ್ಚಿದರೆ ಅಷ್ಟು ಒಳ್ಳೆಯದು, ಅದರಿಂದ ದೇಶದ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ, ಜನರ ದೃಷ್ಟಿಯಿಂದ ಒಳ್ಳೆಯದಾಗುವುದು. ಇದಕ್ಕೆ ಖರ್ಚು ಮಾಡುವುದನ್ನು ಬೇರೆ ಬಾಬುಗಳಿಗೆ ಖರ್ಚು ಮಾಡುವುದು ಒಳ್ಳೆಯದು. ತಕ್ಷಣ ಈ ಎರಡು ಇಲಾಖೆಗಳನ್ನು ಮುಚ್ಚಬೇಕು.

ಬೆಂಗಳೂರಿನಲ್ಲಿ ಸ್ಲಂಗಳ ಸಂಖ್ಯೆ ಹೆಚ್ಚುತ್ತಿದೆ. ಅವುಗಳನ್ನು ಕ್ಲಿಯರ್ ಮಾಡುತ್ತಿಲ್ಲ. ಈಗ ೧೧೦ ಸ್ಲಂಗಳಿವೆ. ಮೂರು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ನಾಲ್ಕೈದು ಸ್ಲಂಗಳು ಮಾತ್ರ ಹೋಗಿವೆ. ವರದಿಗಳೇನು ಈ ಬಗ್ಗೆ ಇವೆ, ಅವು ಬರೀ ಪುರಾಣ ಹೇಳುವಂತಿವೆ, ವಾಸ್ತವಾಂಶದಿಂದ ಕೂಡಿಲ್ಲ, ಇದನ್ನು ಪಾಟೀಲರು ಹೇಳಿದ್ದಾರೆ. ಸರಕಾರದವರು ಇದರಲ್ಲಿ ರಾಜಕೀಯ ಮಾಡದೆ ಜನರ ಹಿತವಾಗುವಂತೆ ಕೋ ಆಪರೇಟಿವ್ ಇಲಾಖೆ ಉಳಿಸುವರು ಮತ್ತು ಮುಂದಿನ ಬಜೆಟ್ ವೇಳೆಗಾದರೂ ಕಮ್ಯೂನಿಟಿ ಡೆವಲಪ್‌ಮೆಂಟ್, ಪಂಚಾಯತ್ ರಾಜ್, ಸೋಷಿಯಲ್ ವೆಲ್‌ಫೇರ್ ಬೋರ್ಡು ಮುಂತಾದವನ್ನು ಮುಚ್ಚುವ ಸಲಹೆ ಮಾಡುವರು ಎಂದು ನಂಬಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

SRI B. B. SAYANAK (Belgaum) :- Mr. Speaker Sir, I rise to oppose the demands tabled by the Hon. Minister for Co-operation. Sir, this Co-operative movement, according to me, is a selfish movement and these Co-operative Societies are the monopolies of Congressmen. When these Co-operatives were started, the Congress people took the advantage of the opportunity for starting Co-operative Societies for themselves and they are not allowing the other people to be the share-holders of any Co-operative Society. There is a Co-operative Society in Anagol village. The population of Anagol village is more than 10,000 and the shareholders of the Society are only 154 The condition to be a share-holder ofthat Society is that a person should purchase 20 shares of the Societv. only persons who purchase 20 shares and above, may be the share-holders of that Society. This is a condition aginst the constitution Why is the Government not insisting on the Society to allow any person who

purchases 5 Rupes share to be shareholder ? They are not doing that They are following a tradition as in the case of Anagol Society. I am insisting on the Government that they must compel the Societies to have share-holders of Rs. 5/- and Rs. 10/- But the Government is not doing so because the Society is in the hands of Congressmen.

Another important thing, I want to bring to the notice of the Hon. ble House, is that I have not been allowed to start another Society in Anagol village. I have requested the Goverument to permit me to start a Society. But the Government told me when there is already a Society, there is no need for another Society, and therefore, I should not start another Society. It is strange to hear that in Muchandi village in Belgaum Taluk, a Society was started by Marathi people, and, but another Society was allowed to be started by Kannada people. Why this partiality ? The Government should do justice irrespective of caste, religion and Party.

A huge loss has been incurred in the Whole-sale Co-operative Society in Belgaum. The loss for two years is about Rs. 1,20,000/-. The Chairman of that Whole-sale Co-operative Society is one M. L. C. The Credit Co-operative Society in Belgaum is also incurring loss I do not understand why the Government is not superseding all such Societies ?

In Belgaum there is one Marathi Co-operative Urban Co-operative Bank. The peculiarity of that Bank is that a man who is holding a 5 Rupee share is not entitled to ocontest the election for Directorship. Then who is to contest ? A man who has purchased shares worth of Rs. 300/- only is entitled to contest the election and this is against the constitution. This is against the principles of Co-operative Movement. Why you are allowing such discriminatory bye-laws ? Is it justice to allow a man who has purchased Rs. 300/- shares only to contest and not to allow a person who is having only one share worth Rs. 5/- Why you are partial ?

Sir, I have read the Audit reports of only 70 societies. There are so many societies which are not audited in accordance with the provisions of the Co-operative Societies Act, the accounts of Co — operative institutions are to be audited by the audit wing of the Registrar of Co-operative Societies every year. The accounts of 180 societies for 1966-67 and 1116 societies for 1967-68 remain unaudited as at the end of August 1969. May I know why the accounts of these societies are not audited ? The delay in completion of audit was attributed to nonavailability of the books of account, incomplete books and the segure of books by the Police in various cases. There are so many discripancies and there are many adverse remarks against the co-operative movement.

5 P. M.

Sir, in my constituency there are two milk societies, one in Santibasant village and one in Machi village. The Government is not granting loans to these societies because these are Maharashtrian societies. Why this partiality ? All the correspondence, notices and orders are issued to these societies in Kannada, but the people cannot understand Kannada. I think in border areas the fate of the Marati people is at stake and they are denied their right.

With these few words, I conclude

Mr. SPEAKER : —The Hon Minister of State for Food and Civil Supplies may commence his reply.

Sri H. SIDDVEERAPPA :—Sir, I rise to a point of order. How can the Minister reply when not even one Hon. Member has recognised his existence ?

Mr. SPEAKER:—I appreciate the humour of the Hon. Member. The Hon'ble Minister may begin his reply.

† ಶ್ರೀ ಬಿ. ವಿಟ್ಠಲದಾಸ ಶೆಟ್ಟಿ (ಆಹಾರ ಮತ್ತು ನಿತ್ಯೋಪಯೋಗಿ ಶಾಖೆಗಳ ರಾಜ್ಯ ಮಂತ್ರಿಗಳು) —: ಅಧ್ಯಕ್ಷರೇ, ಶ್ರೀಮಾನ್ ಸಿದ್ದವೀರಪ್ಪನವರು ನನ್ನ ಇಲಾಖೆಯ ಬಗ್ಗೆ ಹೇಳುವುದೇನೂ ಇಲ್ಲವೆಂದು ಹೇಳಿರುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಈ ವರ್ಷದ ಪರಿಸ್ಥಿತಿ ಬಹಳ ಚೆನ್ನಾಗಿರುವುದರಿಂದ ಆಹಾರ ಖಾತೆಯ ಬಗ್ಗೆ ಯಾರೂ ಟೀಕೆ ಟಿಪ್ಪಣಿಗಳನ್ನು ಮಾಡಲಿಲ್ಲ ಮಾನ್ಯ ಸಿದ್ದವೀರಪ್ಪನವರು ಹೇಳಿದ ಹಾಗೆ ಈ ಇಲಾಖೆಯ 'ಎಗ್ಸಿಸ್ಟೆನ್ಸ್ ಯಾರೂ ರೆಕಗ್ನೈಸ್ ಮಾಡಿಲ್ಲ' ಎನ್ನುವುದನ್ನು ನಾನು ಒಪ್ಪುವುದಿಲ್ಲ ಈ ಮನೆಯಲ್ಲಿರುವ ಎಲ್ಲ ಸದಸ್ಯರೂ ಯಾವ ರೀತಿಯಲ್ಲಿ ಕೂಡ ಉಗ್ರವಾದ ರೀತಿಯಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡಿಲ್ಲ ಎನ್ನುವುದನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸುತ್ತೇನೆ.

ಆಹಾರ ಪರಿಸ್ಥಿತಿ ಬಹಳ ಚೆನ್ನಾಗಿದೆ, ಆದರೆ ಅದು ಆಹಾರ ಇಲಾಖೆಯ ಮಂತ್ರಿಗಳ ದಕ್ಷತೆಯಿಂದ ಆಗಿಲ್ಲ ಎಂದು ಶ್ರೀ ಟಿ. ಆರ್. ಶಾಮಣ್ಣನವರು ಹೇಳಿದರು. ಅವರು ವಿರೋಧ ಪಕ್ಷದಲ್ಲಿರುವುದರಿಂದ ಆ ರೀತಿ ಹೇಳುತ್ತಾರೆ. ಅವರ ಮನಸ್ಸಿನಲ್ಲಿ ಒಪ್ಪಿಕೊಂಡು, ಎಷ್ಟೋ ಬಾರಿ ನನಗೆ ಹೇಳಿದ್ದಾರೆ, ನೀವು ಬಂದ ನಂತರ ಬಹಳ ಚೆನ್ನಾಗಿದೆ ಎಂದು ದೇವರ ಕೃಪೆಯಿಂದ, ಹಾಗೂ ರೈತ ಜನರ ಕೃಪೆಯಿಂದ ಈ ಹೊತ್ತು ಆಹಾರ ಇಲಾಖೆಯಲ್ಲಿ ಯಾವುದೋಂದು ರೀತಿಯ ತೊಂದರೆಯಾಗಿಲ್ಲ ಎಂದು ಹೇಳುವುದಕ್ಕೆ ನಾನು ಅತ್ಯಂತ ಸಂತೋಷ ಪಡುತ್ತೇನೆ.

ಶ್ರೀಮತಿ ಕೆ. ಎಚ್. ಪಾಟೀಲರು ಮಾತನಾಡುವಾಗ ಒಂದು ಮಾತು ಹೇಳಿದರು. ಮಾನ್ಯ ನಾಡಗೌಡರು ನನ್ನ ಮೇಲೆ ಕೈ ಇಟ್ಟಿದ್ದಾರೆ, ಅವರು ತೊಂದರೆ ಕೊಟ್ಟಿದ್ದಾರೆ ಎಂದು. ಮಾನ್ಯ ನಾಡಗೌಡರು ವಿಚಾರದಲ್ಲಿ ಅವರು ಹೇಳಿದ್ದು ಮತ್ತು ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಹೇಳಿದ ಅನೇಕ ವಿಚಾರಗಳಿಗೆ ನನ್ನ ಸ್ನೇಹಿತರಾದ ನಾಡಗೌಡರು ಉತ್ತರ ಕೊಡುತ್ತಾರೆಂದು ನಾನು ತಿಳಿಯುತ್ತೇನೆ. ಆದಕ್ಕೆ ಅವರಿಗೆ ಹೆಚ್ಚು ಅವಕಾಶ ಮಾಡಿ ಕೊಡುತ್ತೇನೆ. ನನ್ನ ವಿಚಾರವನ್ನು ಅವರು ಹೇಳಿದ್ದರಿಂದ ನಾನು ಒಂದು ಮಾತು ಹೇಳಬೇಕಾಗಿದೆ ಶ್ರೀ ಕೆ. ಎಚ್. ಪಾಟೀಲರು ಇರುವಂತ ಸೊಸೈಟಿ ಯಾವ ಕ್ಲುಪ್ತ ಸಮಯದಲ್ಲಿ, ಯಾವುದೊಂದು ಅರ್ಜಿ ಮಾಡಿಕೊಳ್ಳಬೇಕಾಗಿತ್ತೋ, ಡೆಪ್ಯುಟಿ ಕಮಿಷನರಿಗೆ ತಿಳಿಸಬೇಕಾಗಿತ್ತೋ ಆ ಕ್ಲುಪ್ತ ಸಮಯಕ್ಕೆ ತಿಳಿಸಲಿಲ್ಲ. ಅದನ್ನು ನಾನು ಅವರಿಗೆ ಬರಹ ಮೂಲಕ ತಿಳಿಸಿದ್ದೇನೆ. ಶ್ರೀ ನಾಡಗೌಡರಾಗಲೀ, ಸಹಕಾರ ಇಲಾಖೆಯಿಂದಾಗಲೀ, ಶ್ರೀ ಕೆ. ಎಚ್. ಪಾಟೀಲರ ಸೊಸೈಟಿಗೆ ಕೊಡಬೇಡಿ ಎಂದು ಆಹಾರ ಖಾತೆಗೆ ಯಾರೂ ಹೇಳಿಲ್ಲ ಎಂದು ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ದೊಡ್ಡನ ಗೌಡರು ಕೋ ಆಪರೇಟಿವ್ ಮಿಲ್ಲಿನಲ್ಲಿರುವಂತಹ ಬತ್ತ ಅಥವಾ ಅಕ್ಕಿಯನ್ನು ಕೂಡಲೆ ಸರ್ಕಾರ ವಿತರಣೆ ಮಾಡುವಂತೆ ಹುಕುಂ ಆಗಾಗ ಜಾರಿ ಮಾಡದ್ದರಿಂದ ತೊಂದರೆಯಾಗುತ್ತದೆ. ನಷ್ಟವಾಗುತ್ತದೆ ಎಂದು ಹೇಳಿದರು ಅಂಥದ್ದು ಏನಾದರೂ ಇದ್ದರೆ, ಕೆಲವು ಸಂದರ್ಭಗಳಲ್ಲಿ ಅನಿರೀಕ್ಷಿತವಾದ ಸನ್ನಿವೇಶಗಳಿಂದ ತೊಂದರೆ ಇದ್ದರೆ, ಅದನ್ನು ಸರ್ಕಾರಕ್ಕೆ ತಿಳಿಸಿದರೆ ಅದರ ಬಗ್ಗೆ ಪರಿಶೀಲಿಸಿ, ಸ್ಟೆಬಿಲೈಜೇಷ್ ಫಂಡ್ ಏಂದು ಏನಿದೆ ಅದರಿಂದ ಆಹಾರ ವ್ಯವಹಾರದಲ್ಲಿ ಆಗಿರುವಂಥ ನಷ್ಟವನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ತಯ್ಯಾರಿರುತ್ತದೆ. ಅಂಥ ಸ್ಪೆಸಿಫಿಕ್ಸ್ ಇನೆಸ್ಟೆನ್ಸಸ್ ಇದ್ದರೆ, ಸನ್ಮಾನ್ಯ ಸದಸ್ಯರು ಅದನ್ನು ಸರ್ಕಾರದ ಅವಗಾಹನೆಗೆ ತಂದರೆ ಕೂಡಲೇ ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕೆ ಇಚ್ಚಿಸುತ್ತೇನೆ.

ಶ್ರೀ ಜಿ. ಚಂದ್ರಕಾಂತ್ ಅವರು ಸಪೋರ್ಟ್ ಪ್ರೈಸ್ ಡಿಕ್ಲೇರ್ ಮಾಡಿದ್ದರೂ ಅದನ್ನು ಪಡೆದು ಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಬದರೆ ಜಿಲ್ಲೆಗೆ ನಾನು ಹೋಗಿದ್ದ ಸಂದರ್ಭದಲ್ಲಿ ಒಂದು ಸಭೆ ಕೂಡ ನಡೆಸಿದೆ. ಆಗ ಮಾನ್ಯ ಸದಸ್ಯರಾದ ಚಂದ್ರಕಾಂತ್ ಅವರೂ ಇದ್ದರು. ಆ ಸಂದರ್ಭದಲ್ಲಿ ಅವರು ನನ್ನ ಅವಗಾಹನೆಗೆ ಇದನ್ನು ತರಲಿಲ್ಲ. ಬಹುಶಃ ಅದರ ನಂತರ ಈ ಘಟನೆ ನಡೆದಿರಬಹುದೆಂದು ತಿಳಿಯುತ್ತೇನೆ. ಇಂಥ ಸ್ಪೆಸಿಫಿಕ್ ಇನ್‌ಸ್ಟೆನ್ಸಸ್ ಕಂಡು ಬಂದರೆ ಅದನ್ನು ಕೂಡಲೇ ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಚಿಸುತ್ತೇನೆ.

ಸಪೋರ್ಟ್ ಪ್ರೈಸ್ ಮಾತ್ರವಲ್ಲ, ಪ್ರೊಕ್ಯೂರ್‌ಮೆಂಟಿಗೆ ಎಷ್ಟು ಬೆಲೆ ಕೊಡುತ್ತೇವೆ, ಆ ಪ್ರೊಕ್ಯೂರ್‌ಮೆಂಟ್ ಪ್ರೈಸ್‌ನಲ್ಲಿ ಕೂಡ ಬತ್ತವನ್ನು, ಅಕ್ಕಿಯನ್ನು, ಜೋಳವನ್ನು, ಪಡೆದುಕೊಳ್ಳುವುದಕ್ಕೆ ತಯಾರಿದ್ದೇವೆ ಎಂದು ಅನೇಕವೇಳೆ ಪ್ರಕಟಣೆ ಮಾಡಿದ್ದೇನೆ. ಹೋದ ಹೋದಲ್ಲಿ ಸಭೆಗಳ ಆ ಪ್ರಕಟಣೆ ಮಾಡಿದ್ದೇನೆ. ಅಲ್ಲಲ್ಲಿ ಯಾವ ಸಂದರ್ಭ ಸಿಕ್ಕಿದರೂ ಅದನ್ನು ರೈತರಿಗೆ ಹಾಗೂ ಇಲಾಖೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಪ್ರಕಟಿಸುತ್ತೇವೆಂದು ಹೇಳುವುದಕ್ಕೆ ಇಚ್ಚಿಸುತ್ತೇನೆ.

ಪ್ರೊಕ್ಯೂರ್‌ಮೆಂಟ್ ವಿಚಾರದಲ್ಲಿ ಕಳೆದ ವರ್ಷ ಹೇಳಿದ ಹಾಗೆ ಯಾರೂ ಉಗ್ರವಾಗಿ ಟೀಕೆ ಮಾಡಲಿಲ್ಲ ಪ್ರೊಕ್ಯೂರ್‌ಮೆಂಟ್ ಟೇಡ, ಪ್ರೊಕ್ಯೂರ್ ಮಾಡುವುದರ ಆಗತ್ಯವಿಲ್ಲ ಎನ್ನುವ ವಿಷಯವನ್ನು ಯಾರೂ ಹೇಳಿದ ಹಾಗೆ ಕಾಣುವುದಿಲ್ಲ, ಈ ವರ್ಷ ನಾವು ಸಂಗ್ರಹಿಸಿದ್ದಕ್ಕಿಂತ ಹೆಚ್ಚು ಪ್ರೊಕ್ಯೂರ್‌ಮೆಂಟ್ ಜನರೇ ತಂದುಕೊಟ್ಟಿದ್ದಾರೆ. ಓಪನ್ ಮಾರ್ಕೇಟಿನಲ್ಲಿರುವಂತ ಬೆಲೆಗೆ ಮತ್ತು ಪ್ರೊಕ್ಯೂರ್‌ಮೆಂಟ್ ಬೆಲೆಗೆ ಏನೂ ವ್ಯತ್ಯಾಸವಿಲ್ಲ. ಆದರೂ ಸರ್ಕಾರಕ್ಕೆ ಆಗತ್ಯವಿರಲಿ, ಇಲ್ಲದೆ ಇರಲಿ, ಪ್ರೊಕ್ಯೂರ್‌ಮೆಂಟ್ ಬೆಲೆಗಿಂತ ಕಡಿಮೆ ಇದ್ದರೆ, ರೈತರು ಎಷ್ಟು ದವಸಧಾನ್ಯಗಳನ್ನು ತಂದು ಕೊಟ್ಟರೂ ಸರ್ಕಾರ ಪಡೆದು ಕೊಳ್ಳುವುದಕ್ಕೆ ಸಿದ್ಧವಾಗಿದೆ ಎಂದು ಪ್ರಕಟಣೆ ಮಾಡಿದ್ದೇವೆ. ಅದರಂತೆ ನಡೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕೆ ಇಚ್ಚಿಸುತ್ತೇನೆ.

ಇನ್ನು ಪ್ರೊಕ್ಯೂರ್‌ಮೆಂಟ್ ಪದ್ಧತಿ ತೆಗೆಯಬೇಕು, ಜೋನಲ್ ಸಿಸ್ಟಂ ಇರಬಾರದು ಎಂದು ಅನೇಕ ಸಲ ಸದಸ್ಯರು ಹೇಳಿದ್ದಾರೆ. ಈ ವಿಚಾರದಲ್ಲಿ ಇತ್ತೀಚೆಗೆ ಎರಡು ಮೂರು ದಿವಸಗಳ ಹಿಂದೆ ಸರಕಾರ ಒಂದು ನಿರ್ಣಯ ಕೈಕೊಂಡಿದೆ. ಜೋನಲ್ ಸಿಸ್ಟಂ ಇರಬಾರದು, ದಕ್ಷಿಣ ಭಾರತದಲ್ಲಿಯ ನಾಲ್ಕೂ ರಾಜ್ಯಗಳೂ ಒಟ್ಟು ಗೂಡಿ ಒಂದು ಪದ್ಧತಿ ಇರಬೇಕು ಎಂದು ನಿರ್ಣಯಮಾಡಿದೆ. ರೈತ ಒಳ್ಳೆಯ ರೀತಿಯಿಂದ ಬೆಳೆಯಬೇಕು, ಕೃಷಿ ಮಾಡಬೇಕು ಎನ್ನುವ ದೃಷ್ಟಿಯಿಂದ ಜೋನಲ್ ಪದ್ಧತಿ ಕತ್ತು ಹಾಕಬೇಕು ಎನ್ನುವ ಧೋರಣೆ ಸರಕಾರ ತೆಗೆದುಕೊಂಡಿದೆ. ಮಂತ್ರಿ ಮಂಡಳವು ಎರಡು ಮೂರು ದಿವಸಗಳ ಹಿಂದೆ ಈ ನಿರ್ಣಯ ಕೈಕೊಂಡಿದೆ. ನಾಡಿದ್ದು ಮುಖ್ಯ ಮಂತ್ರಿಗಳ ಕಾನ್‌ಫರೆನ್ಸ್ ದಿಲ್ಲಿಯಲ್ಲಿ ಆಗುತ್ತದೆ. ನಾನೂ ಹೋಗುತ್ತೇನೆ. ಮೈಸೂರು ಸರಕಾರದ ಈ ಧೋರಣೆ ಮುಖ್ಯ ಮಂತ್ರಿಗಳ ಸಭೆಯಲ್ಲಿ ಮಂಡೆ ಇಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಕೇಂದ್ರ ಸರಕಾರ ಇದನ್ನು ಒಪ್ಪಿದರೆ ಒಳ್ಳೆಯದಾಗುತ್ತದೆ. ಈ ಬಗ್ಗೆ ಮೈಸೂರು ಸರಕಾರದ ನಿಲುಮೆ ಸ್ಪಷ್ಟವಾಗಿದೆ. ಮೈಸೂರು ಕೇರಳ ಆಂಧ್ರ ಮತ್ತು ತಮಿಳುನಾಡು ಈ ನಾಲ್ಕೂ ರಾಜ್ಯಗಳ ಪ್ರದೇಶಕ್ಕೆ ಒಂದು ಜೋನು ಮಾಡಬೇಕು ಎನ್ನುವುದು ನಮ್ಮ ನಿಲುವು ಆಗಿದೆ. ಅಂದರೆ ರೈತರಿಗೆ ಅನುಕೂಲವಾಗುತ್ತದೆ. ಅನೇಕ ಸಂದರ್ಭದಲ್ಲಿ ಬಾರ್ಡರ್ ಡಿಸ್ಟ್ರಿಕ್ಟ್‌ನಲ್ಲಿರುವ ರೈತರಿಗೆ ತೊಂದರೆ ಯಾಗುತ್ತದೆ. ಹೆಚ್ಚು ಬೆಲೆ ಸಿಕ್ಕಬೇಕು ಎಂದು ರೈತ ಅಪೇಕ್ಷಿಸುತ್ತಾನೆ ಆದರೆ ಅಷ್ಟು ಬೆಲೆ ಸಿಕ್ಕುವುದಿಲ್ಲ. ಆದುದರಿಂದ ಈ ಹೊಸ ಪದ್ಧತಿಯಿಂದ ಇದು ಪ್ರಯೋಜನಾಧಿಕಾರಿ ಯಾಗುತ್ತದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ :— ಚೆಕ್ ಪೋಸ್ಟ್ ತೆಗೆದುಹಾಕಿದರೆ ಉಪಕಾರವಾಗುತ್ತದೆ.

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ :—ಒಂದೇ ಜೋನು ಮಾಡಿದರೆ ಚೆಕ್ ಪೋಸ್ಟ್ ಹೋಗುತ್ತವೆ ಮತ್ತು ಪೋಲೀಸರ ಉಪಟಳ, ಕಿರುಕಳ ಹಾಗೂ ತೊಂದರೆಯಾಗುತ್ತಾ ಇರುವುದು ಹೋಗುತ್ತದೆ. ನಮ್ಮ ರಾಜ್ಯ ಸರಕಾರದ ನಿಲುವು ಏನು ಎನ್ನುವುದನ್ನು ಹೇಳಿದ್ದೇನೆ. ಪ್ರೊಕ್ಯುರ್‌ಮೆಂಟ್ ವ್ಯವಸ್ಥೆಯನ್ನು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಇವರಿಗೆ ಏತಕ್ಕೆ ಕೊಡಬಾರದು ಎನ್ನುವ ಒಂದು ಸಲಹೆ ಇದೆ. ಆದರೆ ಇದುವರೆಗೆ ಕೋಆಪರೇಟಿವ್ ಮೂವ್‌ಮೆಂಟಿಗೆ ಹೆಚ್ಚು ಮಹತ್ವ ಕೊಡುತ್ತಾ ಬಂದಿದ್ದೇವೆ ನಮ್ಮ ರಾಜ್ಯದಲ್ಲಿ ಈ ಕೆಲಸ ಬಹಳ ಚೆನ್ನಾಗಿ ಮಾಡಿದೆ ಎಂದು ಹೇಳಲು ನಾನು ಸಂತೋಷಪಡುತ್ತೇನೆ. ಕೋಆಪರೇಟಿವ್ ಮೂವ್‌ಮೆಂಟಿನಲ್ಲಿ ತೊಂದರೆ ಇರಬಹುದು. ಯಾವುದೇ ಇನ್‌ಸ್ಟಿಟ್ಯೂಷನ್ನಿನಲ್ಲಾಗಲಿ ತೊಂದರೆ ಇರುವುದು ಸರ್ವೇ ಸಾಮಾನ್ಯವಾದುದು. ಶ್ರೀ ಶಾಮಣ್ಣನವರು ಇನ್ನೊಂದು ಮಾತು ಹೇಳಿದರು. ಸಹಕಾರ ಸಂಘಗಳಲ್ಲಿ ಅನ್ಯಾಯ ಭ್ರಷ್ಟಾಚಾರ ನಡೆಯುತ್ತಿರುವುದರಿಂದ ಜನರಿಗೆ ತೊಂದರೆಯಾಗಿದೆ, ಅಲ್ಲದೆ ವ್ಯಾಪಾರಸ್ಥರಿಂದ ತೊಂದರೆಯಾಗುತ್ತದೆ, ಆದ್ದರಿಂದ ಕೆಲವು ಪದಾರ್ಥಗಳನ್ನು ಕಂಟ್ರೋಲ್ ಮಾಡಬೇಕು ಎಂದು ತಿಳಿಸಿದರು. ವನಸ್ಪತಿ ಸಿಕ್ಕುವುದಿಲ್ಲ ಬೇಬಿ ಫುಡ್ ಸಿಕ್ಕುವುದಿಲ್ಲ ಆದುದರಿಂದ ಸರಿಯಾಗಿ ಕಂಟ್ರೋಲ್ ಮಾಡಬೇಕು ಎಂದು ಹೇಳಿದ್ದಾರೆ. ಇದನ್ನು ಏತಕ್ಕೆ ಹೇಳುತ್ತೇನೆಂದರೆ ಇವು ಸರಕಾರಕ್ಕೆ ಸಂಬಂಧಪಟ್ಟ ಸಂಸ್ಥೆಗಳಾಗಿರುವುದರಿಂದ ಸರಕಾರಕ್ಕೆ ಹತೋಟಿ ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ವ್ಯಾಪಾರಸ್ಥರು ಹಾಗೆ ಕೋಆಪರೇಟಿವ್ ಸೊಸೈಟಿಯಲ್ಲಿ ಮಾಡಲಿಕ್ಕೆ ಆಗುವುದಿಲ್ಲ. ಯಾಕೆಂದರೆ ಕೋರ್ಟ್ ಇದೆ, ಕಾನೂನು ಇದೆ, ಹಾಗು ಕೋಆಪರೇಟಿವ್ ಸಮಾಜವಾದ ನಾವು ಈ ದೇಶದಲ್ಲಿ ಒಪ್ಪಿದ್ದೇವೆ. ಎರಡು ಮೂರು ವರ್ಷಗಳಿಂದ ಕೋಆಪರೇಟಿವ್ ಸೊಸೈಟಿಗಳು ಚೆನ್ನಾಗಿ ಕೆಲಸ ನಿರ್ವಹಿಸಿರುತ್ತವೆ. ಆದುದರಿಂದ ಫುಡ್ ಕಾರ್ಪೊರೇಷನ್ನಿಗೆ ವಹಿಸಿಕೊಡಬೇಕು ಎಂದು ಹೇಳುವ ಸಲಹೆ ಪರಿಶೀಲನೆ ಮಾಡಬೇಕಾಗಿದೆ. ಪ್ರಕೃತದಲ್ಲಿ ಆಹಾರ ಧಾನ್ಯಗಳ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿ ಬಹಳ ಒಳ್ಳೆಯದಾಗಿದೆ. ಈಗ ಕಾಚಿತ್ ಮಾರ್ಜಿನಲ್ ಡೆಫಿಸಿಟ್ ಇದ್ದರೂ ಬರುವ ವರ್ಷ ಅದು ಕೂಡ ಇರುವುದಿಲ್ಲ ಮತ್ತು ಪ್ರೊಕ್ಯುರ್‌ವೆಂಟಿನ ಅವಶ್ಯಕತೆ ಇರುವುದಿಲ್ಲ. ಆಗ್ಗೆ ಇದನ್ನು ಪುನರ್ ವಿಮರ್ಶಿಸ ಬೇಕಾದ ಅವಶ್ಯಕತೆ ಇರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :— ಪ್ರತಿ ವರ್ಷ ಇದನ್ನೇ ಹೇಳುತ್ತೀರಿ. ೨೨ ವರ್ಷ ಇದನ್ನೇ ಹೇಳಿ ಹೇಳಿ ನಮ್ಮನ್ನು ಮುಗಿಸಿ ಬಿಟ್ಟಿದ್ದೀರಿ.

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ :—ಅದು ಹಾಗಲ್ಲ. ಕೆ.ಜಿ.ಎಫ್,ನಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಬೆಂಗಳೂರಿನಲ್ಲಿಯ ಬಡ ಜನರಿಗೆ ಇದರಿಂದ ಅನುಕೂಲವಾಗಿದೆ, ಪ್ರಯೋಜನ ಪಡೆದಿದ್ದಾರೆ. ಬೆಂಗಳೂರು ನಗರದಲ್ಲಿ ಒಂದೇ ರೀತಿಯ ಅಕ್ಕಿ ಸಪ್ಲೈ ಮಾಡಲಾಗುತ್ತಿದೆ. ಈ ಅಕ್ಕಿ ಕೆಟ್ಟದ್ದು ಅಲ್ಲ. ಆದರೆ ಮಾರ್ಕೆಟ್ಟಿನಲ್ಲಿ ಬೇಕಾದಷ್ಟು ಅಕ್ಕಿ ದೊರೆಯುತ್ತಿರುವುದರಿಂದ ಗ್ರಾಹಕರು ಮಾರ್ಕೆಟ್ಟಿನಲ್ಲಿ ಅಕ್ಕಿ ಪಡೆಯಲು ಸವಲತ್ತು ಇದೆ. ಆದುದರಿಂದ ಅವರು ರೇಷನ್ ಅಂಗಡಿಗೆ ಕೋಆಪರೇಟಿವ್ ಸೊಸೈಟಿಗಳಿಗೆ ಹೋಗುವುದಿಲ್ಲ.

ಶ್ರೀ ಎಂ ಎಸ್. ಕೃಷ್ಣನ್ :—ಮಲ್ಲೇಶ್ವರದ ಕೋಆಪರೇಟಿವ್ ಸೊಸೈಟಿಯಲ್ಲಿ ಸಪ್ಲೈಮಾಡುವ ಅಕ್ಕಿ ಮುಕ್ಕಾಲು ಪಾಲು ನುಚ್ಚು ಇರುವುದಲ್ಲದೆ ಕಲ್ಲು ಇರುತ್ತವೆ. ಅದೇ ಬೆಲೆಗೆ ಹಸನಾದ ಅಕ್ಕಿ ಮಲ್ಲೇಶ್ವರದಲ್ಲಿರುವ ಅಹಮ್ಮದ್ ಅಂಡ್ ಕಂಪನಿ ಅಂಗಡಿಯಲ್ಲಿ ದೊರೆಯುತ್ತದೆ. ಒಂದೇ ಬೆಲೆಯ ಹಸನಾದ ಅಕ್ಕಿ ಆ ಅಂಗಡಿಯವನಿಗೆ ಹೇಗೆ ಸಿಕ್ಕುತ್ತದೆ ? ಸೊಸೈಟಿಗಳಿಗೆ ಹೇಗೆ ಸಿಕ್ಕುವುದಿಲ್ಲ ? ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀಮಾನ್ ಕೃಷ್ಣಸ್ವಾಮಿರವರು ಹೇಳುತ್ತಿದ್ದಾರೆ ನಮ್ಮ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಒಳ್ಳೆಯ ಅಕ್ಕಿ ಸಿಕ್ಕುತ್ತಿಲ್ಲ, ಹೊರಗಡೆಯಲ್ಲಿ ಒಳ್ಳೆ ಅಕ್ಕಿ ಸಿಕ್ಕುತ್ತಿದೆ ಎಂದು ಅದಕ್ಕೂ ಕೂಡ ಸರ್ಕಾರದವರೇ ಕಾರಣ ಎಂದು ಹೇಳುತ್ತೇನೆ. ಏಕೆಂದರೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಲ್ಲಿ ನೀರಾವರಿ ಯೋಜನೆಗಳನ್ನು ಸ್ಥಾಪಿಸಿದ್ದರಿಂದ ನಮ್ಮ ಮಾರುಕಟ್ಟೆಗಳಲ್ಲಿ ಈ ದಿವಸ ಸಾಕಷ್ಟು ಒಳ್ಳೆಯ ಆಹಾರಧಾನ್ಯಗಳು ಸಿಕ್ಕುತ್ತಿವೆ. ಅದೂ ಕೂಡ ಒಂದು ಸಂತೋಷದ ಸುದ್ದಿಯೇ. ಆದರೆ ಸರ್ಕಾರದವರು ಸೊಸೈಟಿಗಳಲ್ಲಿ ಮಾರತಕ್ಕ ಅಕ್ಕಿಯನ್ನು ಯಾರಿಗೂ ಬಲವಂತ ಮಾಡಿ ಕೊಂಡುಕೊಳ್ಳಿ ಎಂದು ಹೇಳುತ್ತಿಲ್ಲ. ಅದನ್ನು ಆಫ್ರಿ ಮಾರಾಟ ಮಾಡುತ್ತಿರುವುದು ಕೇವಲ ಬಡವರಿಗಾಗಿ, ಕೂಲಿ ಮಾಡತಕ್ಕ ಜನರಿಗಾಗಿ. ಆ ಪಡಿತರ ಪದ್ಧತಿಯನ್ನು ನಾವು ಶ್ರೀಮಾನ್ ಕೃಷ್ಣನ್ ಅಂಥವರಿಗೆ ಇಡಲಿಲ್ಲ. ಯಾರಿಗೆ ಹೆಚ್ಚಿನ ಸಂಬಳತ್ತು ಇಲ್ಲವೋ ಅಂಥವರಿಗಾಗಿ ಅಲ್ಲಿ ಆ ಆಹಾರಧಾನ್ಯಗಳನ್ನು ಇಡಲಾಗಿದೆ. ವೃಥಾ ಕಾರಣ

ಬೆಲೆಯನ್ನು ಹೆಚ್ಚಿಸಬೇಕೆಂಬುದು ಸರ್ಕಾರದವರ ಉದ್ದೇಶವಲ್ಲ. ಆದಷ್ಟೂ ಬೆಂಗಳೂರು ಮತ್ತು ಕೆ. ಜಿ. ಎಫ್ ಈ ಎರಡು ಕಡೆಗಳಲ್ಲಿ ಇರತಕ್ಕ ಕೂಲಿಗಾರರು ಮತ್ತು ಬಡ ಜನರಿಗೆ ಅಗ್ಗದ ದರದಲ್ಲಿ ದವಸವನ್ನು ಒದಗಿಸಲು ಆ ಸಹಕಾರ ಸಂಘಗಳಲ್ಲಿ ಮಾರಾಟಕ್ಕೆ ಇಡಲಾಗಿದೆ. ಇದು ಕೇವಲ ಬಡವರಿಗಾಗಿ ಇರತಕ್ಕ-ಪಡಿತರ ಪದ್ಧತಿ. ನಾವು ಆ ಸೊಸೈಟಿಗಳಲ್ಲಿ ಮಾರಾಟ ಮಾಡತಕ್ಕ ಬೆಲೆಗೇ ಬೇರೆ ಓಪನ್ ಮಾರ್ಕೆಟ್‌ನಲ್ಲಿ, ಕಡಿಮೆ ಬೆಲೆಗೆ ಒಳ್ಳೆಯ ಅಕ್ಕಿ ಸಿಕ್ಕುವುದಾದರೆ ಅದು ನಮಗೆ ಬಹಳ ಸಂತೋಷದ ಸುದ್ದಿ ಆದರೆ ನಾವು ಒಳ್ಳೆಯ ಧಾನ್ಯ ಕೊಡತಕ್ಕ ಬಗ್ಗೆ ನಮ್ಮ ಪ್ರಕ್ಯೂರ್‌ಮೆಂಟ್ ದರವನ್ನು ಸ್ವಲ್ಪ ಹೆಚ್ಚಿಸಿದರೆ ತಾವುಗಳು ಯಾರು ಕೋಪ ಮಾಡಿಕೊಳ್ಳಬಾರದು—ಆದಕ್ಕಾಗಿ ಪ್ರೊಸೆಷನ್ ಸ್ಟೆಪ್ಸ್ ಇತ್ಯಾದಿಗಳನ್ನು ನಡೆಸಬಾರದೆಂದು ಕೇಳಿಕೊಳ್ಳುತ್ತೇನೆ, ಸಾಧ್ಯವಾದ ಮಟ್ಟಿಗೂ ಎಲ್ಲರಿಗೂ ಇನ್ನೂ ಉತ್ತಮ ದರ್ಜೆಯ ಅಕ್ಕಿಯನ್ನೇ ಕೊಡಬೇಕು ಎನ್ನುವುದು ಸರ್ಕಾರದವರ ಉದ್ದೇಶ. ಅದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ನಾಳೆ ಸರ್ಕಾರದವರು ಈ ಬೆಲೆಗಳನ್ನು ಸ್ವಲ್ಪ ಹೆಚ್ಚು ಮಾಡಿದರೆ ತಾವುಗಳು ಯಾರೂ ಕೋಪ ಮಾಡಿಕೊಳ್ಳಬಾರದು ಮುಂದೆ ಬರತಕ್ಕ ವರ್ಷದಲ್ಲಿ ಈ ತೊಂದರೆಗಳು ಇರಲಾರವು. ಭಗವಂತನು ಕೃಪೆ ಮಾಡಿದರೆ ಮುಂದಿನ ವರ್ಷ ಕಡಿಮೆ ದರದಲ್ಲಿ ಒಳ್ಳೆಯ ಅಕ್ಕಿಯನ್ನು ಎಲ್ಲರಿಗೂ ಒದಗುವಂತೆ ಮಾಡಬೇಕೆಂಬುದು ನಮ್ಮ ಉದ್ದೇಶ ಆದರೆ ನಾವು ಯಾವತ್ತೂ ಆಕಾಶದತ್ತ ತಲೆಯೆತ್ತಿ ಕೊಂಡಿರತಕ್ಕ ಜನ ಆದ್ದರಿಂದ ಮುಂದಿನ ವರ್ಷದಲ್ಲಿ ಭಗವಂತನು ನಮ್ಮ ರಾಜ್ಯದಲ್ಲಿ ಒಳ್ಳೆಯ ಮಳೆ ಬೆಳೆಗಳನ್ನು ಉಂಟು ಮಾಡಲೆಂದು ನಾವೆಲ್ಲರೂ ಪ್ರಾರ್ಥಿ-ಸೋಣ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri. H. SIDDAVEERAPPA : Before the Minister for Co-operation begins his reply, I would like to have 10 minutes for asking clarification

Mr. SPEAKER : I shall put the Demand sexactly at 6pm.

Sri H. SIDDAVEERAPPA : In tl at case, I would like to have one information : whether he is going to hold the Regulated Market Committee Elections in time. as we have passed the enactment That is a very important question.

ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಶಾಖೆಯ ಮಂತ್ರಿಗಳು).—

ಮಾನ್ಯ ಸಭಾಪತಿಗಳೇ, ಶ್ರೀಮಾನ್ ಕೆ.ಎಚ್. ಪಾಟೀಲರು ಮತ್ತು ಇತರ ಜನ ಸದಸ್ಯರುಗಳು ಈ ಡಿಮ್ಯಾಂಡ್ ಮೇಲೆ ಚೆನ್ನಾಗಿ ಮಾತನಾಡಿ ಒಳ್ಳೆಯ ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರು ಮಾತನಾಡುವಾಗ ನಾನು ಹೇಗೆ ಕೇಳಿದೆನೋ ಅದೇರೀತಿ ಅವರುಗಳು ಸಹ ನನ್ನ ಭಾಷಣವನ್ನು ಕೇಳಬೇಕು ಎಂದು ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ನನಗೆ ಇದರ ಮೇಲೆ ಮಾತನಾಡಲು ೧-೧ ೧/೨ ಗಂಟೆತ್ರಾಸು ಬೇಕಾಗಿತ್ತು ಈಗ ೩೦ ಮಿನಿಟ್ ಮಾತ್ರ ಉಳಿದಿವೆ. ನಾನು ಇದರ ಮೇಲೆ ಮಾತನಾಡಬೇಕಾದ್ದು ಬಹಳ ಮಹತ್ವದ ವಿಷಯ ಇದೆ. ಗ್ರಾಮೀಣ ಅಭಿವೃದ್ಧಿ ಸಲುವಾಗಿ ಸಹಕಾರಿ ಆರ್ಥಿಕ ಪ್ರಗತಿ ಸಲುವಾಗಿ ಬೇಕಾದಷ್ಟು ಯೋಜನೆಗಳು ಇದ್ದುದನ್ನು ಮಾನ್ಯ ಸದಸ್ಯರೆ ಪ್ರಸ್ತಾಪಮಾಡಿಲ್ಲಿ. ಇದರ ಬಗ್ಗೆ ಶ್ರೀಮಾನ್ ಸಿದ್ದವೀರಪ್ಪನವರು ಏನಾದರೂ ಹೇಳುತ್ತಿದ್ದರೆ ಅದನ್ನು ನಾನು ಕುತೂಹಲದಿಂದ ಕೇಳುತ್ತಿದ್ದೆ. ಈಗ ಮಾನ್ಯ ಸದಸ್ಯರು ಏನು ಸೂಚನೆಗಳನ್ನು ಕೊಟ್ಟಿದ್ದಾರೋ ಅದನ್ನೆಲ್ಲಾ ಸರ್ಕಾರ ಸಹಾನುಭೂತಿಯಿಂದ ನೋಡುತ್ತದೆ ಎಂದು ಹೇಳುತ್ತೇನೆ.

ಈಗ ಮಾನ್ಯ ಕೆ. ಎಚ್. ಪಾಟೀಲರ ಮೇಲೆ ಸರ್ಕಾರ ಏನು ಉಗ್ರಕ್ರಮ ತೆಗೆದುಕೊಂಡಿದೆ ಅದರ ಸಲುವಾಗಿ ಅವರು ಟೀಕೆ ಮಾಡಿದ್ದಾರೆ. ಇದು ನಿರಾಧಾರವಾಗಿದೆ ಎಂದು ಹೇಳುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲರು ನಮ್ಮ ರಾಜ್ಯದಲ್ಲಿರುವ ಸಹಕಾರ ಅಭಿವೃದ್ಧಿ ಬಗ್ಗೆ ಕಟ್ಟಡಾಗಿ ಮತ್ತು ಕಟುವಾಗಿ ಟೀಕೆ ಮಾಡಿದ್ದಾರೆ ಆ ಬಗ್ಗೆ ನನ್ನ ಅಭಿಪ್ರಾಯ ಈಗ ಹೇಳುವುದಿಲ್ಲ. ನಾನು ಹೇಳಿದರೆ it is painting lilly which is a superflous adornment ಎಂದು ಹೇಳಬಹುದು. ಅಖಿಂಡ ಹಿಂದೂಸ್ಥಾನ ದೊಳಗೆ ಅಗ್ರ ಗಣ್ಯ ವ್ಯಕ್ತಿಗಳಾದ ಶ್ರೀ ಡಿ. ಆರ್. ಗಾಡ್ಗಿಲ್‌ರವರು ಈವೊತ್ತು ಅಖಿಲಭಾರತದ ಹಿಂದೂ ಸ್ಥಾನ್ ಯೋಜನೆಗಳ ಚುಕ್ಕಾಣಿ ಹಿಡಿದಿದ್ದಾರೆ. ಅಂಥವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಎಸ್. ಶಿವಪ್ಪ.—ಆನ್ ಎಪಾಯಿಂಟ್ ಆಫ್ ಆರ್ಡರ್. ನಾಡಗೌಡರೇ ನೀವು ಮಾತಾನಾಡುವ ಕನ್ನಡ ನಮಗೆ ಗೊತ್ತಾಗುವುದಿಲ್ಲ. ಕನ್ನಡಕ್ಕೆ ದ್ರೋಹ ಮಾಡಬೇಡಿ. ದಯವಿಟ್ಟು ಇಂಗ್ಲೀಷನಲ್ಲೇ ಮಾತನಾಡಿದರೆ ಕ್ಷೇಮ.

ಶ್ರೀ ಎಂ. ಪಿ. ನಾಡಗೌಡ.—ನಮ್ಮ ಗ್ರಾಮೀಣ್ಯದ ಕನ್ನಡ ಭಾಷೆಯನ್ನು ಉಪಯೋಗ ಮಾಡುತ್ತೇವೆ ಆದರೆ ನೀವು ಇಂಗ್ಲೀಷ್ ಉಪಯೋಗ ಮಾಡುತ್ತೀರಿ.

Organisaional framework for the implement ation of Social objective ಬಗ್ಗೆ Study group of the National Council ಅವರು ಒಂದು ವರದಿ ಕೊಟ್ಟಿದ್ದಾರೆ. ಅದರ ಅಧ್ಯಕ್ಷರು Sri Gadgil ಮತ್ತು Sri Choksi a d Sri T. A. Pai (Syndicate Bank) ಇವರು ಅದರ ಸದಸ್ಯರು ೧೯೬೯ರಲ್ಲಿ ಆ ರಿಪೋರ್ಟನ್ನು ಕೊಟ್ಟಿದ್ದಾರೆ, ಅದು ಈ ರೀತಿ ಇದೆ.

"Statement 23 gives selected indicators of the status of the Co-operative movement in States. In assessing the overall progress of the co-operative movement in various states, we should not go by indiv dual indicators, but take into account the totality of the picture. It will be found that the over-all progress made by Gujarath, Maharashtra, Punjab and Mysore is generally more satisfactory as compare to the position in other States in India. The progress in Assam, Bihar Rajasthan, Orissa and Jammu and Kashmir is relatively unsatisfactory Some States like Andhra Pradesh, Hariyana, Kerala and Madhya Pradesh may be considered as coming under. .....

Sri H. SIDDAVEERAPPA —On a p int of order. The Hon. Minister is expected to state what is happening now and give the latest information as has been published in the leader of Indian Express only yesterday or the day before yesterday where it is stated that the Minister for Co-operation in Maharashtra has given his views about his own Department in Maharashtra and that is more anthentic than what is given in this book.

Mr. SPEAKER.—Is it a point of order. I think the hon. Member is only intervening.

ಶ್ರೀ ಪಿ. ಎಂ. ನಾಡಗೌಡ.—ಶ್ರೀಮಾನ್ ಕೆ. ಎಚ್. ಪಾಟೀಲರು ಏನು ಟೀಕೆ ಮಾಡಿದ್ದಾರೋ ಅದನ್ನು ಹೇಳಿಬಿಟ್ಟು ಮುಂದೆ ಹೋಗುತ್ತೇನೆ.

ಶ್ರೀಮಾನ್ ಕೆ. ಎಚ್. ಪಾಟೀಲರು ನಿರಾಧಾರವಾದ ಟೀಕೆ ಮಾಡಿದ್ದಾರೆ. ಅದರ ಬಗ್ಗೆ ನನ್ನ ಅಭಿಪ್ರಾಯವನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇನೆ He is seized of the matter. ಬಸವೇಶ್ವರರ ವಿದ್ಯಾವರ್ಧಕ ಸಂಘದಲ್ಲಿ ಆಡ್ಮಿನಿಸ್ಟ್ರೇಟರ್ ಆಗಿ ೩ ವರ್ಷದಿಂದ ಇದ್ದೇನೆ. ಬಸವೇಶ್ವರರ ವಿದ್ಯಾವರ್ಧಕ ಸಂಘ ೫೫ ವರ್ಷಗಳಿಂದಲೂ ಇದೆ, ಅದು ೧೫೫-೨೦ ಸಂಸ್ಥೆಗಳನ್ನು ರನ್ ಮಾಡುತ್ತಿದೆ. ಅದರ ಲೆಕ್ಕಪತ್ರಗಳೆಲ್ಲಾ ಆಡಿಟ್ ಆಗುತ್ತಾ ಇವೆ. ನಾವು ನಿಜಲಿಂಗಪ್ಪನವರ ಅನುಯಾಯಿಗಳೆಂದ ಶ್ರೀಮಾನ್ ಕೆ. ಎಚ್. ಪಾಟೀಲರವರು ಟೀಕೆ ಮಾಡುತ್ತಿದ್ದಾರೆ.

ಇನ್ನೊಂದು ವಿಷಯ ಏನೆಂದರೆ ಶ್ರೀಮಾನ್ ಕೆ. ಎಚ್. ಪಾಟೀಲರವರ ಸೊಸೈಟಿ ಬಗ್ಗೆ ನಾವು ಉಗ್ರಮವಾದ ಕ್ರಮ ತೆಗೆದುಕೊಂಡಿದ್ದೇವೆ ಎಂದು ನಮ್ಮ ಮೇಲೆ ಬೀಳುತ್ತಿದ್ದಾರೆ. ವೆಸ್ಟೆಡ್ ಇಂಟರೆಸ್ಟ್ ಏನಾದರೂ ಇದ್ದರೆ ಅದು ಶ್ರೀಮಾನ್ ಕೆ. ಎಚ್. ಪಾಟೀಲರ ಮನಾಪಲಿ. ಅವರು ಎಲ್ಲಾ ಸಂಸ್ಥೆಗಳಿಂದ

೩೫-೪೦ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಸ್ವಂತ ಪ್ರಾಪರ್ಟಿ ಮಾಡಿಕೊಂಡು ಉಪಯೋಗ ಮಾಡುತ್ತಾ ಇದ್ದಾರೆ. ಅದನು ತಡೆ ಹಾಕಿದ ಬಗ್ಗೆ ನನ್ನ ಮೇಲೆ ಉಗ್ರವಾದ ಟೀಕೆ ಮಾಡುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ :—ಅವರ ಮನೆಗೆ ಹಾಕಿದ್ದಾರೇನು? ಅದನ್ನು ರುಜುವಾತು ಮಾಡಿ ಕೊಟ್ಟರೆ ಅವರು ಈಪೊತ್ತೇ ಬಿಡುವುದಕ್ಕೆ ಸಿದ್ಧರಾಗಿದ್ದಾರೆ. ಏತಕ್ಕೆ ಸುಳ್ಳು ಹೇಳುತ್ತೀರಾ?

Sri K. H. Patil :— I request the Chair that I shall have to be given an opportunity for personal explanation.

ಶ್ರೀ ಪಿ. ಎಂ. ನಾಡಗೌಡ. —ಅವರು ಮನೆಯ ಸ್ವಂತ ದುಡ್ಡಿನಹಾಗೆ ಉಪಯೋಗಿಸಿದ್ದಾರೆ.

Sri H. Siddaveerappa :—He has made a very serious allegation.

ಶ್ರೀ ಪಿ. ಎಂ. ನಾಡಗೌಡ :—ಅವರು ಏನು ಆರೋಪ ಮಾಡಿದ್ದಾರೆ ಅದರ ಬಗ್ಗೆ ಈಗ ನಾನು ಮಾತ ನಾಡುತ್ತಿದ್ದೇನೆ.

Sri B. P. Gangadhar :—Let him say what he wants to say and let us understand what he has to say.

ಶ್ರೀ ಪಿ. ಎಂ. ನಾಡಗೌಡ :—ನನಗೆ ಗೊತ್ತಿದ್ದ ಹಾಗೆ ಶ್ರೀಮಾನ್ ಕೆ. ಹೆಚ್. ಪಾಟೀಲರು ಇದ್ದಂಥ ಗದಗ್ ಸಹಕಾರ ಸಂಘದಲ್ಲಿ ಫರ್ಟಿಲೈಸರ್ಸ್ ವ್ಯವಹಾರ ಮಾಡಿದ್ದು ಹಣ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಅದನ್ನು ಮಾರ್ಕೆಟಿಂಗ್ ಸೊಸೈಟಿಯವರು ಕೊಟ್ಟಿಲ್ಲ. ೧೦ ಲಕ್ಷ ರೂಪಾಯಿ ತನಕ ರೊಕ್ಕ ಇದೆ. ಅವರು ಅಡ್ಮಿಟ್ ಮಾಡಿದ್ದಾರೆ. ಲೋನ್ ಉಪಯೋಗ ಮಾಡಿದ್ದಾರೆ.

Sri K. H. Patil :—Let me caution the Chair that he is speaking about a matter which is pending in the High Court. The High Court has to give a verdict. Knowing that full well he is making this statement. I am bringing a privilege motion against him.

Mr. Speaker :—Unless he yields the honourable member cannot intervene.

Sri K. H. Patil :— I only want to bring this to his notice. Let him say whatever he has to say supported by document. He is trying to mislead the House.

ಶ್ರೀ ಪಿ. ಎಂ. ನಾಡಗೌಡ :—ನನ್ನ ಕಡೆ ಡಾಕ್ಯುಮೆಂಟ್ ಇದೆ. ನಮಗೆ ಎಷ್ಟು ರೊಕ್ಕ ಕೊಡಬೇಕು ಎಂದು ಹೇಳುತ್ತಿದ್ದೇನೆ ಮತ್ತು ಕಾಟನ್ ಸೇಲ್ಸ್ ಸೊಸೈಟಿಗೆ ೨೫ ಲಕ್ಷ ರೂಪಾಯಿಗಳ ಮಧ್ಯವರ್ತಿ ಸಾಲ ತೆಗೆದುಕೊಂಡು ಎರಡನೆಯವರ ಹೆಸರಿಗೆ ಖರ್ಚು ಹಾಕಿ ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಈ ಎಲ್ಲ ವ್ಯವಹಾರಕ್ಕೆ ಸರ್ಕಾರದ ರೊಕ್ಕ ಉಪಯೋಗ ಮಾಡಿದ್ದಾರೆ. ಸರ್ಕಾರ ಉಗ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಾಗ ಅವರು ಇಲ್ಲಸಲ್ಲದ ಮಾತುಗಳನ್ನು ಹೇಳುತ್ತಿದ್ದಾರೆ.

Sri G. Chandrakanth :— If Sri K. H. Patil has really done that, why no action was taken against him ?

Sri P. M. Nadgouda :— We have taken action.

Sri H. Siddaveerappa :—The matter is pending in the High Court. Let the Honourable Minister understand that what he is speaking is on a matter which is subjudice.

(*Several members Rose*)

Mr Speaker:—The hon'ble members will please resume their seats. When speaches are made, they should be heard patiently. If there are any grievances, there are many other occations to bring them to the notice of the Minister or the House. But if there are interruptions at every second no progress can possibly be made. So unless the Minister yields to the request of any member, there should not be any interruption.

Sri S. Shivappa :— Sir, I feel that the Minister for Co-operation has got so much of matter to state in reply. I request you at this stage itself to extend the time by at least half an hour or one hour.

ಶ್ರೀ ಎಸ್. ವಿ ಅಗ್ನಿಹೋತ್ರಿ :—ಸ್ವಾಮಿ, ೬ಗಂಟೆಗಳ ಮೇಲೆ ಒಂದು ನಿಮಿಷ ಕೂಡ ಬೆಳಸಲಿಕ್ಕೆ ಆಗುವುದಿಲ್ಲ. ನೀವೇ ಈ ನಿರ್ಣಯವನ್ನು ಮೊದಲು ಕೊಟ್ಟಿದ್ದೀರಿ. ಆದುದರಿಂದ ದಯಮಾಡಿ ೬ ಗಂಟೆಗೆ ಮುಗಿಸಬೇಕು ಎಂದು ಹೇಳುತ್ತೇನೆ.

Sri S. Shivappa :— If you do not permit that, we are not prepared to sit here because the Honourable Minister Nadgouda has said that this is a very important matter and he has a lot of material to reply.

Mr. Speaker :— It has been the consensus of the entire House that the house should adjourn at 6 o' Clock and this has been decided unanimously by the whole House. So unless the entire House agrees to extend the time I cannot agree to it.

ಶ್ರೀ ಪಿ. ಎಂ. ನಾಡಗೌಡ :—ನಾನು ಶ್ರೀಮಾನ್ ಕೆ. ಎಚ್. ಪಾಟೀಲರ ಬಗ್ಗೆ ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಹೇಳಿದ್ದು ಖರೆ ಇದೆ. ಅದು ಮಿಸ್‌ಅಪ್ರೊಪ್ರಿಯೇಷನ್ ಕೇಸ್ ಆಗಿ ಈಗ ಸರ್ಕಾರದ ಮುಂದೆ ಇದೆ. ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆದರೂ ಕೂಡ ನನ್ನ ಮೇಲೆ ಮತ್ತು ಸರ್ಕಾರದ ಮೇಲೆ ಸುಳ್ಳಿನ ಒಟ್ಟಿಯನ್ನು ಹೊರಿಸುವುದಕ್ಕೆ ಅವರು ಹೊರಟಿದ್ದಾರೆ. ಅದು ಸರಿಯಲ್ಲ. ಮಿಸ್‌ಅಪ್ರೊಪ್ರಿಯೇಷನ್ ಕೇಸ್ ವಿಚಾರದಲ್ಲಿ ಶ್ರೀಮಾನ್ ಪಾಟೀಲರೇ ಅಲ್ಲ. ಇನ್ನು ಯಾರೇ ಆಗಿರಲಿ, ಅಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಅಂಥವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ದನಿದ್ದೇನೆ ಎಂಬ ಮಾತನ್ನು ನಾನು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ.

ಇನ್ನು ನಾನು ಕೆಲವು ಮಹತ್ವದ ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಜ್ಯದಲ್ಲಿ ಸಹಕಾರಿ ಚಳುವಳಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ಡಿಮ್ಯಾಂಡ್‌ಗಳ ಬಗೆ ನಾನು ಕಳೆದ ನಾಲ್ಕು ವರ್ಷಗಳಿಂದಲೂ ಕೂಡ ಉತ್ತರ ಕೊಡುತ್ತಿದ್ದೇನೆ. ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಮತ್ತು ಸಹಕಾರಿ ಮಂತ್ರಿಗಳ ಸಮ್ಮೇಳನದಲ್ಲಿ ಬಂದಂಥ ಅಭಿಪ್ರಾಯಗಳನ್ನು ಮತ್ತು ಈ ಮನೆಯ ಸದಸ್ಯರ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಆ ಬಗ್ಗೆ ಒಂದು ಕಾಯಿದೆ ಮಾಡಿ ಈಗಾಗಲೇ ಸಭೆಯ ಮುಂದೆ ಮಂಡಿಸಲಾಗಿದೆ. ಇದಕ್ಕಾಗಿ ನೇಮಿಸಲಾಗಿದ್ದ ಬಿ. ಎಲ್. ಗೌಡ ಇವರ ಸಮಿತಿಯವರು ಏನು

ಶಿಪಾರಸ್ ಮಾಡಿದ್ದರು ಅದರ ಆಧಾರದ ಮೇಲೆ ಒಂದು ಕಾಯಿದೆಯನ್ನು ಸಿದ್ಧಪಡಿಸಿ ಸಭೆಯ ಮುಂದೆ ಇಡಲಾಗಿದೆ. ಆ ಕಾಯಿದೆಯ ಮುಖ್ಯ ಅಂಶವೆಂದರೆ ಸಹಕಾರಿ ಸಂಸ್ಥೆಗಳಿಂದ ಪಟ್ಟ ಭದ್ರ ಹಿತಗಳನು ತೊಡೆದುಹಾಕುವುದು, ಸೊಸೈಟಿಗಳನ್ನು ಕಡಿಮೆ ಮಾಡುವುದು, ಮತ್ತು ಸಹಕಾರಿ ಕ್ಷೇತ್ರದಲ್ಲಿ ಆಗ್ಗ ತ್ತಿರುವ ಅವ್ಯವಹಾರಗಳನ್ನು ಕಡಿಮೆ ಮಾಡುವುದೇ ಆಗಿದೆ. ಇವತ್ತು ಷಾರ್ಟ್ ಟರ್ಮ್ ಲೋನ್, ಮೀಡಿಯಂ ಟರ್ಮ್ ಲೋನ್ ಮತ್ತು ಲಾಂಗ್ ಟರ್ಮ್ ಲೋನ್‌ಗಳನ್ನು ರಾಜ್ಯದ ೭ ಜಿಲ್ಲೆಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಕೊಡಿಸುವುವಕ್ಕೆ ವ್ಯವಸ್ಥೆ ಮಾಡಿದ್ದೇವೆ. ಯಾವ ಭಾಗಗಳಲ್ಲಿ ಸಹಕಾರಿ ಬ್ಯಾಂಕ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿರಲಿಲ್ಲವೊ ಅಂತಹ ಕಡೆಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇವತ್ತು ಈ ಬ್ಯಾಂಕ್‌ಗಳು ೬೦೦ ಸೊಸೈಟಿಗಳ ಮೂಲಕ ೫ ಕೋಟಿ ರೂಪಾಯಿಗಳ ವರೆಗೆ ಸಾಲವನ್ನು ರೈತರಿಗೆ ಕೊಟ್ಟಿವೆ. ರೈತರಿಗೆ ಸಕಾಲದಲ್ಲಿ ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಈ ವ್ಯವಸ್ಥೆ ಮಾಡಿದ್ದೇವೆ. ಇವತ್ತು ರೈತರಿಗೆ ಎಷ್ಟೇ ಸಹಾಯ ಮಾಡುತ್ತಿದ್ದರೂ ಕೂಡ ೧೦೦ಕ್ಕೆ ೩೦ ರಷ್ಟು ಸಹಾಯ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅನೇಕ ರೈತರು ದಳ್ಳಾಳಿಗಳ ಕಡೆ ಸಾಲಕ್ಕಾಗಿ ಹೋಗುತ್ತಿದ್ದಾರೆ. ಅದನ್ನು ತಡೆಯುವುದಕ್ಕೆ ನಾವು ಅದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಒಂದು ವರ್ಷದೊಳಗೆ ೫೦ ಕೋಟಿ ರೂಪಾಯಿಗಳನ್ನು ರೈತರಿಗೆ ಸಾಲವಾಗಿ ಕೊಟ್ಟಿದ್ದೇವೆ. ಇಷ್ಟು ಮಾಡಿದದ್ದರೂ ಕೂಡ ಏನನ್ನೂ ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿರುತ್ತಾರೆ. ಅದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿಯೇ ಇಷ್ಟೊಂದು ಹಣವನ್ನು ರೈತರಿಗೆ ಷಾರ್ಟ್ ಟರ್ಮ್, ಮೀಡಿಯಂ ಟರ್ಮ್ ಮತ್ತು ಲಾಂಗ್ ಟರ್ಮ್ ಮೂಲಕ ಲೋನ್‌ಗಳನ್ನು ಕೊಟ್ಟಿರುವುದು. ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ ೩೨ ಸಾವಿರ ಬಾವಿಗಳನ್ನು ತೋಡಲು ೧೮ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಈಗಾಗಲೇ ೨೧ ಸಾವಿರ ಬಾವಿಗಳ ಕೆಲಸ ಮುಗಿದಿದೆ. ಬಡ ರೈತರಿಗೆ ಕೊಡುವ ಸಾಲ ಬಹಳ ಮಹತ್ವ ಇದೆ. ಇವತ್ತು ಸಾವುಕಾರ ರಾಜ್ಯ ಮಾಡುವುದಕ್ಕೆ ನಾವು ಹೊರಟಿಲ್ಲ. ಸಹಕಾರಿ ಕ್ಷೇತ್ರದಲ್ಲಿ ಸಹಕಾರಿ ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೊಸ್ಕರವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲವನ್ನು ರೈತರಿಗೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ :—ಶ್ರೀನಿವಾಸಪುರದಲ್ಲಿ ೧೦ ಸೊಸೈಟಿಗಳ ಪೈಕಿ ೬ ಸೊಸೈಟಿಗಳು ಡೀ-ಫಂಕ್ಟ್ ಆಗಿವೆ. ಆ ಸೊಸೈಟಿಗಳನ್ನು ಮತ್ತೆ ಚೇತನಗೊಳಿಸುವುದಕ್ಕೆ ನಿಮ್ಮ ಅಧಿಕಾರಿಗಳು ಗೆಮನ ಹರಿಸುತ್ತಾರೆಯೇ ? ಅಲ್ಲಿದ್ದ ಒಬ್ಬ ಅಧಿಕಾರಿಯನ್ನು ವರ್ಗ ಮಾಡಿದ್ದರೂ ಕೂಡ ಅದನ್ನು ಕ್ಯಾನ್ಸಲ್ ಮಾಡಿ ಆ ಅಧಿಕಾರಿಯನ್ನು ಅಲ್ಲಿಯೇ ಉಳಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಕಾಮನ ಹಬ್ಬ ಮಾಡಲು ರೈತರಿಗೆ ಸಾಲ ಕೊಡಿಸಲು ವ್ಯವಸ್ಥೆ ಮಾಡುತ್ತಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ :— ಆ ಬಗ್ಗೆ ಮುಂದೆ ಹೇಳುತ್ತೇನೆ. ಒಂದು ಮಹತ್ವದ ವಿಷಯ ವೆಂದರೆ ಗ್ರಾಮಾಂತರ ಪ್ರದೇಶಗಳಿಗೆ ಪೆಡ್ಯೂಲ್ ಬ್ಯಾಂಕ್‌ಗಳನ್ನು ಬರಮಾಡಿಕೊಂಡಿದ್ದೇವೆ, ೭ ಜಿಲ್ಲೆ ಗಳಲ್ಲಿ ಮೊದಲು ರೈತರಿಗೆ ಸಾಲ ಸಿಗುವುದಕ್ಕೆ ತೊಂದರೆಯಾಗಿತ್ತು. ಈ ೭ ಜಿಲ್ಲೆಗಳಲ್ಲಿ ಪೆಡ್ಯೂಲ್ ಬ್ಯಾಂಕ್ ಗಳ ಮೂಲಕ ಸಾಲ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಸಹಕಾರಿ ಕ್ಷೇತ್ರದಲ್ಲಿ ಇವತ್ತಿನ ದಿವಸ ಮನೆ ಹೆಂಡತಿಯ ಸೊಂಟ ಮುರಿದಂತೆ ಆಗಿದೆ. ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದ ಪಾತ್ರ ಇರಲಿಲ್ಲ. ಏನಿದ್ದರೂ ಸಹಕಾರ ಸಂಘಗಳಿಗೆ ಹಣವನ್ನು ಸಾಲವಾಗಿ ಕೊಟ್ಟು ಪ್ರಜಾಸತ್ಯಾತ್ಮಕವಾದ ರೀತಿಯಲ್ಲಿ ಅದನ್ನು ರೈತರಿಗೆ ಸಾಲ ಕೊಡುವ ಮೂಲಕ ಉಪಯೋಗಿಸಿ ಎಂದು ಸರ್ಕಾರ ಹೇಳಿತ್ತು. ಸಾಮೂಹಿಕ ಕಾರ್ಯಕ್ರಮ ಕೈಕೊಳ್ಳಿ. ಚೆನ್ನಾಗಿ ಸಂಸಾರ ಮಾಡಿ ಎಂದು ಸಹಕಾರ ಸಂಘಗಳಿಗೆ ಹೇಳಲಾಗಿತ್ತು. ಆದರೆ ಇವತ್ತು ಅಲ್ಲಿ ಅವ್ಯವಹಾರಗಳು ಸಾಮೂಹಿಕವಾಗಿ ನಡೆಯುತ್ತಿದೆ. ಆ ಒಂದು ತಪ್ಪನ್ನು ಸರ್ಕಾರದ ಮೇಲೆ ಹಾಕುತ್ತಿದ್ದಾರೆ. ಆ ರೀತಿ ಸರ್ಕಾರದ ಮೇಲೆ ತಪ್ಪನ್ನು ಹೊರಿಸಬೇಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಷಾರ್ಟ್ ಟರ್ಮ್ ಲೋನ್ ಮೂಲಕ ೩೫ ಕೋಟಿ ರೂಪಾಯಿಗಳನ್ನು ಮೀಡಿಯಂ ಟರ್ಮ್ ಲೋನ್ ಮೂಲಕ ೪೦ ಕೋಟಿ ರೂಪಾಯಿ ಗಳನ್ನು ಕೊಡುತ್ತಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ :—ಅವ್ಯವಹಾರ ನಡೆದಿರುವುದರಿಂದ ಹಣವನ್ನು ಮತ್ತೆ ಕೊಡಬಾರ ದೆಂದು ರಿಜರ್ವ್ ಬ್ಯಾಂಕಿನವರು ಹೇಳಿರುವ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಪಿ. ಎಂ. ನಾಡಗೌಡ :—ನಮ್ಮ ರಾಜ್ಯದಲ್ಲಿ ನೈಸರ್ಗಿಕ ಸಂಪತ್ತು ಇದೆ. ಒಳ್ಳೆಯ ಸಂಪನ್ಮೂಲಗಳು ಇವೆ, ಮಾನವ ಶಕ್ತಿ ಇದೆ ಎಂದು ರಿಜರ್ವ್ ಬ್ಯಾಂಕಿನ ಡೆಪ್ಯೂಟಿ ಗೌರ್ನರ್ ಜನರಲ್ ಅವರು ನಮ್ಮ ಸರ್ಕಾರದ ಮನವೊಲಿಸಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲವಾಗಿ ಹಣ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ. ರಿಜರ್ವ್ ಬ್ಯಾಂಕ್‌ನವರು ಆ ರೀತಿ ಹೇಳಿಲ್ಲ. ಇನ್ನೊಂದು ಮಹತ್ವದ ವಿಷಯವೆಂದರೆ ಆಗ್ರಿಕಲ್ಚರಲ್ ರೀ-ಫೈನಾನ್ಸ್ ಕಾರ್ಪೊರೇಷನ್ ಅವರು ನಮಗೆ ಒಳ್ಳೆಯ ಸಹಾಯ ಮಾಡುತ್ತಿದ್ದಾರೆ. ಕೃಷಿ ಉತ್ಪಾದನೆಯ ಸಲುವಾಗಿ ೮೫ ಕೋಟಿ ರೂಪಾಯಿಗಳನ್ನು ಎ. ಆರ್. ಸಿ. ಅವರು ಕೊಡುವುದಕ್ಕೆ ಒಪ್ಪಿದ್ದಾರೆ.

SRI H. SIDDAVEERAPPA .—I rise to a point of order. Sir, the point of order is whether the Minister can tell untruth. Let him see what is stated in the booklet circulated to us; he is not speaking the truth. ಅವರು ಇನ್ನೂ ಹಣ ಕೊಟ್ಟಿಲ್ಲ. ನನ್ನ ಹತ್ತಿರ ವರದಿಯ ಕಾಪಿ ಇದೆ.

ಶ್ರೀ ಪಿ. ಎಂ. ನಾಡಗೌಡ:— ೮೫ ಕೋಟಿ ರೂಪಾಯಿಗಳು ಎ.ಆರ್.ಸಿ ಇಂದ ನಮಗೆ ಬರುತ್ತದೆ. ಈಗಾಗಲೇ ೧೮.೭೮ ಕೋಟಿ ರೂಪಾಯಿಗಳ ಯೋಜನೆ ಕಾರ್ಯಗತವಾಗಿದೆ. ೩೭ ಯೋಜನೆಗಳು ಎ.ಆರ್‌ಸಿ ಯಿಂದ ಅಪ್ರೂವ್ ಆಗಿ ಬರಬೇಕಾಗಿದೆ.

Sri S. SHIVAPPA:— I rise to a point of order. You were pleased to say in the later part of the discussion that ten minutes would be given for clarification. Now it is ten minutes to Six. Hardly 10 minutes are left. The Hon. Minister has not touched even one-fourth of the papers he has in his hand. Within another 10 minutes he cannot do justice to the debate. He will not be able to give full details about the pointr raised during the course of the debate. He has not yet finished hise reply. Will you fulfil your commitment ?

MR SPEAKER:— The Hon. Member's taking away the Hon. Minister's time. There is one point of order. Let the Hon. minist continue his reply for another minute.

SRI H. SIDDAVEERAPPA:— This is the fourth Budget we are seeing. At no time, had we seen such meaningless discussion.

ಶ್ರೀ ಪಿ.ಎಂ. ನಾಡಗೌಡ:— ನನ್ನ ಬಹಳಷ್ಟು ವೇಳೆಯನ್ನು ಶ್ರೀಮಾನ್ ಸಿದ್ದವೀರಪ್ಪನವರೇ ತೆಗೆದುಕೊಂಡಿದ್ದಾರೆ. ಕಮ್ಯುನಿಟಿ ಡೆವಲಪ್‌ಮೆಂಟ್ ಬಗ್ಗೆ ತಾಲ್ಲೂಕಿನಲ್ಲಿ ಒಂದೊಂದು ಯೂನಿಟ್ ಮಾಡಿ ಇದಕ್ಕೆ ಸಂಬಂಧಪಟ್ಟ ಯೋಜನೆಗಳು ನಾ ಲ್ಕನೇಯ ಪಂಚವಾರ್ಷಿಕ ಯೋಜನೆಯಲ್ಲಿ ಬಂದಿವೆ. ಇಡನ್ನು ಯಾವರೀತಿ ಬದಲಾವಣೆ ಮಾಡಬೇಕು ಎನ್ನುವುದನ್ನು ಸರ್ಕಾರದವರು ಮುಂದೆ ಯೋಚನೆ ಮಾಡುತ್ತಾರೆ. ಮಹಾತ್ಮ ಗಾಂಧೀಜಿಯವರ ಶತಾಬ್ದಿಯ ವರ್ಷದಲ್ಲಿ ೫ ಸಾವಿರ ಕುಡಿಯುವ ನೀರಿನಬಾವಿಗಳನ್ನು ಕೂವ-ಬೇಕೆಂದು ಯೊಜನೆಯನ್ನು ಹಾಕಿಕೊಂಡಿದ್ದೇವೆ. ಇದರಲ್ಲಿ ಒಂದು ಮಹತ್ವದ ಅಂಶವೇನೆಂದರೆ ವೇನೆಂದರೆ ರಾಜ್ಯದ ೨೬ ಸಾವಿರ ಗ್ರಾಮಗಳಿಗೂ ಪೂರ್ತಿಯಾಗಿ ಕುಡಿಯುವಭಾವಿಗಳನ್ನು ಒದಗಿಸಬೇಕೆಂದಿದ್ದೇವೆ ಈ ಕಾರ್ಯಕ್ರಮಕ್ಕೆ ಒಂದು ಕೋಟಿ ರೂಪಾಯಿಗಳು ಕಡಿಮೆ ಬಿದ್ದರೂ ಕೂಡ ಒದಗಿಸಿ ಕೊಡುತ್ತೇನೆ; ರಾಷ್ಟ್ರೀಯನೀರು ಸರಬರಾಜು ಯೋಜನೆ ಪ್ರಕಾರ ಪ್ರಾಥಮಿಕ ಗ್ರಾಮ ಕೇಂದ್ರಗಳು ಮತ್ತು ಪಟ್ಟಣಗಳಿಗೆ ೬ ಕೋಟಿ ರೂಪಾಯಿಗಳನ್ನು ಒದಗಿಸಿದೆ. ೧೦೦ಕ್ಕೆ ೧೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟರೆ ಈ ಯೋಜನೆಯ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ. ೧೦೦ಕ್ಕೆ ೫೦ಜನ ಹರಿಜನ ಗಿರಿಜನ ಎಲ್ಲೆರುತ್ತಾರೆ ಅಂಥಾ ಕಡೆ ಪುಕ್ಕಟೆಯಾಗಿ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳುತ್ತೇವೆ.

ಪಂಚಾಯಿತಿಯ ಬಿಲ್ ಏನಿದೆ ಅದು ಇನ್ನು ೪-೫ ದಿವಸಗಳಲ್ಲಿ ಈ ಸಭೆಯಮುಂದೆ ಬರುತ್ತದೆ. ಪ್ರಜಾಸತ್ತಾತ್ಮಕವಾದ ರಾಜ್ಯ ಉಳಿಯಬೇಕಾದರೆ ಅಧಿಕಾರ ವಿಕೇಂದ್ರೀಕರಣವಾಗಬೇಕು. ಪಂಚಾಯಿತಿಗಳಿಗೆ ತಾಲ್ಲೂಕುಅಭಿವೃದ್ಧಿ ಮಂಡಲಿಗಳಿಗೆ ಮತ್ತು ಜಿಲ್ಲಾ ಪಲ್ಲಾ ಪರಿಷತ್ತುಗಳಿಗೆಹಣ ಮುತ್ತ ಅಧಿಕಾರ ಬಂದರೆ ಅದರಿಂದ ಜನರ ಆಶೋತ್ತರಗಳನ್ನು ಈಡೇರಿಸಿಕೊಳ್ಳ ಬಹುದು. ಪಂಚಾಯಿತಿ, ತಾಲ್ಲೂಕು ಬೋರ್ಡುಗಳ ಜೊತೆಗೆ ಜಿಲ್ಲಾ ಪರಿಷತ್ತಿನ ರಚನೆಗೆ ಅವಕಾಶ ಕೊಡುವ ಈ ಮಹತ್ವದ ವಿಧೇಯಕವನ್ನು ಕೆಲವು ರಾಜ್ಯಗಳಲ್ಲಿ ಇದನ್ನು ಅಮಲು ಬಜಾವಣೆ ಮಾಡಿರುವುದನ್ನು ನೋಡಿಕೊಂಮ ಅದರಲ್ಲಿ ತೋರಿದ ಅನುಭವದಿಂದ ಹಾಗೂ ಬಲವಂತರಾವ್ ಅವರ ಸಮತಿಯ ಶಿಫಾರಸ್ಸುಗಳನ್ನು ಗಮನಕ್ಕೆ ತೆಗೆದುಕೊಂಡು ಈ ಒಂದು ಮಸೂದೆಯನ್ನು ತಯಾರಿಸಲಾಗಿದೆ. ಇದನ್ನು ಇಷ್ಟರಲ್ಲೆ ಈ ಸಭೆಯ ಮುಂದೆ ತರುತೇವೆ. ಈ ಸಂಸ್ಥೆಗಳೂ ಅಸ್ತಿತ್ವಕ್ಕೆ ಬಂದಮೇಲೆ ಇವುಗಳಿಗೆ ಒಂದು ಹೆಚ್ಚಿನ ಅಧಿಕಾರ ಬರುತ್ತದೆ. ಇಷ್ಟು ಹೇಳಿ ನಾನು ಒಂದು ನಿಸ್ಪೃಹವಾಗಿ ಹೇಳುತ್ತೇನೆ, ನಿಸ್ಪೃಹವಾಗಿ ಕೆಲಸ ಮಾಡುತ್ತಿರುವವರ ಮೇಲೆ ಏನಾದರೂ ಇಲ್ಲದ ಸಲ್ಲದ ಆಪಾದನೆಯನ್ನು ಯಾರು ಮಾಡುತ್ತಾರೆಯೋ ಅವರ ವಂಶನಿರ್ವಂಶವಾಗುತ್ತದೆ ಎಂದು ಹೇಳುತ್ತೇನೆ. ಇವೊತ್ತು ಈ ಸರಕಾರ ಬೆಂಕಿಯ ಒಳಗಡೆ ಹೋಗುತ್ತದೆ. ಏನಾದರೂ ಅವ್ಯವಹಾರ ನಡೆದಿದ್ದರೆ ಸರ್ಕಾರ ಉಳಿಯುತ್ತಾ ಇರಲಿಲ್ಲ. ಇವೊತ್ತು ನಾವು ಸತ್ಯದಿಂದ ನಡೆದುಕೊಳ್ಳುತ್ತಿದ್ದೇವೆ ಈ ಸತ್ಯದಲ್ಲಿ ಜನ ನಮ್ಮ ಹಿಂದೆ ಇದ್ದಾರೆ ಹೀಗಿರುವಾಗ ನಮ್ಮನ್ನು ಹೊರಗೆ ಹಾಕಲು ಹರಿಹರ ಬ್ರಹ್ಮ ಬಂದರೂ ಸಾಧ್ಯವಿಲ್ಲ. ಪ್ರಜಾರಾಜ್ಯ ಚಿರಾಯುವಾಗಿ ಪ್ರಗತಿಯನ್ನು ಹೊಂದಲಿ ಎಂದು ಹೇಳಿ ಈ ನಮ್ಮಖಾತೆಗೆ ಸಂಬಂಧ ಪಟ್ಟಂತಹ ಬೇಡಿಕೆಗಳನ್ನು ಮಾನ್ಯ ಸದಸ್ಯರು ಸ್ವೀಕಾರ ಮಾಡಬೇಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ:—ನನಗೆ ಒಂದು ಪರ್ಸನಲ್ ಎಕ್ಸ್ ಪ್ಲನೇಷನ್ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇವೆಂದು ಅಧ್ಯಕ್ಷರು ಹೇಳಿ ಒಂದೆರಡು ದಿವಸಗಳಾದವು. ಈ ಮಾನ್ಯ ಮಂತ್ರಿಗಳು ನಮ್ಮ ಕೈಗೇ ಸಿಕ್ಕಲಿಲ್ಲ. ಆದ್ದರಿಂದ ನನಗೆ ಸೋಮವಾರವಾದರೂ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶವನ್ನು ಕೊಡಬೇಕು.

SRI K. H. PATIL:—I may be given an opportunity to give personal explanation.

ಶ್ರೀ ಎಸ್. ಶಿವಪ್ಪ —ಮಾನ್ಯ ಸಹಕಾರ ಸಚಿವರು ಬಹಳ ಜೋರಾಗಿ ಹೇಳಿದರು ಮತ್ತು ಯಾರು ನಿಷ್ಪಕ್ಷವಾಗಿ ವರ್ತನೆ ಮಾಡುತ್ತಾರೆಯೊ ಅಂಥವರಿಗೆ ರಕ್ಷಣೆ ಕೊಡಬೇಕೆಂದು ಗಂಭೀರವಾಗಿ ಹೇಳಿದ್ದಾರೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಒಂದು ವಿಚಾರವನ್ನು ನಾನು ಕೇಳುತ್ತೇನೆ. ಹಾಸನದಲ್ಲಿರುವ ಸಹಕಾರ ಇಲಾಖೆಯಲ್ಲಿ ನಿಷ್ಠೆಯಿಂದ ಕೆಲಸ ಮಾಡುತಿದ್ದ ಒಬ್ಬ ಅಧಿಕಾರಿಯನ್ನು, ಕೆಲವು ಪ್ರತಿಭಾನ್ವಿತ ವ್ಯಕ್ತಿಗಳು ಸೇರಿಕೊಂಡು ಬೇರೆ ಕಡೆ ವರ್ಗ ಮಾಡಿಸಿದ್ದಾರೆ. ಇವರಬಗ್ಗೆ ಸರ್ಕಾರ ಏನುಕ್ರಮ ತೆಗೆದು ಕೊಂಡಿದ್ದಾರೆ? ಈ ಬಗ್ಗೆ ನಿಷ್ಪಕ್ಷಪಾತವಾರಿ ವಿಚಾರಣೆ ಮಾಡತಕ್ಕ ಯೋಗ್ಯತೆ ನಿಮಗೆ ಇದಯೇ? ನಾಳೆ ನನ್ನ ಜೊತೆಯಲ್ಲಿ ಹಾಸನಕ್ಕೆ ಬಂದು ಈ ವಿಷಯವನ್ನು ಖುದ್ದು ಪರಿಶೀಲನೆ ಮಾಡಿ ತಕ್ಕ ಕ್ರಮತೆಗೆದುಕೊಳ್ಳುವುದಕ್ಕೆ ನೀವು ಸಿದ್ಧರಾಗಿದ್ದೀರಾ? ಮತ್ತು ಕೆಲವು ಪ್ರತಿಭಾನ್ವಿತ ವ್ಯಕ್ತಿಗಳು ಸಹಕಾರ ಸಂಘಗಳಲ್ಲಿ ಮಾಡಿರತಕ್ಕ ಅಮಾನುಷ ಕೃತ್ಯಗಳನ್ನು ಎನ್‌ಕ್ವೈರಿ ಮಾಡಿ ಸರ್ಕಾರಕ್ಕೆ ರಿಪೋರ್ಟ್ ಮಾಡಿರತಕ್ಕದ್ದು ದೊರಕೆ ಹಠಾತ್ತನೆ ಅಧಿಕಾರಿಯಂ ವರ್ಗಮಾಡಿರತಕ್ಕ ವಿಚಾರದಲ್ಲಿ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ?

ಶ್ರೀ ಪಿ. ಎಂ. ನಾಡಗೌಡ:—ಆ ವಿಷಯ ಏನಿದೆ ಎಂಬುದನ್ನು ವಿಚಾರ ಮಾಡಿ ಅದಕ್ಕನು-ಗುಣವಾಗಿ ಯಾವಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತವೆ.

ಶ್ರೀ ಎಚ್. ಸಿದ್ಧವೀರಪ್ಪ:—ಸ್ವಾಮಿ, ಅಸಿಸ್ಟೆಂಟ್ ರಿಜಿಸ್ಟ್ರಾರ ಆಯ್ಕೆಯಲ್ಲಿ ಉತ್ತರ ಕರ್ನಾಟಕದವರು ಮತ್ತು ಹಳೆಯ ಮೈಸೂರಿನವರು ಎಂದು ಭೇದಭಾವ ಮಾಡಿ ಉತ್ತರ ಕರ್ನಾಟಕದವರ ಪೈಕಿ ೧೦ ಜನಗಳನು ಇಂಟರ್‌ವ್ಯೂ ಮಾಡಿ ೮ ಜನಗಳಿಗೆ ಕೆಲಸವನ್ನು ಕೊಟ್ಟಿದ್ದಾರೆ. ಹಳೆಯ ಮೈಸೂರಿನ ೧೦ ಜನಗಳಿಗೆ ಇಂಟರ್ ಮಾಡಿ ೧೦—೨೦ ಜನಗಳಿಗೆ ಕೆಲಸವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ:—ಮಾನ್ಯಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಆ ರೀತಿ ಸರ್ಕಾರದವರು ಭೇದಭಾವ ಮಾಡುವುದಿಲ್ಲ.

MR. SPEAKER:—The question is:-

"That the respective sums not exceeding the amounts mentioned in the Demand Nos. 21, 23, 25, 15 and 53 be granted to the Government to defray the charges which will come in course of payment during the financial year for the period ending with 31st March 1971.

As ordered by the chair the motion for Demands for grants as adopted by the House are reproduced below.

The motion was adopted.

DEMAND NO. 21.—RURAL DEVELOPMENT

32. Rural Development.

"That a sum not exceeding Rs. 2,29,42,000 be granted to the Government to defray the charges which will come in course of payment during the financial year for the period ending 31st day of March 1974, in respect of 'Rural Development'.".

DEMAND NO. 23.—CO-OPERATION

34. Co-operation.

"That a sum not exceeding Rs. 3,86,18,000 be granted to the Government to defray the charges which will come in course of payment during the financial year for the period ending 31st day of March 1971, in respect of 'Co-oporation'.".

DEMAND NO. 25.—COMMUNITY DEVELOPMENT, ETC.

37. Community Development Project, National Extension Service and Local Development Works

"That a sum not exceeding Rs. 3,00,35,000 be granted to the Government to defray the charges which will come in course of payment during the finacial year for the period ending 31st day of March 1971, in respect of 'Community Development Projects, National Extension Service and Local Development Works'.".

DEMAND No. 15.—MISCELLANEOUS DEPARTMENTS

26. Miscellaneous Department.

"That a sum not exceeding Rs. 2,39,08,000 be granted to the Government to defray the charges which will come in course of payment during the financial year for the period ending 31st day of March 1971, in respect of 'Miscellaneous Department'.".

DEMAND No. 53.—CAPITAL OUTLAY ON SCHEMES OF GOVERNMENT TRADING.

124. Capital Outlay on Schemes of Government Trading.

"That a sum not exceeding Rs. 33,16,67,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Schemes of Government Trading'.".

Mr. Speaker: Now the House will raise and meet tomorrow at 8-30A.M.

---

the House adjourned at two minutes past Six of the clock to meet again at Thirty minutes past Eight of the Clock on Saturday the 21st March 1970.

WD 14742—GPB—520—28-8-1970